ಬೆಲೆ: ಎರಡು ಆಣೆ

ಕರ್ಮವೀರ

ವರ್ಗಣಿ ದರ
(ಅಂಚೆವೆಚ್ಚ ಸೇರಿ)
ವರ್ಷಕ್ಕೆ ರೂ. ೬-೪-೦
೬ ತಿಂಗಳಿಗೆ ,, ೩-೪-೦
೩ ತಿಂಗಳಿಗೆ ,, ೧-೧೨-೦
ವ್ಹಿ. ಪಿ. ಮೂಲಕ ತರಿಸಿಕೊಂಡಲ್ಲಿ ೫ ಆಣೆ ಹೆಚ್ಚಿಗೆ ಬೀಳುವದು.

KARMAVEER
WEEKLY
HUBLI
JULY 15
1946

ಸಂಪಾದಕರು : ಹ. ರಾ. ಪುರೋಹಿತ, ಎಂ. ಎ.] ಅಖಿಲ ಕರ್ನಾಟಕದಲ್ಲಿ ಅತ್ಯಂತ ಜನಪ್ರಿಯ ವಾರಪತ್ರಿಕೆ [Editor : H. R. Purohit, M. A.

ಸಂಪುಟ ೧೮] ಹುಬ್ಬಳ್ಳಿ ಸೋಮವಾರ ತಾರೀಖು ೧೫ — ೭ — ೧೯೪೬ [ಸಂಚಿಕೆ ೧೫

ಹಿಂದೀ ಸಶಸ್ತ್ರ ಬಲಗಳ ಪುನರ್ಘಟನೆ

ವಿದೇಶೀ ಅಧಿಕಾರಿಗಳನ್ನು ಆದಷ್ಟು ಬೇಗ ತೆಗೆದು ಹಾಕಬೇಕು : ಕ್ರಾಂತಿಕಾರಿ ಬದಲಾವಣೆಗಳ ಅವಶ್ಯಕತೆ

............ಅರ್ಝಾದ ಹಿಂದ ಸೈನ್ಯದ ಕರ್ನಲ ಸಹಗಲರಿಂದ............

ಕಟ್ಟುಕತೆ ಬಯಲಾಯಿತು

ಕಳೆದ ಎರಡನೆ ಮಹಾಯುದ್ಧದ ಕಾಲಕ್ಕೆ ಹಿಂದೀ ಸೈನ್ಯವನ್ನು ವೇಗವಾಗಿ ಬೆಳೆಸಬೇಕಾಯಿತು. ಪರಿಸ್ಥಿತಿಯ ಒತ್ತಡವೇ ಹಾಗಿತ್ತು. ಸೈನ್ಯದ ಶಾಂತಿಕಾಲದ ಧೋರಣೆಯಲ್ಲಿಯೂ ತೀವ್ರವಾದ ಬದಲಾವಣೆಗಳನ್ನು ಮಾಡಬೇಕಾಗಿ ಬಂತು.

ಮೊದಲನೆಯದಾಗಿ, ''ಕ್ಷತ್ರಿಯ'' ಮತ್ತು ''ಅಕ್ಷತ್ರಿಯ'' ಜನಾಂಗಗಳ ಭೇದವನ್ನು ಬದಿಗೊತ್ತಲಾಯಿತು. ''ಅಕ್ಷತ್ರಿಯ''ವೆನಿಸಿಕೊಂಡ ಜನಾಂಗಗಳಿಂದ ದೊಡ್ಡ ಸಂಖ್ಯೆಯಲ್ಲಿ ಸೈನ್ಯ ಭರತಿ ಮಾಡಿಕೊಳ್ಳಲಾಯಿತು. ಯುದ್ಧ ಕಾಲದ ಉಜ್ವಲ ಕೃತಿಗಳಿಂದ ಈ ಭೇದಭಾವ ಎಷ್ಟು ಕೃತಿಮವೂ ಅನ್ಯಾಯದ್ದೂ ಇರುವದೆಂದು ಸಿದ್ಧವಾಯಿತು.

ಎರಡನೆಯದಾಗಿ, ಹಿಂದೀ ತೋಫು ಬಲ ಮತ್ತು ಇತರ ತಾಂತ್ರಿಕ ದಲಗಳನ್ನೂ ಹೆಚ್ಚಿಸಲಾಯಿತು.

ಮೂರನೆಯದಾಗಿ, ವಿಶೇಷ ದಲಗಳಿಗಷ್ಟೇ ಹಿಂದೀ ಕಮೀಶನ್ಡ ಅಧಿಕಾರಿ ಸೀಮಿತಗಳನ್ನು ನಾಗಿರಿಸುವ ಪರಿಪಾಠ ಬಿಟ್ಟು ಮೊದಲೇ ಹಿಂದೀಕೃತವಾಗಿರುವ ದಲಗಳಲ್ಲಿ ವ್ಹಾಯಿಸರಾಯ ಕಮೀಶನ್ಡ ಅಧಿಕಾರಿಗಳನ್ನು ಸೇರಿಸಲಾಯಿತು.

ಈ ಪ್ರಕಾರ ಎರಡನೆ ಮಹಾಯುದ್ಧದ ಕಾಲದಲ್ಲಿ, ಮೊದಲು ಬರಿ ಕೆಲ ನೂರು ಜನರು ಮಾತ್ರ ಇದ್ದ ಹಿಂದೀ ಅಧಿಕಾರಿಗಳು ८೦೦೦ ದ ಸುಮಾರಿಗೆ ಏರಿದರು. ಜಗತ್ತಿನ ವಿವಿಧ ರಂಗಗಳಲ್ಲಿ ಇವರ ನೇತೃತ್ವದಲ್ಲಿದ್ದ ಸೇನೆಗಳು ಮಾಡಿ ತೋರಿಸಿದ ಕೃತಿಗಳಿಂದ ಕ್ಷತ್ರಿಯ ಅಕ್ಷತ್ರಿಯ ಜಾತಿ, ಮುಂದಾಳ್ತನಕ್ಕೆ ಹಿಂದೀಯರ ಅಯೋಗ್ಯತೆ ಮೊದಲಾದ ಎಷ್ಟೋ ಕಟ್ಟುಕತೆಗಳ ಟೊಳ್ಳು ಬಯಲಾಯಿತು.

ಜಲ ಮತ್ತು ಆಕಾಶ ಬಲಗಳು

ಹಿಂದೀ ನೌಕಾಪಡೆ ''ಇಂಡಿಯನ್ ಮೇರಿನ್ಸ್'' ದಿಂದ ಬೆಳೆದುದು. ಆದರೆ ೧೯೩೯ ರ ವರೆಗೆ ಅದರ ಬಲ ಬಹಳ ಅಲ್ಪವಾಗಿದ್ದುದರಿಂದ ಗಮನಾರ್ಹವಾಗಿರಲಿಲ್ಲ. ಮೊನ್ನೆಯ ಯುದ್ಧ ಕಾಲದಲ್ಲಿ ಅದರ ಬೆಳವಣಿಗೆ ಅನೇಕ ಪಾಲು ಹೆಚ್ಚಿತು. ಹಿಂದೀ ಸೈನ್ಯಕ್ಕಿಂತ ಹಿಂದೀ ನೌಕಾಪಡೆ ಈಚೆಗಿನದಾಗಿದ್ದು ಆಧುನಿಕ ಕಾಲದ ಜಳದಲ್ಲಿ ಬೆಳೆದುದರಿಂದ ಅದರ ಮೇಲೆ ಬ್ರಿಟಿಶ ಸಾಮ್ರಾಜ್ಯವಾದಿಗಳ ಪ್ರಭಾವ ಅಷ್ಟು ಬೀಳಲಿಲ್ಲ. ಹಿಂದೀ ನೌಕಾಪಡೆಯಲ್ಲಿ ವರ್ಣದ್ವೇಷ ಸೈನ್ಯದಲ್ಲಿರುವದಕ್ಕಿಂತ ತೀವ್ರವಾಗಿದ್ದರೂ ಹಿಂದೀ ನಾವಿಕರು ಹಿಂದೀ ಸೈನಿಕರಿಗಿಂತ ಹೆಚ್ಚು ರಾಜಕೀಯ ಪ್ರಾಜ್ಞೆಯುಳ್ಳವರಾಗಿದ್ದಾರೆ.

ಹಿಂದೀ ವಿಮಾನಪಡೆಯೇ ಉಳಿದೆರಡು ಬಲಗಳಿಂದ ಅದೃಷ್ಟಶಾಲಿಯೆನ್ನಬೇಕು. ಹಿಂದೀಕರಣದ ವಾತಾವರಣದಲ್ಲಿ ಅದು ಪ್ರಾರಂಭವಾದುದರಿಂದ ೧೯೩೩ ರಲ್ಲಿ ಅದು ಸ್ಥಾಪಿಸಲ್ಪಟ್ಟಾಗಿಂದಲೂ ಅದರಲ್ಲಿ ಹಿಂದಿನ ಅಧಿಕಾರಿಗಳು ಇದ್ದಾರೆ ಅವರು ವೈಮಾನಿಕರಲ್ಲಿ ರಾಷ್ಟ್ರೀಯತೆಯನ್ನು ಸಜೀವವಾಗಿರಿಸಲು ಸಮರ್ಥರಾದರು ೧೦ ಸ್ಕ್ವಾಡ್ರನುಗಳಿಂದ ಮತ್ತು ಸಾಕಷ್ಟು ತರಬೇತಿ ದಲದಿಂದ ಕೂಡಿದ ಹಿಂದೀ ವಿಮಾನಪಡೆಯಲ್ಲಿ ರಾಜಕೀಯ ಜಾಗ್ರತಿ ಇತರ ಎರಡೂ ಬಲಗಳಿಗಿಂತ ಅಧಿಕವಾಗಿದೆ. ಆದರೆ ಹಿಂದೀ ವಿಮಾನ ಪಡೆಯಲ್ಲಿ ಸರ್ವಾಂಗ ಸಾಮಂಜಸ್ಯವಿಲ್ಲ. ಅದರಲ್ಲಿ ಬರಿ ಒಂದೇ ಎಜಿನ್ನಿನ ಬಾಂಬರ ಮತ್ತು ಹೋರಾಟ ವಿಮಾನಗಳಿವೆ. ದೊಡ್ಡ ಬಾಂಬರು ಅಥವಾ ಸಾರಿಗೆ ವಿಮಾನಗಳಿಲ್ಲ.

ಈ ಮೂರು ಬಲಗಳಲ್ಲದೆ ಅನೇಕ ಬ್ರಿಟಿಶ ನೆಲ, ಜಲ, ವಿಮಾನದಲಗಳು ಹಿಂದುಸ್ತಾನದಲ್ಲಿರಿಸಲ್ಪಟ್ಟಿವೆ. ಅವು ಆಕ್ರಮಣ ಸೇನೆಯೆನ್ನಬಹುದು. ಹಿಂದೀಯರು ಸ್ವಾತಂತ್ರ್ಯಗ್ರಹಣಕ್ಕೆ ಮಾಡಬಹುದಾದ ಯತ್ನಗಳನ್ನು ಭಂಗಿಸುವದೇ ಅವುಗಳ ಕೆಲಸ.

ಹೊಸ ಕರ್ತವ್ಯ

ಸ್ವತಂತ್ರ ಹಿಂದುಸ್ತಾನದಲ್ಲಿ ಸಶಸ್ತ್ರ ಬಲಗಳ ಪುನರ್ಘಟನೆಯ ರೂಪರೇಷೆ ಅವುಗಳಿಗೆ ಒಪ್ಪಿಸಲ್ಪಡುವ ಕರ್ತವ್ಯಗಳನ್ನೆ ಅವಲಂಬಿಸುವದು. ಈ ವರೆಗೇನೊ ಅವುಗಳು ಹಿಂದುಸ್ತಾನದಲ್ಲಿ ಬ್ರಿಟಿಶ ಆಳಿಕೆಯನ್ನು ಉಳಿಸಿಕೊಳ್ಳಲು ಮತ್ತು ವಿದೇಶಗಳಲ್ಲಿ ಬ್ರಿಟಿಶ ಸಾಮ್ರಾಜ್ಯವಾದಿ ಮಹತ್ವಾಕಾಂಕ್ಷೆಗಳನ್ನು ಗಳಿಸಿಕೊಳ್ಳಲು ಬಳಸಲ್ಪಟ್ಟಿವೆ. ಸ್ವತಂತ್ರ ಹಿಂದುಸ್ತಾನದ ಸಂರಕ್ಷಣ ಬಲಗಳ ಧ್ಯೇಯ ಸ್ವಾಭಾವಿಕವಾಗಿ ಇದಕ್ಕಿಂತ ತೀರ ಭಿನ್ನವಾಗಿರಬೇಕು. ಹಿಂದುಸ್ತಾನದ ಸಾರ್ವಭೌಮತ್ವ ಮತ್ತು ಪ್ರಾದೇಶಿಕ ಸ್ವಾಮಿತ್ವವನ್ನು ರಕ್ಷಿಸುವದು ಹಾಗು ಅದರ ಅಂತರ್‌ರಾಷ್ಟ್ರೀಯ ಹೊಣೆಗಾರಿಕೆಗಳನ್ನು ಪೂರೈಸುವದು ಇವೇ ಅವುಗಳ ಕರ್ತವ್ಯವಾಗುವದು.

ಇದಕ್ಕಾಗಿ (೧) ತಕ್ಷಣ ಎಲ್ಲ ಬ್ರಿಟಿಶ ಆಕ್ರಮಣ ಸೇನೆಗಳನ್ನು ಒಡನೆ ಇಲ್ಲಿಂದ ಹೊರಗೆ ಕಳಿಸುವದು (೨) ಹಿಂದೀ ಸಶಸ್ತ್ರ ಬಲಗಳ ಸಂಘಟನೆಯಲ್ಲಿ ದೊಡ್ಡ ಪರಿವರ್ತನೆಯನ್ನು ತಂದೊಡ್ಡುವದು ಅತ್ಯವಶ್ಯ.

ಬ್ರಿಟಿಶ ಸೈನ್ಯವನ್ನು ಇಲ್ಲಿಂದ ತೆಗೆದರೆ ಹಿಂದೀ ಬಲಗಳಷ್ಟೇ ಈ ದೇಶದ ರಕ್ಷಣೆಗೆ ಸಾಲವೆಂದು ಬ್ರಿಟಿಶರು ವಾದಿಸಬಹುದು. ಆದರೆ ಇದು ಅರ್ಧಸತ್ಯ. ಮೊನ್ನಿನ ಯುದ್ಧದ ಮುಕ್ತಾಯದಷ್ಟು ಹೊತ್ತಿಗೆ ಹಿಂದೀ ಸೈನ್ಯ ೨೦ ಲಕ್ಷದಷ್ಟಿತ್ತು. ಅದೀಗ ವಿಸರ್ಜನೆಗೆ ಸಿದ್ಧವಾಗಿರುವದರಿಂದ ಅವಶ್ಯವಿದ್ದಷ್ಟು ಉಳಿಸಿಕೊಂಡು ರಾಷ್ಟ್ರೀಯ ಸಂಕಟ ಕಾಲದಲ್ಲಿ ಅದನ್ನು ವಿಸ್ತರಿಸಲು ಯೋಜನೆ ಮಾಡುವದು ಕಠಿನವಾಗಲಾರದು. ಹೀಗೆ ಪುನರ್ಘಟಿಸಲ್ಪಟ್ಟ ಹಿಂದೀ ಸೇನೆಗೆ ಯೋಗ್ಯ ಶಸ್ತ್ರಾಸ್ತ್ರ ಸಲಕರಣೆಗಳಿದ್ದರೆ ಅದು ದೇಶದ ರಕ್ಷಣೆಗೆ ಸಮರ್ಥವಾದೀತೆಂದು ಖಂಡಿತ ನಂಬಬಹುದು. ಇದಲ್ಲದೆ ಬ್ರಿಟಿಶ ಸೈನ್ಯವನ್ನು ಇಲ್ಲಿಂದ ಕಳಿಸಿದರೆ ಆಗುವ ಹಣದ ಉಳಿತಾಯದಿಂದ ಹಿಂದೀ ಸೈನ್ಯಕ್ಕೆ ಆಧುನಿಕ ಶಸ್ತ್ರಾಸ್ತ್ರಸಲಕರಣೆಗಳನ್ನು ಪೂರೈಸಿ ತರಬೇತಿ ಕೊಡಬಹುದು.

ಹಿಂದೀ ವಿಮಾನ ಬಲದಲ್ಲಿ ತರಬೇತಿ, ಮೊದಲಾದ ಸರ್ವಸಜ್ಜಿತ ವ್ಯವಸ್ಥೆಯುಳ್ಳ ಹತ್ತು

ಲೇಖಾಂಕ: ೨

ಸ್ಕ್ವಾಡ್ರನುಗಳಿವೆ. ಇದಲ್ಲದೆ ಒಂಭತ್ತು ಸ್ಕ್ವಾಡ್ರನ ಬ್ರಿಟಿಶ ವಿಮಾನ ಬಲವನ್ನು ಹಿಂದುಸ್ತಾನದಲ್ಲಿರಿಸಬೇಕೆಂದು ಬ್ರಿಟಿಶ ಅಧಿಕಾರಿಗಳು ಇಚ್ಛಿಸುತ್ತಾರೆಂದು ತಿಳಿಯುತ್ತದೆ. ಆದರೆ ಹಿಂದೀ ವಿಮಾನಪಡೆಯನ್ನೀಗ ಯುದ್ಧಕಾಲದ ಸಿಬ್ಬಂದಿ ವ್ಯವಸ್ಥೆಯಲ್ಲಿಯೆ ಇಟ್ಟುಕೊಳ್ಳಲಾಗಿದೆ. ಅವುಗಳನ್ನು ಶಾಂತಿಕಾಲದ ವ್ಯವಸ್ಥೆಗೆ ಬದಲಿಸಿದರೆ ಅದರಿಂದ ಹೊಸ ಸ್ಕ್ವಾಡ್ರನುಗಳ ರಚನೆಗೆ ಬೇಕಾದಷ್ಟು ಅಧಿಕಾರಿಗಳು ಮಿಕ್ಕಿ ಸಿಗಬಹುದು. ಬ್ರಿಟಿಶ ವಿಮಾನ ಪಡೆಯ ಒಂದು ಸ್ಕ್ವಾಡ್ರನು ಇಟ್ಟುಕೊಳ್ಳಲು ಹಿಂದೀ ವಿಮಾನ ಸ್ಕ್ವಾಡ್ರನಿಗಿಂತ ನಾಲ್ಕು ಪಟ್ಟು ವೆಚ್ಚ ಹತ್ತುತ್ತದೆಂದು ಮರೆಯಬಾರದು. ಅವುಗಳನ್ನು ಕಳಿಸುವದರಿಂದುಳಿದ ಹಣ ಹಿಂದೀ ವಿಮಾನ ಪಡೆಯನ್ನು ಸರ್ವಾಂಗ ಸಮಂಜಸವಾಗುವಂತೆಯೂ ಆಧುನಿಕ ಸಾಮಗ್ರಿಗಳಿಂದ ಯುಕ್ತವಾಗುವಂತೆಯೂ ಮಾಡಬಹುದು. ಹೀಗೆ ಹಿಂದೀ ವಿಮಾನ ಪಡೆಯನ್ನು ಪುನರ್ಘಟಿಸುವದು ಅತ್ಯವಶ್ಯ.

ಪ್ರಬಲ ನೌಕಾಶಕ್ತಿ ಬೇಕು

ಆದರೆ ಹಿಂದೀ ನೌಕಾಪಡೆಯ ಸಮಸ್ಯೆಯು ಇದಕ್ಕಿಂತ ಗಡುಚಾದುದು. ಎಷ್ಟೇ ಬೆಳೆದಿದ್ದರೂ ಈಗಿನ ನೌಕಾಪಡೆ ಹಿಂದುಸ್ತಾನದ ರಕ್ಷಣೆಗೆ ಸಾಲದು. ಅದನ್ನು ಬೇಗನೆ ವಿಸ್ತರಿಸುವುದೂ ಸಾಧ್ಯವಿಲ್ಲ. ಹಿಂದುಸ್ತಾನಕ್ಕೆ ಸರ್ವತೋಮುಖ ನೌಕಾಪಡೆಯನ್ನು ನಿರ್ಮಿಸಲು ಒಂದು ಯೋಜನೆ ರಚಿಸುವದಕ್ಕಾಗಿ ಒಂದು ಸಮಿತಿಯನ್ನು ಒಡನೆ ನೇಮಿಸಿ ಅತ್ಯಂತ ಅಲ್ಪ ಕಾಲದಲ್ಲಿ ಬಲಿಷ್ಠ ಮತ್ತು ಸಮರ್ಥ ನೌಕಾ ಪಡೆಯ ಸಿದ್ಧತೆಗೆ ಬೇಕಾದ ಪ್ರಾಥಮಿಕ ವ್ಯವಸ್ಥೆಯನ್ನು ಕೈಕೊಳ್ಳಬೇಕು.

ಇದು ಕೈಗೂಡುವ ವರೆಗೆ ಯುಕ್ತ ರಾಷ್ಟ್ರ ಸಂಸ್ಥೆಯ ನೇತೃತ್ವದಲ್ಲಿ ಹಿಂದೀ ಸಾಮುದ್ರ ರಕ್ಷಣೆಗೋಸುಗ ಒಂದು ಕಾಲಾವಧಿ ಹಾಕಿ ವಿಶೇಷ ಒಪ್ಪಂದಗಳನ್ನು ಮಾಡಿಕೊಂಡು ಕೆಲ ವಿದೇಶಿ ನೌಕಾಪಡೆಗಳಿಗೆ ಹಿಂದೀ ಸಮುದ್ರಗಳಲ್ಲಿ ಇರಗೊಡಿಸಬೇಕು. ಈಗಿರುವ ಬ್ರಿಟಿಶ ನೌಕಾ ಪಡೆಗಳು ಆಕ್ರಮಣ ಪಡೆಗಳೆಂಬುವನ್ನು ಅವುಗಳಲ್ಲೊಂದಾದರೂ ಹಡಗು ಹಿಂದುಸ್ತಾನದ ತೀರದಲ್ಲಿರುವಷ್ಟು ಕಾಲ ನಮ್ಮ ಸ್ವಾತಂತ್ರ್ಯ ಹೆಸರಿಗಷ್ಟೇ ಉಳಿಯುವದೆಂಬುದನ್ನು ಮರೆಯಕೂಡದು. ಕುಟ್ಟಿಯಾದ ಈ ನೌಕಾ ಬಲಗಳನ್ನು ಕಳಿಸಿಬಿಟ್ಟರೆ ನಮ್ಮ ನೌಕಾಪಡೆಯ ವಿಸ್ತರಣೆ ಆಧುನಿಕ ವ್ಯವಸ್ಥೆಗಳಿಗೆ ದೊರೆಯುವದೆಂದೂ ನೆನಪಿನಲ್ಲಿಡಬೇಕು.

ಕ್ರಾಂತಿಕಾರಿ ಬದಲಾವಣೆ ಬೇಕು

ಹಿಂದೀ ಸಶಸ್ತ್ರ ಬಲಗಳ ಇಡಿ ಸ್ವಭಾವವನ್ನೆ ಬದಲಿಸುವದು ನಮ್ಮ ಉದ್ದೇಶವಾಗಿರಬೇಕು. ನಮ್ಮ ಸೈನ್ಯದ ಸ್ವರೂಪ ರಾಷ್ಟ್ರೀಯವಾಗಬೇಕಾದರೆ ಕ್ರಾಂತಿಕಾರಿ ಕ್ರಮಗಳನ್ನು ಕೈಕೊಳ್ಳಬೇಕಾಗುವದು. ಸೈನ್ಯದಲ್ಲಿ ಬ್ರಿಟಿಶರು ತುಂಬಿರುವ ಹಿಂದೀ ವಿರೋಧಿ ಭಾವನೆ ಇದನ್ನು ಅವಶ್ಯವಾಗಿ ಮಾಡಿದೆ. ಈ ವಿಷಯದಲ್ಲಿ ಅರೆಮನಸಿನ ಕ್ರಮಗಳಿಂದ ಅನಾಹುತವೇ ಒದಗೀತು.

ಮೊದಲನೆಯದಾಗಿ "ರಾಯಲ್" ಅಥವಾ "ರಾಜನ" ಸೈನ್ಯ, ನೌಕಾಪಡೆ, ವಿಮಾನಪಡೆಯೆಂದಿದ್ದುದನ್ನು ತೊಡೆದು ಹಾಕಿ "ರಾಷ್ಟ್ರೀಯ" ಸೇನೆ, ನೌಕಾಪಡೆ, ವಿಮಾನಪಡೆಯೆಂದು ಮಾಡಬೇಕು. ಎರಡನೆಯದಾಗಿ ಸಶಸ್ತ್ರ ಬಲಗಳನ್ನು ರಾಷ್ಟ್ರೀಯ ತಳಹದಿಯ ಮೇಲೆ ಪುನರ್ಘಟಿಸಲು ತ್ವರೆಯಾಗಿ ಕ್ರಮ ಕೈಕೊಳ್ಳಬೇಕು.

ಹಿಂದೀ ಬಲಗಳಿಗೆ ನಿಜವಾದ ರಾಷ್ಟ್ರೀಯ ರೂಪ ಬರಬೇಕಾದರೆ ಸಾವಕಾಶವಾಗಿ ಅವುಗಳ ಹಿಂದೀಕರಣ ಮಾಡಿದರೆ ಸಾಲದು. ಎಲ್ಲ ಹೊಣೆಗಾರ ಅಜ್ಞಾಪಕ ಮತ್ತು ಅಧಿಕೃತದ ಸ್ಥಾನಗಳು ಹಿಂದೀಯರ ಕೈಯಲ್ಲೆ ಇರಬೇಕೆಂಬುದು ಅತ್ಯಂತ ಮಹತ್ವದ್ದು. ಬ್ರಿಟಿಶ ಅಥವಾ ವಿದೇಶಿ ತಜ್ಞರು ಕೇವಲ ಸಲಹೆಗಾರರಾಗಿರಬೇಕು.


ಈ ವರೆಗೆ ಬ್ರಿಟಿಶ ಸೈನ್ಯಾಧಿಕಾರಿಗಳು ಹಿಂದೀಕರಣದ ವಿರುದ್ಧ ಒಂದೇ ಕಾರಣ ಕೊಡುತ್ತ ಬಂದಿದ್ದಾರೆ. ಯೋಗ್ಯತರದ ಸಾಕಷ್ಟು ಹಿಂದೀ ತರುಣರು ಮುಂದೆ ಬರುತ್ತ ಇಲ್ಲ, ಎಂಬುದೇ ಅದು. ಇದೆಲ್ಲ ಹಿಂದೀ ಸೇನೆ ಬ್ರಿಟಿಶ ಸ್ವರೂಪದ್ದಿರಬೇಕೆಂಬ ಧ್ಯೇಯವಿದ್ದಾಗ ಮಾತ್ರ ಸರಿ. ಆದರೆ ಹಿಂದೀ ಪಡೆಗಳು ಹಿಂದೀ ಸ್ವರೂಪದವಿರಬೇಕೆಂಬ ಅಭಿಪ್ರಾಯವಿದ್ದರೆ ಹಿಂದೀ ಅಧಿಕಾರಿಗಳೇ ಅದರಲ್ಲಿರುವದು ಹೆಚ್ಚು ಸೂಕ್ತವಾಗುವದು.

ಹಿಂದೀ ಸೈನಿಕ ವಿದ್ಯಾಲಯದಲ್ಲಿಯೂ ಇತರ ಅಧಿಕಾರಿಗಳ ತರಬೇತಿ ಶಾಲೆಗಳಲ್ಲಿಯೂ ಈ ವರೆಗೆ ಹಿಂದೀ ಅಧಿಕಾರಿಯನ್ನೂ ಬ್ರಿಟಿಶನ ತಕ್ಕ ಪ್ರತಿಯಾಗಿ ಮಾಡುವ ಅವನನ್ನು ಅವನ ದೇಶದಲ್ಲೆ ಹೊಸಬನನ್ನಾಗಿ ಮಾಡುವ ಪ್ರಯತ್ನ ನಡೆದಿದೆ. ಆದರೆ ಇನ್ನು ಮುಂದೆ ನಾವು ನಿಜವಾದ ಹಿಂದೀ ಸ್ವಭಾವದ ಮತ್ತು ರಾಷ್ಟ್ರೀಯ ಭಾವನೆಯ ಹುರುಪು ಕೊಡಬಲ್ಲ ಅಧಿಕಾರಿಗಳ ಕೆಳಗೆ ಹಿಂದೀ ಸೈನ್ಯವನ್ನು ಇರಿಸತಕ್ಕದ್ದು. ಈ ಯುದ್ಧದಲ್ಲಿ ಹಿಂದೀ ಅಧಿಕಾರಿಗಳು ಮಾಡಿದ ಕೃತಿಗಳೂ ನೇತಾಜಿ ಸುಭಾಸಚಂದ್ರ ಬೋಸರ ಅರ್ಝಾದ ಸೈನ್ಯದಲ್ಲಿ ಎಳೆಯ ಹಿಂದೀ ಅಧಿಕಾರಿಗಳು ದೊಡ್ಡ ದೊಡ್ಡ ಪಡೆಗಳನ್ನು ಕೌಶಲದಿಂದ ನಡೆಸಿದ ರೀತಿಯೂ ಹಿಂದೀಯರ ಯೋಗ್ಯತೆಯಲ್ಲಿ ಸಂದೇಹವಿಡುವವರನ್ನು ಸಮಾಧಾನಗೊಳಿಸದಿರದು.

ವರಿಷ್ಠರ ಪುನರ್ಘಟನೆ

ಹಿಂದೀ ಸಶಸ್ತ್ರ ಬಲಗಳ ವರಿಷ್ಠ ಮಂಡಲದ ಪುನರ್ಘಟನೆ ಹೀಗೆ ಆಗಬೇಕು:—

— ಪುಟ ೬ಕ್ಕೆ



ಕವಿ ಅಂಬಿಕಾತನಯದತ್ತ:---

(ವಿವಿಧ ಕವಿಗಳ ಕವನ ಸಂಗ್ರಹ)

ಸಂಪಾದಕರು:-ಶೇ. ಗೋ. ಕುಲಕರ್ಣಿ, ಸಾಧನ ಮುದ್ರಣಾಲಯ, ಧಾರವಾಡ. ಪುಟಗಳು ೩+ ೪೪. ಬೆಲೆ ೧--೦-೦ ಪ್ರಕಾಶಕರು ಭಿ. ಪ. ಕಾಳೆ ಸಾಧನ ಮುದ್ರಣಾಲಯದ ಪರವಾಗಿ.

ಈ ಸಂಗ್ರಹದಲ್ಲಿ ಒಟ್ಟು ಒಂಭತ್ತು ಕವನಗಳಿವೆ. ಅವುಗಳೆಲ್ಲ ಕನ್ನಡ ಕವಿಗಳಿಂದು ಖ್ಯಾತಿಯನ್ನು ಪಡೆದ ಶ್ರೀಮಾನ್ ಬೇಂದ್ರೆಯವರನ್ನು ಕುರಿತಿವೆ. ಧಾರವಾಡದಲ್ಲಿ ಶ್ರೀಮಾನ್ ಬೇಂದ್ರೆಯವರ ೫೦ ನೇ ಹುಟ್ಟುಹಬ್ಬದ ಸತ್ಕಾರ ಸಮಾರಂಭ ಸಮಯದಲ್ಲಿ ಅವರ ಮಿತ್ರರು ಬರೆದ ಕವನಗಳಿವು. ಸತ್ಕಾರ ಸಮಾರಂಭಕ್ಕಾಗಿ ಬರೆದ ಕವನಗಳಲ್ಲಿ ವಾಡಿಕೆಯಾಗಿ ಅತಿಶಯೋಕ್ತಿಯಲಂಕಾರಕ್ಕೆ ಅವಕಾಶವಿರುತ್ತದೆಯೆಂಬುದನ್ನು ಮನದಂದು ಈ ಕವನಗಳನ್ನು ಓದುವದು ಓದುಗರ ಒಂದು ಕರ್ತವ್ಯ. ಇಲ್ಲದಿದ್ದರೆ ಶ್ರೀ ಬೇಂದ್ರೆಯವರನ್ನು ಕಂಡು ಅವರ ಒಡನಾಡಿಗಳಾಗಿ ಅಡಿದ ಅವರ ಅನೇಕ ಮಿತ್ರರಿಗೆ ಇಲ್ಲಿಯ ಕೆಲ ಕವನಗಳಲ್ಲಿ ಒಡಮೂಡಿದ ಅತಿಶಯೋಕ್ತಿಗಳನ್ನು ಓದಿ ತಾವು ನೋಡಿದ ಶ್ರೀ ಬೇಂದ್ರೆಯವರೇ ಇವರೋ ಅಥವಾ ಬೇರೊಬ್ಬರಾದರೂ ಇರುವರೋ ಎಂಬ ಸಂಶಯವುಂಟಾಗಬಹುದು. ‘‘ನಮ್ಮ ಮಾತು’’ ಎಂಬ ಮುನ್ನುಡಿಯಲ್ಲಿ ಶ್ರೀ ಕುಲಕರ್ಣಿಯವರು ‘‘ಕವಿ-ಬೇಂದ್ರೆಯವರು ಒಬ್ಬ ವ್ಯಕ್ತಿಯಾಗಿದ್ದು ಅವ್ಯಕ್ತರಾಗ ಹಿರಿ—ಕಿರಿ ಕವಿಗಳಲ್ಲಿ ಸ್ಫೂರ್ತಿಯನ್ನಿತ್ತಿದ್ದಾರೆ’’ ಎಂದು ಹೇಳಿದ ವಾಕ್ಯದಲ್ಲಿ ವಿಭಕ್ತಿಪಲ್ಲಟದ ದೋಷವಿದ್ದಂತೆ ತೋರುತ್ತದೆ. ‘‘ಹಿರಿ ಕಿರಿ ಕವಿಗಳಿಗೆ ಸ್ಫೂರ್ತಿಯನ್ನಿತ್ತಿದ್ದಾರೆ’’ ಎಂದು ಬರೆವ ಬದಲು ‘‘ಹಿರಿ-ಕಿರಿ ಕವಿಗಳಲ್ಲಿ ಸ್ಫೂರ್ತಿಯನ್ನಿತ್ತಿದ್ದಾರೆ’’ಎಂದು ಬರೆದುದು ಅಚ್ಚಿನ ತಪ್ಪೋ ಅಥವಾ ಹೊಸಗನ್ನಡದ ಹೊಸ ಬಳಕೆಯೋ ತಿಳಿಯದು. ವಾಕ್ಯದೋಷವನ್ನು ಬದಿಗಿರಿಸಿ ಅವರ ಮಾತಿನ ಅರ್ಥವನ್ನು ತಿಳಿದುಕೊಳ್ಳುವದು ಸಾಧ್ಯವಿದೆಯೆಂದು ಹೇಳಬಹುದು ಅದುದರಿಂದ ಅವರ ಆ ಮಾತು ಬಹ್ವಂಶ ನಿಜವಾಗಿದೆ.

ಒಂಬತ್ತು ಕವನಗಳ ಈ ಸಂಗ್ರಹದಲ್ಲಿ ‘‘ನಿನ್ನ ನುಡಿ ಕುಶಲ; ಊಹೆ ಸುಂದರ ಭಾವ. ಜಗದಂತೆ ವಿಸ್ತಾರ; ನಿನ್ನೆಣಿಕೆ ಮಾನವನ ಬಾಳ್ವೆಗೆ ಪ್ರಸ್ತಾರ; ನಿಶ್ಯಾಕಂದ್ರ ಮಾಂತ್ರಿಕನು ನೀನು’’ ಎಂದು ಶ್ರೀನಿವಾಸರು ವ್ಯಕ್ತಪಡಿಸಿದ ಅಭಿಪ್ರಾಯ ಯಥಾರ್ಥವಾಗಿದೆ. ಶ್ರೀ ಕುಲಕರ್ಣಿಯವರು ಬರೆದ ‘ಕವಿ—ಅಂಬಿಕಾತನಯದತ್ತ’ ಎಂಬ ಉದ್ದವಾದ ಕವನದಲ್ಲಿ ಪ್ರಾಸದ ವ್ಯಾಮೋಹದಿಂದ ನಿರರ್ಥಕವಾದ ಶಬ್ದಗಳ ರಾಶಿಯು ಹೆಚ್ಚಾಗಿದೆಯೆಂದೆನಿಸುತ್ತದೆ. ದತ್ತಾತ್ರಯ ಕುಲಕರ್ಣಿಯವರ ‘‘ನೂರು ಕಾಲ ಬಾಳು’’ ಎಂಬ ಗೀತವು ಸುಂದರವಾಗಿದೆ. ಶ್ರೀ ಗೋಕಾಕರು ಬರೆದ ‘‘ಕನ್ನಡ ಕುಲದ ಗಂಧರ್ವ’’ ಎಂಬ ಸುದೀರ್ಘವಾದ ಪದ್ಯದಲ್ಲಿ

‘‘ಸ್ವಯಂಸಿದ್ಧ ಚಿತ್ಪ್ರಕಾಶ
ಪರಮಹಂಸ ಪದದ ಪ್ರಜ್ಞೆ
ಹುಟ್ಟಿನೊಡನೆ ನಿನ್ನ ಜೊತೆಯಲಲೆದುಬಂದವು’’

ಹಾಗೂ

‘‘ಗಂಧರ್ವರ ಲೋಕದಲ್ಲಿ
ಲೀಲೆಯಿಂದ ಬಾಳಿ ಬದುಕಿ
ಗಂಧವತಿಯ ನೆನೆಸಿ ಭೂಮಿಗಿಳಿದು ಬಂದಿಹೆ
ನರದೇಹದ ಜವ್ವನಿಕೆಯ
ಹೊದ್ದು ಕಾರಣಾಂತರದಲಿ
ಮನುವಂಶದ ಮಾಯೆಗಳನುಹೊಂದಿನಿಂದಿಹೆ’’

ಎಂದು ಹೇಳಿದ ಮಾತುಗಳನ್ನು ಶ್ರೀ ಬೇಂದ್ರೆಯವರ ಒಡನಾಡಿಯಾಗಿ ಅವರ ಬಾಲ್ಯ ಸ್ನೇಹಿತರೂ ಕವಿಗಳೂ ಅದ ಶ್ರೀಮಾನ್ ಶ್ರೀಧರ ಖಾನೋಳಕರರು ‘‘ಇವರು ಕಾವ್ಯವನ್ನು ಬರೆಯುತ್ತಿರುವಾಗ ಕುಳಿತು ಬರೆಯುವದು ಕಡಿಮೆ. ಸಣ್ಣ ಹುಡುಗರಂತೆ ಜೋಕಾಲಿಯನ್ನು ತೂಗುತ್ತ ಬರೆಯುವ ಪರಿಪಾಠವಿತ್ತು. ಒಂದು ಕೈಯಿಂದ ಜೋಕಾಲಿಯ ಹಗ್ಗ ಹಿಡಿದು ಜೀಕುವದು, ಒಂದು ಕೈಯಲ್ಲಿ ಪುಸ್ತಕ ಪೆನ್ಸಿಲ್ಲು. ವಿಚಾರ ಬಂದ ಹಾಗೆ ಬರೆಯುವದು. ಒಂದು ಸಾಲು ಮುಗಿಯಿತೆಂದರೆ ಅದನ್ನು ಸಾವಿರಾರು ಸಲ ಗಟ್ಟಿಯಾಗಿ ಹಾಡಿಬಿಡುವದು. ಒಂದು ಸುಂದರವಾದ ಸಾಲಿನ ರಚನೆಯಾಗಿತ್ತೆಂದರೆ ಅದಕ್ಕೆ ಮೂರು ದಿವಸ ! ಇದು ಇವರ ಕಾವ್ಯದ ಶೈಲಿ ! ‘‘ಬೇಂದ್ರೆಯವರ ಕಾವ್ಯವೆಂದರೆ ಮನೋರಂಜನೆಯಲ್ಲ—ಅಭ್ಯಾಸ. ಸ್ವಲ್ಪ ಟೊಂಕಕಟ್ಟಿ ಓದಿದರೆ ಅಗಾಧವಾದ ಆನಂದವನ್ನು ಕೊಡುವದು. ಅದರ ಹಿನ್ನಲೆಗಳನ್ನು ಕಂಡುಹಿಡಿದ ಹೊರ್ತು ಓದುಗರಿಗೆ ಚಟಕ್ಕನೇ ಅರ್ಥವಾಗುವ ಹಾಗಿಲ್ಲ’’ ಎಂಬ ಮಾತುಗಳಿಗೆ ಹೋಲಿಸಿ ನೋಡಿದರೆ ಯಥಾರ್ಥ ವಿಮರ್ಶೆಗೂ ಸತ್ಕಾರ ಸಮಾರಂಭದ ಸ್ತುತಿಗೀತಕ್ಕೂ ಎಷ್ಟು ಅಂತರವುಂಟೆಂಬುದರ ಪರಿಚಯವು ಓದುಗರಿಗಾಗದಿರದು. ಶ್ರೀಮಾನ್ ಬೇಂದ್ರೆಯವರನ್ನು ಸತ್ಕರಿಸುವ ಸಮಾರಂಭದಲ್ಲಿ ಅವರನ್ನು ಅವತಾರಿ ಪುರುಷರೆಂದು ಹೇಳುವದರಿಂದ ಅವರಂತೆ ಕವಿಗಳಾಗ ಬಯಸುವವರ ಬಯಕೆಯ ಮೊಳಕೆಯನ್ನೇ ಚಿವುಟಿದಂತಾಗುವದರಿಂದ ಶ್ರೀ ಬೇಂದ್ರೆಯವರ ಬಾಳಗುಟ್ಟನ್ನೇ ಶ್ರೀ ಗೋಕಾಕರು ಹಾಳುಮಾಡಿದಂತಾಗಿದೆಂದು ಅನಿಸುತ್ತದೆ. ಪಾಮರ ಮಾನವನ ಬಡತನದ ಬಾಳನ್ನೇ ಬದುಕಿ ಕಾವ್ಯ ಯೋಗ ಸಾಧನೆಯನ್ನು ಮಾಡಿ ಸಿದ್ಧ ಕವಿಯಾಗಬಹುದೆಂಬ ಅಂಶವನ್ನು ಶ್ರೀ ಬೇಂದ್ರೆಯವರ ಜೀವನವು ಉದಯೋನ್ಮುಖ ಕವಿಗಳ ನಿದರ್ಶನಕ್ಕೆ ತಂದು ಕೊಡುತ್ತದೆ. ಇಂತಹ ಸ್ಫೂರ್ತಿಪ್ರದವಾದ ಘಟನೆಯನ್ನು ಅವತಾರದ ಮೋಹದಿಂದ ಅಪಾರ್ಥಗೊಳಿಸುವದು ಕಾವ್ಯನಾಯಕರಿಗೂ ಭೂಷಣವಲ್ಲ; ಸ್ತುತಿಪಾಠಕರಿಗೂ ಶೋಭಿಸುವದಿಲ್ಲ. ನಾಲ್ವತ್ತೆಂಟು ಪುಟಗಳ ಈ ಸಂಗ್ರಹದ ಬೆಲೆ ೧ ರೂ. ಯೆಂದರೆ ಹೆಚ್ಚೆಂದೇ ಅನಿಸುತ್ತದೆ.

ಕವಿವರ ಬೇಂದ್ರೆ:---

(ಲಲಿತ ಸಾಹಿತ್ಯ ಮಾಲೆಯ ೧೫ ನೆಯ ಕುಡಿ. ಪ್ರಕಾಶನ ಶಾಖೆ-ಬೇಂದ್ರೆ ಸತ್ಕಾರ ಸಮಿತಿ. ಧಾರವಾಡ ಇವರಿಂದ ಸಂಪಾದಿತ) ಪ್ರಕಾಶಕರು:— ಮನೋಹರ ಗ್ರಂಥ ಭಾಂಡಾರ, ಧಾರವಾಡ. ಪುಟಗಳು, ೨+೨+೯೬. ಬೆಲೆ ೧—೮—೦

‘‘ಕವಿವರ’’ ಬೇಂದ್ರೆಯವರನ್ನು ಕುರಿತು ಬರೆದ ಅನೇಕ ಮಹನೀಯರ ಲೇಖನಗಳ ಸಂಗ್ರಹವನ್ನು ಲಲಿತ ಸಾಹಿತ್ಯಮಾಲೆಯ ೩ ನೆಯ ವರುಷದ ೩ ನೆಯ ಕುಡಿಯನ್ನಾಗಿ ಬೇಂದ್ರೆ ಸತ್ಕಾರ ಸಮಿತಿಯ ಪರವಾಗಿ ಶ್ರೀ ಚುಳಕಿಯವರು ಪ್ರಕಟಿಸಿರುವರು. ಈ ಸಂಗ್ರಹದಲ್ಲಿ ಶ್ರೀ ಬೇಂದ್ರೆಯವರ ಮನೆತನದಿಂದ ಮೊದಲು ಮಾಡಿ ಮುಮುಕ್ಷು ಬೇಂದ್ರೆಯ ವರೆಗೆ ಅವರ ಜೀವನದ ವಿವಿಧ ದೃಶ್ಯಗಳನ್ನು ನಿರೂಪಿಸುವ ಯತ್ನವನ್ನು ಅವರನ್ನು ನಿಕಟವಾಗಿ ಬಲ್ಲ ಬೇರೆ ಬೇರೆ ಮಿತ್ರರೂ ಅಭಿಮಾನಿಗಳೂ ಮಾಡಿರುವರು. ಶ್ರೀ ಶ್ರೀಧರ ಖಾನೋಳಕರರು ‘ಗೆಳೆಯ ಬೇಂದ್ರೆ’ಯೆಂಬ ತಮ್ಮ ಲೇಖನದಲ್ಲಿ ‘‘ಯಾವಾಗಲೂ ಯಾವುದಾದರೊಂದು ಎಣಿಕೆ ಹಾಕುತ್ತ ಜೋಲಿ ಹೊಡೆಯುತ್ತ ಓಣಿ ಓಣಿ ತಿರುಗುವ ತಂಟೆಖೋರ. ಜಗಳವಿಲ್ಲದೆ ನಿದ್ದೆ ಹತ್ತುತ್ತಿದ್ದಿಲ್ಲ ಇವರಿಗೆ. ನಾವು ಎಷ್ಟೋ ಸಲ ನಾರದ ಮೂರ್ತಿಯೆಂತಲೇ ಸಂಬೋಧಿಸುತ್ತಿದ್ದೆವು. ಆ ಮೇಲೆ ಎರಡನೆಯ ವೈಗುಣ್ಯವೆಂದರೆ ಚಾಣಕ್ಯವೃತ್ತಿ. ಮುಂದೆ ನಿಂತು ಕಾದಾಡುವ ಸಾಮರ್ಥ್ಯವಿಲ್ಲದ್ದರಿಂದ ಗುಂಪುಗೂಡಿ ಎಣಿಕೆ ಹಾಕುವ ಚಟ. ಈ ಬಾಲ ವೈಗುಣ್ಯಗಳೇ ಮುಂದಿನ ಜೀವನದಲ್ಲಿ ಕರ್ನಾಟಕದ ಉನ್ನತಿಯ ಬಗ್ಗೆ ಜಗಳ, ಕರ್ನಾಟಕದ ಏಳ್ಗೆಗಾಗಿ-ವಿಶೇಷತಃ ಸಾಹಿತ್ಯದ್ವಾರದಿಂದ ಆಧ್ಯಾತ್ಮಿಕ ಏಳ್ಗೆಗೆ ಗುಂಪು ಕಟ್ಟುವದು ಎಂಬಿವೇ ಮೊದಲಾದ ಉಚ್ಚ ಉದಾರ ಗುಣಗಳಾಗಿ ಪರಿಣಮಿಸಿವೆ’’ ಎಂದು ಶ್ರೀ ಬೇಂದ್ರೆಯವರ ವ್ಯಕ್ತಿ ಪರಿಚಯವನ್ನು ಸುಂದರವಾಗಿ ಮಾಡಿಕೊಟ್ಟಿರುವರು. ಶ್ರೀ ಗೋರೂರು ರಾಮಸ್ವಾಮ್ಯಯ್ಯಂಗಾರರು ‘‘ಬೇಂದ್ರೆಯವರ ವ್ಯಕ್ತಿತ್ವ’’ವನ್ನು ಕುರಿತು ‘‘ಬೇಂದ್ರೆಯವರು ಮಾಟಗಾರರೆಂಬುದರಲ್ಲಿ ಸ್ವಲ್ಪವೂ ಅತಿಶಯೋಕ್ತಿಯಿಲ್ಲ. ಸ್ವರದೊಂದಿಗೆ ವೇದ ಬಂದಂತೆ ಬೇಂದ್ರೆಯವರ ಕವನ ಅದರ ಮಟ್ಟುಗಳೊಂದಿಗೆ ಅವರಿಗೆ ಸಿದ್ಧಿಸಿದೆ. ಬೇಂದ್ರೆಯವರ ಜೊತೆಯಲ್ಲಿರುವದು ಹಾಸ್ಯದ ಅಲೆಗಳ ಮೇಲೆ ಲಾಸ್ಯವಾಡಿದಂತೆ’’ ಎಂಬ ಸೊಗಸಾದ ಹಾಗೂ ಸತ್ಯಪೂರ್ಣ ವಿಚಾರಗಳನ್ನು ಸರಸವಾಗಿ ಹೊರಹೊಮ್ಮಿಸಿರುವರು. ದಿವಂಗತ ಶ್ರೀ ಮಹಿಷಿ ಅಶ್ವತ್ಥರಾಯರು ‘ಬೇಂದ್ರೆಯವರ ಮನೆತನ’ದ ವಿಷಯದಲ್ಲಿ ಸ್ವಾರಸ್ಯಮಯವಾದ ಚಿತ್ರವನ್ನು ವಾಚಕರಿಗೆ ಒದಗಿಸಿ ಬಹಳ ಉಪಕಾರ ಮಾಡಿರುವರು. ‘ಕವಿವರ ಬೇಂದ್ರೆ’ ಹೊತ್ತಿಗೆಯು ಶ್ರೀ ಬೇಂದ್ರೆಯವರನ್ನರಿತುಕೊಳ್ಳಬಯಸುವವರಿಗೆ ಬಹಳ ಉಪಯುಕ್ತವಾದ ಕೈಪಿಡಿಯಾಗಿದೆ. ಶ್ರೀ ಮಾಸ್ತಿಯವರು ‘ಹರಕೆ’ಯಲ್ಲಿ ಹೇಳಿದಂತೆ ‘‘ಬೇಂದ್ರೆಯವರ ವಿಷಯ ನಾಲ್ಕು ಮಾತಲ್ಲ, ಹತ್ತು ಮಾತನ್ನು ಬರೆಯುವದೂ ನನಗೆ ಸಮ್ಮತವೆ’’ ಎಂದಂತೆ, ಅವರ ವಿಷಯದಲ್ಲಿ ಇಂತಹ ಒಂದು ಹೊತ್ತಿಗೆಯಲ್ಲ; ಹಲವಾರು ಹೊತ್ತಿಗೆಗಳು ಹೊರಟರೂ ಅಲ್ಪವೇ ಎಂದು ಹೇಳದಿರೆವು.

ಶ್ರೀ ಬೇಂದ್ರೆಯವರಿಗೆ:---

ಐವತ್ತನೆಯ ಹುಟ್ಟು ಹಬ್ಬದ ಕಾಣಿಕೆ. ಬೇಂದ್ರೆ ಸತ್ಕಾರ ಸಮಿತಿಯಿಂದ ಅರ್ಪಿತವಾದುದು. ‘ಜೀವನ’ ಪತ್ರಿಕೆಯ ವಿಶೇಷ ಸಂಚಿಕೆ.

‘ಜೀವನ’ ಪತ್ರಿಕೆಯ ಈ ವಿಶೇಷ ಸಂಚಿಕೆಯು ಶ್ರೀ ಬೇಂದ್ರೆಯವರಿಗೆ ಕಾಣಿಕೆಯಾಗಿ-೫೦ ನೆಯ ಹುಟ್ಟುಹಬ್ಬದ ಉಡುಗರೆಯಾಗಿ ಅರ್ಪಿತವಾಗಿದೆ. ಇದರಲ್ಲಿ ‘‘ನನ್ನ ಮುದ್ದು ಮೋಹಕ ಕವಿ’’ ಎಂಬ ಶ್ರೀ ಮುದವೀಡು ಕೃಷ್ಣರಾಯರ ಲೇಖನದಿಂದ ಮೊದಲ್ಗೊಂಡು ಸುಮಾರು ಇಪ್ಪತ್ತು ಬೇರೆ ಬೇರೆ ಬರಹಗಳಿವೆ. ಅವುಗಳಲ್ಲಿ ಉಪಾಸಕ ಬೇಂದ್ರೆ, ತಪಸ್ವಿ ಬೇಂದ್ರೆ, ಮಾತುಗಾರ ಬೇಂದ್ರೆ, ಸಾಹಿತ್ಯಯೋಗಿ ಬೇಂದ್ರೆ, ಕವಿವರ್ಯ ಬೇಂದ್ರೆ, ಮಿತ್ರ ಬೇಂದ್ರೆ, ಮಿತ್ರವರ್ಯ ಬೇಂದ್ರೆ, ನಮ್ಮ ಬೇಂದ್ರೆಯವರು’ ಎಂಬ ಲೇಖನಗಳ ತಲೆಬರಹಗಳೇ ಬೇಂದ್ರೆಯವರ ವ್ಯಕ್ತಿತ್ವದ ಬೇರೆ ಬೇರೆ ಮೈಗಳನ್ನು ತೋರಿಸುತ್ತವೆ. ಶ್ರೀ ಮುದವೀಡು, ಶ್ರೀ ಡಿ. ವಿ. ಗುಂಡಪ್ಪ, ಶ್ರೀ ಮಂಜೇಶ್ವರ ಗೋವಿಂದ ಪೈ ಇವರೇ ಮೊದಲಾದ ಹಿರಿಯ ಸಾಹಿತಿಗಳ ಕರುಳಿನ ಹರಕೆಗಳಿಂದ ಈ ಸಂಚಿಕೆಯು ಸುಂದರವೂ ಸಂಗ್ರಾಹ್ಯವೂ ಆಗಿದೆ.

ಪ್ರಪಂಚ ಪಾಣಿಪತ್ತು

ನಾಟಕಕಾರರು. ಶ್ರೀರಂಗ, ಪ್ರಕಾಶಕರು. ರಂಗಮಂಗ ಪ್ರಕಾಶನ ಧಾರವಾಡ, ಪುಟಗಳು ೧೧೬, ಬೆಲೆ ೧—೮-೦

ಪಿಂಚಣಿದಾರ ಪ್ರಲ್ಹಾದರಾಯನಿಗೆ ವಕೀಲ ರಂಗಣ್ಣ, ಅಂಗಡಿಕಾರ ವೆಂಕಣ್ಣ, ನಿರುದ್ಯೋಗಿ ಶ್ರೀಪತಿ ಎಂ ಎ, ಎಂಬ ಮೂವರು ಪ್ರಬುದ್ಧ ಮಕ್ಕಳು. ಶ್ರೀಪತಿ ಮತ್ತು ಅವನ ಹೆಂಡತಿ ರಮಾನ ಹೊಟ್ಟೆಗೆ ಯಾರು ಹಾಕಬೇಕೆಂಬ ನೆವದಿಂದ ಈ ಮೂವರು ಮಕ್ಕಳು ಪಾಲು ಹಂಚಿಕೊಳ್ಳಲು ಪ್ರಯತ್ನಿಸುತ್ತಾರೆ. ಪಾಲು ಮಾಡಿಕೊಳ್ಳುವ ಅರ್ಭಟೆಯಲ್ಲಿ ಹಿರಿಯಣ್ಣಂದಿರು, ಪ್ರಲ್ಹಾದರಾಯರು ಸೇರಿ ಶ್ರೀಪತಿಗೆ ಸಲ್ಲದ ಮಾತು ಅಡುತ್ತಾರೆ. ಕೂಡಲೆ ಅವನು ತನ್ನ ಪಾಲು ಕೇಳಿದರೆ ನಿನ್ನ ಶಿಕ್ಷಣಕ್ಕಾಗಿ ವೆಚ್ಚ ಮಾಡಿದ್ದೇ ಹೆಚ್ಚಾಗಿದೆ ಎನ್ನುತ್ತಾರೆ. ಅಗ ಶ್ರೀಪತಿ ತನ್ನ ಹೆಂಡತಿಯನ್ನು ಕಟ್ಟಿಕೊಂಡು ಮನೆಯಿಂದ ಹೊರಬಿದ್ದು ಮನೆಯ ಆಳು ಬಸನಿಂಗನೊಡನೆ ಊರ ಹೊರಗೆ ಗುಡಿಸಲು ಕಟ್ಟಿಕೊಂಡು ಇರಹತ್ತುವನು. ಊರಲ್ಲಿ ಹಬ್ಬಿದ್ದ ಪ್ಲೇಗದಲ್ಲಿ ಬಲಿಯಾದವರ ಸೇವೆ ಕೈಕೊಳ್ಳುವನು. ಆದರೆ ರಮಾಗೆ ಪ್ಲೇಗ ಅಂಟಿಕೊಂಡು ಸತ್ತುಹೋಗಲು ಅವಳ ಶವ ಸಾಗಿಸಲಿಕ್ಕೆ ಯಾರೂ ಬಾರದ್ದರಿಂದ ಶ್ರೀಪತಿ ಬಸಲಿಂಗನೊಡನೆ ಅವಳ ಶವದ ವ್ಯವಸ್ಥೆ ಮಾಡುವನು. ನಂತರ ಪ್ರಲ್ಹಾದರಾಯನು ಶ್ರೀಪತಿಯನ್ನು ಮನೆಗೆ ಕರೆದುಕೊಂಡು ಹೋಗಬೇಕೆಂದು ಕರೆಯಲು ಬಂದಾಗ ಶೂನ್ಯಮಯ ಶ್ರೀಪತಿಯು ತಿರುಗಿ ಮನೆಗೆ ಹೋಗಲೊಪ್ಪದೆ ಬಸನಿಂಗನೊಡನೆ ದುಡಿದು ತಿನ್ನಲು ಹೊರಟು ಹೋಗುವನು.

ಪ್ರಪಂಚವನ್ನು ಪಾಣಿಪತ್ತೆಂದೇ ನಂಬಿ ಸದಾ ಕಲಹ ಸನ್ನದ್ಧರಾಗಿರುವ ರಂಗಣ್ಣ--ವೆಂಕಣ್ಣ, ಸ್ಥಿತಪ್ರಜ್ಞನಂತಿರುವ ಶ್ರೀಪತಿ, ಪ್ರಪಂಚ ಜರ್ಜರಿತ ಪ್ರಲ್ಹಾದರಾಯ ಆದರ್ಶ ಸತಿ ರಮಾ, ಖಿಷ್ಠಾವಂತ ಆಳು ಬಸನಿಂಗ ಇವರೆಲ್ಲರ ಪಾತ್ರಗಳು ಚನ್ನಾಗಿ ಒಡಮೂಡಿವೆ. ಒಂದೇ ಪಡಸಾಲೆಯಲ್ಲಿ ಮೂರು ಭಾಗಗಳನ್ನು ಮಾಡಿ ತನ್ನ ಕಡೆಯ ಭಾಗಕ್ಕೆ ಒಬ್ಬನು ಇಟ್ಟಂಗಿಯ ಗೋಡೆಯನ್ನೇರಿಸ ಹೊರಟರೆ ಇನ್ನೊಬ್ಬನು ಕಲ್ಲಿನ ಗೋಡೆ ಏರಿಸುವೆನೆಂದು ಗರ್ಜಿಸುವ ಅಣ್ಣತಮ್ಮ ರಂಗಣ್ಣ—ವೆಂಕಣ್ಣ ಮತ್ತು ಒಂದುತಂಬಿಗೆಗೆ ತಳ ತಾನುಹಾಕಿಸಿದ್ದರಿಂದ ಅದನ್ನು ಕಿತ್ತುಕೊಂಡು ಬರಿ ಕಂಟವನೆಸೆಯುವ ಅತ್ತಿಗೆ-ನೆಗೆಣ್ಣೆಯರು ತಮ್ಮ ಕೃತಿಯಲ್ಲಿ ಅತಿರೇಕವನ್ನು ತೋರಿಸುತ್ತಿದ್ದಾರೆಂದು ಸಾಮಾನ್ಯರಿಗೆನಿಸಿದ-ೂ ದಾಯಾದಿ ದ್ವೇಷ ತುಂಬಿದವರ ಮನಸ್ಸನ್ನು ಸಂಪೂರ್ಣವಾಗಿ ಬಿಚ್ಚಿ ತೋರಿಸಿದ ಶ್ರೀರಂಗರು ಅಭಿನಂದನೀಯರು. ಈ ದೃಶ್ಯವನ್ನು ನೋಡುವಾಗ ಅವರ ನಡತೆಗೆ ಪ್ರೇಕ್ಷಕರು ಮನಮುಟ್ಟಿ ನಕ್ಕರೂ ಅದರಲ್ಲಿಯ ಅಣಕು ಕೂಡ ಅಷ್ಟೇ ತೀವ್ರವಾಗಿದೆ. ಮನೆತನದ ಸುವಿಚಾರದಂತಿರುವ ಶ್ರೀಪತಿಯನ್ನು ಎಲ್ಲರೂ ಅಲಕ್ಷಿಸುತ್ತಾರೆ. ಕೊನೆಗೆ ಅವನನ್ನು ಹೊರಗೆ ಹಾಕುತ್ತಾರೆ. ಅವರ ಈ ನಾಟಕ ಸಮಾಜವನ್ನು ಚನ್ನಾಗಿ ಚಿತ್ರಿಸುತ್ತದೆ. ಶ್ರೀರಂಗರು ಏಕತ್ರ ಕುಟುಂಬದ ದುಷ್ಪ ಚಿತ್ರವನ್ನು ಇದರಲ್ಲಿ ಮನಮುಟ್ಟುವಂತೆ ತೋರಿಸಿ ಆ ಬಗ್ಗೆ ವಿಚಾರ ಮಾಡಹಚ್ಚಿರುವರು. ಈ ನಾಟಕವು ಅವರು ಆಡಿದಾಗಲ್ಲೆಲ್ಲ ಮೆಚ್ಚುಗೆ ಪಡೆದ ನಾಟಕವಾಗಿದೆ.

ಡಾ. ಕೋಟ್ನಿಸ

ಅನುವಾದಕರು— ತರಾಸು, ಪ್ರಕಾಶಕರು ಪ್ರಚಲಿತ ಸಾಹಿತ್ಯ ಬೆಂಗಳೂರ ನಗರ, ಪುಟಗಳು--- ೧೧೩, ಬೆಲೆ ಒಂದೂಕಾಲು ರೂಪಾಯಿ.

ಜಪಾನದ ವಿರುದ್ಧ ಚೀನವು ಹೂಡಿದ ಯುದ್ಧದಲ್ಲಿ ಚೀನೀಯರಿಗೆ ನೆರವಾಗಲೆಂದು ಭಾರತದಿಂದ ಒಂದು ವೈದ್ಯಕ ಪಡೆಯನ್ನು ಕಳಿಸಬೇಕೆಂದು ಕಾಂಗ್ರೆಸು ೧೯೩೮ ರಲ್ಲಿ ನಿರ್ಧರಿಸಿತು. ಅಗ ಆ ಪಡೆಯಲ್ಲಿ ತೆರಳಿದ ಅರು ಡಾಕ್ಟರರ ಒಬ್ಬರು ಚೀನದಿಂದ ಹಿಂತಿರುಗಲಿಲ್ಲ. ಅವರೇ ಡಾ. ದ್ವಾರಕಾನಾಥ ಕೋಟ್ನಿಸರು. ಶ್ರೀ ಕೆ ಎ. ಅಬ್ಬಾಸರು ಇಂಗ್ಲೀಷದಲ್ಲಿ ಬರೆದಿರುವ ಇವರ ಚೀನದಲ್ಲಿಯ ಕಾರ್ಯದ ವಿವರಣೆಯ ಗ್ರಂಥವನ್ನೇ ಈಗ ಅನುವಾದಿಸಿ ಕನ್ನಡಿಗರಿಗೆ ನೀಡಿದ್ದು ಸ್ತುತ್ಯ ಪ್ರಯತ್ನ.

ನಿಷ್ಕೃತಿ

ಅನುವಾದಕ— ಎಸ್. ಅನಂತನಾರಾಯಣ. ಪ್ರಕಾಶಕರು— ಸಾಹಿತ್ಯ ಮಂದಿರ ಮೈಸೂರು. ಪುಟಗಳು----೧೦೪, ಬೆಲೆ ಒಂದು ರೂಪಾಯಿ.

ಏಕತ್ರ ಕುಟುಂಬದಲ್ಲಿ ಸಂಪಾದಿಸಲಾಗದವನ ದುಸ್ಥಿತಿಯನ್ನು ಕುರಿತು ಶರಶ್ಚಂದ್ರ ಚಟರ್ಜಿಯವರು ಒಂದು ಸುಂದರ ಕಾದಂಬರಿಯ ಅನುವಾದವಿದು ಇದು ಎರಡನೆಯ ಸಲ ಮಾಡಿದ ಅನುವಾದ. ಬೇರೊಬ್ಬರು ಈ ಕಾದಂಬರಿ ಅನುವಾದವನ್ನು ಕೆಲ ವರ್ಷಗಳ ಹಿಂದೆ ಪ್ರಸಿದ್ಧಿಸಿದಂತಿದೆ. ಈಗ ಪ್ರಸಿದ್ಧವಾಗಿರುವ ಈ ಕಾದಂಬರಿ ಎಲ್ಲ ರೀತಿಯಿಂದಲೂ ಚನ್ನಾಗಿದೆಂದು ಹೇಳಬಹುದು.

ಮಹತ್ವದ ನಿರ್ಣಯ

ಮುಂಬಯಿಯಲ್ಲಿ ಅಖಿಲಭಾರತ ಕಾಂಗ್ರೆಸ ಸಮಿತಿಯು ಎರಡು ದಿನ ಸಭೆ ಸೇರಿ ಪಾಸು ಮಾಡಿದ ಮಹತ್ವದ ನಿರ್ಣಯಗಳನ್ನು ಇದೇ ಸಂಚಿಕೆಯಲ್ಲಿ ಬೇರೆಡೆ ಕೊಟ್ಟಿದ್ದೇವೆ. ಕಾಂಗ್ರೆಸ ಕಾರ್ಯಕಾರೀ ಸಮಿತಿಯು ದಿಲ್ಲಿಯಲ್ಲಿ ಸೇರಿ ಬ್ರಿಟಿಶ ಮಂತ್ರಿತ್ರಯರ ನಡುಗಾಲ ಸರಕಾರ ಯೋಜನೆಯನ್ನು ನಿರಾಕರಿಸಿ ದೀರ್ಘಾವಧಿ ಯೋಜನೆಯನ್ನು ಸ್ವೀಕರಿಸುವ ಗೊತ್ತುವಳಿ ಸ್ವೀಕರಿಸಿದ್ದಷ್ಟೆ. ಅದಕ್ಕೆ ರಾಷ್ಟ್ರದ ಮನ್ನಣೆ ಪಡೆಯುವುದೆ ಏ. ಆಯ. ಸಿ. ಸಿ. ಕರೆದುದರ ಉದ್ದೇಶವಾಗಿತ್ತು. ಕಾರ್ಯಸಮಿತಿಯ ಗೊತ್ತುವಳಿ ೨೦೪. ವಿರುದ್ಧ ೫೧ ಮತಗಳಿಂದ ಸ್ವೀಕೃತವಾಗಿ ಕಾಂಗ್ರೆಸ ವರಿಷ್ಠರ ಬಗ್ಗೆ ಇದ್ದ ರಾಷ್ಟ್ರದ ವಿಶ್ವಾಸವು ಸ್ಪಷ್ಟವಾಗಿ ವ್ಯಕ್ತವಾಯಿತು. ಕಾಂಗ್ರೆಸ ವರಿಷ್ಠರ ತೀರ್ಮಾನದ ಬಗ್ಗೆ ದೇಶದಲ್ಲಿ ಚರ್ಚೆ ನಡೆದು ‘ಕಾಂಗ್ರೆಸ್ಸು ಬ್ರಿಟಿಶ್ ಮಂತ್ರಿಗಳ ಬಲೆಯಲ್ಲಿ ಬಿದ್ದಿತು, ಮಂತ್ರಿತ್ರಯರು ಕಾಂಗ್ರೆಸ ವರಿಷ್ಠರನ್ನು ಮೋಸಗೊಳಿಸಿದರೆ’ಂದು ಮುಂತಾಗಿ ಉಗ್ರ ಪಕ್ಷದವರೆಂದು ಹೇಳಿಕೊಳ್ಳುವವರು ಟೀಕಿಸಹತ್ತಿದ್ದರು. ಅಂತೆಯೆ ಕಾಂಗ್ರೆಸ ವರಿಷ್ಠರು ಏ. ಆಯ. ಸಿ. ಸಿ. ಯನ್ನು ಕರೆದು ತಾವು ಮಾಡಿದ್ದು ಯಥೋಚಿತವೆಂಬ ಮುದ್ರೆಯನ್ನು ಪಡೆಯಬೇಕಾಯಿತು. ಕಾಂಗ್ರೆಸ್ಸು ಸ್ವೀಕರಿಸಿದ ಧೋರಣವು ಅತ್ಯಂತ ಸಮಂಜಸವಾಗಿದೆಂದು ಸೂಕ್ಷ್ಮ ನಿರೀಕ್ಷಕರಿಗೆ ಹೊಳೆಯದಿರದು. ಕಾಂಗ್ರೆಸ್ಸು ದೀರ್ಘಾವಧಿ ಯೋಜನೆಯನ್ನು ಸ್ವೀಕರಿಸಿದ್ದು ಹಿಂದುಸ್ತಾನದ ಸ್ವತಂತ್ರ ಘಟನೆಯನ್ನು ರಚಿಸಲು. ಇಂಥದೊಂದು ಘಟನೆಯನ್ನು ಸಿದ್ಧಪಡಿಸಬೇಕೆಂಬ ಹಂಬಲ ಕಾಂಗ್ರೆಸಿಗೆ ಬಹಳ ದಿನಗಳಿಂದ ಇದ್ದಿತು. ಅಂಥ ಸಮಯ ಪ್ರಾಪ್ತವಾದಾಗ ಅದನ್ನು ವ್ಯರ್ಥ ಹೋಗಗೊಡುವುದೇಕೆ ಎಂದು ಕಾಂಗ್ರೆಸ್ಸು ಯೋಚಿಸಿತು. ಘಟನಾ ಸಮಿತಿಯ ಯೋಜನೆ ಸದೋಷವಾಗಿದ್ದರೂ ಕಾಂಗ್ರೆಸ್ಸು ಅದನ್ನು ಸ್ವೀಕರಿಸಿದ್ದೇಕೆ ಎಂಬುದಕ್ಕೆ ಕಾಂಗ್ರೆಸ್ ಅಧ್ಯಕ್ಷ ಪಂಡಿತ ಜವಾಹರಲಾಲರು ಮಾರ್ಮಿಕ ಉತ್ತರ ಕೊಟ್ಟಿರುವರು. ‘ಘಟನಾ ಸಮಿತಿಯು ಹಿಂದೀ ಸಮಸ್ಯೆಯನ್ನು ಬಿಡಿಸುವ ಒಂದು ಸಾಧನವೇ ಹೊರತು ಸರ್ವಸ್ವವಲ್ಲ; ಒಂದು ವೇಳೆ ಘಟನಾ ಸಮಿತಿಯ ದೋಷಗಳ ಮೂಲಕ ನಮ್ಮ ಮುನ್ನಡೆಗೆ ತಡೆಯುಂಟಾಗುವದೆಂದೆನಿಸಿದರೆ ಅಲ್ಲಿಂದ ಹೊರಬರುವ ಸ್ವಾತಂತ್ರ್ಯ ಕಾಂಗ್ರೆಸ್ಸಿಗಿದೆ. ಇದೊಂದು ಕ್ರಾಂತಿಕಾರಕ ಮುತ್ಸದ್ದಿತನವೆ ಹೊರತು ಸಂಧಿಸಾಧಕತೆಯಲ್ಲ’ ಎಂದು ಪಂಡಿತರು ಸ್ಪಷ್ಟ ಹೇಳಿರುವರು. ಕ್ರಾಂತಿ ಬರಿ ಶಬ್ದಗಳಲ್ಲಿರುವುದಿಲ್ಲ. ಕಾಲಕ್ಕೆ ತಕ್ಕಂತೆ ಕೃತಿಮಾಡಿ ತೋರಿಸುವಲ್ಲಿ ಇರುತ್ತದೆ. ಈ ಮಾತನ್ನು ನೆನೆದು ಉಗ್ರಗಾಮಿಗಳೆಂದು ಹೇಳಿಕೊಳ್ಳುವವರು ಅಖಿಲ ಭಾರತ ಕಾಂಗ್ರೆಸ ಸಮಿತಿಯ ನಿಚ್ಚಳ ನಿರ್ಣಯಕ್ಕನುಸಾರವಾಗಿ ಕಾರ್ಯ ಮಾಡಿ ಕಾಂಗ್ರೆಸ್ಸಿನ ಸ್ವಾತಂತ್ರ್ಯ ಸಂಗ್ರಾಮವನ್ನು ಮುಂದರಿಸಬೇಕೆಂದು ಕೇಳಿಕೊಳ್ಳುತ್ತೇವೆ.

ಸಂಸ್ಥಾನಗಳಲ್ಲಿ ಸುಧಾರಣೆಗಳು

ಕಳೆದವಾರ ಸೊಂಡೂರ ಸಂಸ್ಥಾನದಲ್ಲಿ ಮಹಾರಾಜರು ಕೆಲವು ಸುಧಾರಣೆಗಳನ್ನು ಸಾರಿ ಪ್ರಜಾಪರ ಮಂತ್ರಿಗಳನ್ನು ಆರಿಸಿಕೊಂಡಿರುವರು. ಲೋಕನಿಯುಕ್ತ ಮಂತ್ರಿಗಳನ್ನು ಮಹಾರಾಜರು ಇಂತು ನೇಮಿಸಿಕೊಂಡಿದ್ದು ಸೊಂಡೂರಿನ ರಾಜಕೀಯ ಸುಧಾರಣೆಗಳಲ್ಲಿ ಒಂದು ಹೆಜ್ಜೆ ಮುಂದಿಟ್ಟಂತೆಯೆ ಸೈ. ಹೈದ್ರಾಬಾದ ಸಂಸ್ಥಾನದಲ್ಲಿ ಇಷ್ಟರಲ್ಲಿಯೆ ಮಹತ್ವದ ಸುಧಾರಣೆಗಳು ಜಾರಿಯಲ್ಲಿ ಬರಲಿವೆ. ಸಂಸ್ಥಾನ ಕಾರ್ಯಸಮಿತಿಯ ಅಧ್ಯಕ್ಷರಾದ ಛತ್ತಾರಿ ನವಾಬರು ಈ ಸಂಬಂಧದಲ್ಲಿ ಹೇಳುತ್ತ ಬರುವ ಅಕ್ಟೋಬರದಲ್ಲಿ ಹೊಸ ಶಾಸನ ಸಭೆ ಸೇರಿಸಲಾಗುವದು ಮತ್ತು ಹೊಸ ಸುಧಾರಣೆಗಳ ವಿವರಗಳ ಘೋಷಣೆ ಬೇಗನೆ ಅಗಲಿದೆಂದು ಹೇಳಿದರು. ಈ ಹೊಸ ಶಾಸನ ಸಭೆಯಲ್ಲಿ ಎಲ್ಲ ವರ್ಗದಜನರಿಗೂ ಪ್ರಾತಿನಿಧ್ಯ ದೊರೆಯುವಂತೆ ಏರ್ಪಡಿಸಲಾಗುವದು. ಹೊಸ ಶಾಸನ ಸಭೆಯ ಸದಸ್ಯರೊಳಗಿಂದ ಇಬ್ಬರನ್ನು ಮಂತ್ರಿಮಂಡಳದಲ್ಲಿ ತೆಗೆದುಕೊಳ್ಳಲಾಗುವದಂತೆ. ಇದೊಂದು ಬಗೆಯ ದ್ವಿದಲರಾಜ್ಯಪದ್ಧತಿ ಇಂಥ ರಾಜ್ಯ ಪದ್ಧತಿ ಸದೋಷವೆಂದು ಬ್ರಿಟಿಶ ಹಿಂದುಸ್ತಾನದಲ್ಲಿ ಅನುಭವದಿಂದ ಸಿದ್ಧವಾಗಿದೆ. ವೃತ್ತಿ ಮೂಲಕ ಮತಾಧಿಕಾರದಿಂದ ಪ್ರತ್ಯೇಕತೆಯ ವೃತ್ತಿಯು ಬೆಳೆಯುವದು ಇದು ರಾಷ್ಟ್ರದ ಏಳಿಗೆಗೆ ಗಂಡಾಂತರಪ್ರದವಾಗಿದೆ. ಜಗತ್ತು ಭರದಿಂದ ಮುಂದೋಡುತಿರುವಾಗ ಇಂಥ ಖಿಲಪಟ್ಟ ಪದ್ಧತಿಯನ್ನು ಜಾರಿಯಲ್ಲಿ ತಂದು ಆ ಬಗ್ಗೆ ಆತ್ಮಸಮರ್ಥನೆ ಮಾಡಿಕೊಳ್ಳಲಾಗಿದೆ. ಈ ವರೆಗ ಈ ಸಂಸ್ಥಾನಗಳಲ್ಲಿ ನಡೆದಿದ್ದ ಪ್ರತಿಗಾಮಿ ಆಡಳಿತಕ್ಕೆ ಸದ್ಯದ ಸುಧಾರಣೆಗಳನ್ನು ಹೋಲಿಸಿದರೆ ಸ್ವಲ್ಪ ಪ್ರಗತಿ ತೋರಬಹುದು. ಆದರೆ ಇಷ್ಟರಿಂದ ಜನತೆ ಯಾವ ರೀತಿಯಿಂದಲೂ ಸಮಾಧಾನ ಹೊಂದಲಾರದು. ಸಂಸ್ಥಾನಗಳಲ್ಲೆಲ್ಲ ಇಂದು ಹೊಣೆಗಾರ ರಾಜ್ಯ ಸ್ಥಾಪಿತವಾಗುವದು ಅತ್ಯವಶ್ಯವಾಗಿದೆ. ಬ್ರಿಟಿಶ್ ಹಿಂದುಸ್ತಾನ ಸಂಪೂರ್ಣ ಸ್ವಾತಂತ್ರ್ಯದತ್ತ ಹೆಜ್ಜೆ ಇಡುತಿರುವಾಗ ಸಂಸ್ಥಾನಗಳು ಕೇವಲ ಒಬ್ಬೊಬ್ಬ ಪ್ರಜಾಪರ ಮಂತ್ರಿಗಳಿಂದ ಸಂತುಷ್ಟವಾಗಲಾರವು. ಈ ಮಾತನ್ನು ಮನದಂದು ತಮ್ಮ ತಮ್ಮ ಸಂಸ್ಥಾನಗಳಲ್ಲಿ ಹೊಣೆಗಾರ ರಾಜ್ಯ ಪ್ರಸ್ಥಾಪಿಸಲು ಕೂಡಲೆ ಅಣಿಯಾಗಬೇಕು. ಅದಾಗುವ ವರೆಗೆ ಉಳಿದೆಲ್ಲ ಸುಧಾರಣೆಗಳು ಕೇವಲ ‘ಫಾರ್ಸೆಂದೇ ಹೇಳಬೇಕಾಗುವದು.

ಸಂಪಾದಕೀಯ ✻ ✻ ✻ ✻ ✻ ✻

ಟೀಕೆ-ಟಿಪ್ಪಣಿಗಳು

ಅನ್ಯಾಯದ ನಿರ್ಣಯ

ಜಾಗತಿಕ ಯುದ್ಧಾನಂತರದ ಪರಿಣಾಮದಿಂದ ಹಿಂದುಸ್ತಾನವಿಂದು ಆಹಾರ ಮತ್ತು ಬಟ್ಟೆಯ ಕೊರತೆಯಿಂದ ಬಳಲುತಿದೆ. ಅನೇಕ ಕಡೆ ಮರ್ಯಾದೆ ಮುಚ್ಚಿಕೊಳ್ಳಲು ಕೂಡ ಬಟ್ಟೆ ಸಿಕ್ಕದಿದ್ದ ಉದಾಹರಣೆಗಳುಂಟು. ಈ ಪರಿಸ್ಥಿತಿಯಲ್ಲಿ ಬಟ್ಟೆಯ ನಿಯಂತ್ರಣಾಧಿಕಾರಿಗಳು ಜನತೆಗೆ ಕಡಮೆ ಬೆಲೆಯಲ್ಲಿ ಸಾಕಷ್ಟು ಬಟ್ಟೆ ಸಿಕ್ಕುವಂತೆ ನೋಡಿಕೊಳ್ಳುವುದು ಕ್ರಮಪ್ರಾಪ್ತವಾಗಿತ್ತು. ಆದರೆ ಅಧಿಕಾರಿಗಳು ಅದನ್ನು ಬಿಟ್ಟುಗೊಟ್ಟು ಹಿಂದುಸ್ತಾನದಲ್ಲಿ ತಯಾರಾಗುವ ಉರುಟು ಬಟ್ಟೆಯ ಬೆಲೆ ಇದೆ ಅಗಸ್ಟ ೧ ರಿಂದ ಏರುವುದೆಂದು ಸಾರಿರುವರು. ಬಟ್ಟೆಯ ಬೆಲೆಯಲ್ಲದೆ ನೂಲಿನ ಪರಮಾವಧಿ ಬೆಲೆಯನ್ನೂ ಏರಿಸುವರು. ಈ ಸುದ್ದಿಯನ್ನು ಕೇಳಿ ಹಿಂದೀಯರು ವಿಶೇಷತಃ ಬಡವರು ನಿರಾಸೆಯ ನಿಟ್ಟುಸಿರು ಬಿಡುವಲ್ಲಿ ಸಂದೇಹವಿಲ್ಲ. ಈ ಹೊಸ ದರಗಳನ್ನು ನೋಡಿದರೆ ಬಡವರು ಬಟ್ಟೆಯನ್ನು ಕೊಳ್ಳುವ ಪರಿಸ್ಥಿತಿಯೇ ಉಳಿಯಲಿಲ್ಲೆಂಬುದು ಸ್ಪಷ್ಟವಾಗುವದು. ಕಲ್ಲಿದ್ದಲಿಯ ಅಭಾವ ಕೂಲಿಕಾರರ ದುಡಿತದ ಅವಧಿಯನ್ನು ಕಡಮೆ ಮಾಡಿದ್ದುದು ಮತ್ತು ಸಂಪು ಹರತಾಳ ಮೊದಲಾದ ಕಾರಣಗಳ ಮೂಲಕ ಬಟ್ಟೆಯ ಉತ್ಪಾದನ ಕಡಿಮೆಯಾಗಿ ಬೆಲೆಯನ್ನು ಏರಿಸಬೇಕಾದ ಪ್ರಸಂಗ ಬಂದಿತೆಂದು ನಿಯಂತ್ರಣ ಮಂಡಲದ ಅಧ್ಯಕ್ಷರು ಹೇಳಿರುವರು. ಹೀಗೆ ಉತ್ಪಾದನ ಕಡಿಮೆಯಾಗುತಿದೆಂದು ಹೇಳುವಾಗಲೆ ಪರದೇಶಗಳಿಗೆ ಕಳ್ಳ ಮಾರ್ಗವಾಗಿ ಬಟ್ಟೆ ಸಾಗಿಸಲಾಗುತಿದೆಂಬುದನ್ನು ಅಧಿಕಾರಿಗಳು ಪೂರ್ಣವಾಗಿ ಅಲ್ಲಗಳೆಯಲಾರರು. ಬೆಲೆ ಏರಿಸುವ ಈ ನಿರ್ಣಯಕ್ಕೆ ಕೂಲಿಕಾರ ಪ್ರತಿನಿಧಿಗಳು ಕೂಗಿಕೊಂಡರೂ ಗಿರಣಿಯೊಡೆಯರ ಪ್ರತಿನಿಧಿಗಳು ಅತ್ತ ಗಮನಿಸಲಿಲ್ಲ. ಈ ಮಂಡಲದಲ್ಲಿರುವ ೨೫ ಸದಸ್ಯರಲ್ಲಿ ಕೇವಲ ಐವರು ಮಾತ್ರ ಕೆಲಸಗಾರರ ಪ್ರತಿನಿಧಿಗಳೆಂಬುದನ್ನು ನೋಡಿದರೆ ಇಲ್ಲಿ ಸ್ವೀಕರಿಸಲಾಗುತಿರುವ ನಿರ್ಣಯಗಳು ಕೇವಲ ಗಿರಣಿಗಾರರ ಹಿತದ ದೃಷ್ಟಿಯಿಂದಲೇ ಎಂಬುದು ಸ್ಪಷ್ಟವಾಗುವದು. ಹೊರಗಿನಿಂದ ಬರುವ ನಯವಾದ ಬಟ್ಟೆ ಮತ್ತು ನೂಲನ್ನು ಬಿಟ್ಟು ಇಲ್ಲಿಯೆ ತಯಾರಾಗುವ ಉರುಟು ನೂಲು ಮತ್ತೆ ಬಟ್ಟೆಯ ಬೆಲೆ ಏರಿಸುವದೆಂದರೆ ಬಡವರ ಮೇಲೆಯೆ ಹೆಚ್ಚು ಕರವನ್ನು ಹಾಕಿದಂತೆ ಬಡವರ ಜೀವನ ವೆಚ್ಚ ಹೆಚ್ಚುತಿರುವುದರಿಂದಲೆ ಎಲ್ಲೆಲ್ಲಿಯೂ ಸಂಪಿನ ಮಾತು ಕೇಳಬರುತಿವೆ. ಸರಕಾರಿ ನೌಕರಿಯಲ್ಲಿದ್ದವರೂ ಸಂಪು ಹೂಡುತಿರುವರು ಹೂಡಿರುವರು. ಹೀಗೆ ಪರಿಸ್ಥಿತಿಯಿದ್ದರೂ ಸರಕಾರದವರು ಬಡವರ ಜೀವನ ವೆಚ್ಚವನ್ನು ಕಡಮೆ ಮಾಡುವ ಉಪಾಯ ಯೋಜಿಸುವ ಬದಲು ಬಟ್ಟೆ ಬೆಲೆ ಮೊದಲಾದ್ದನ್ನು ಏರಿಸಿ ಅದನ್ನು ಮತ್ತಷ್ಟು ಹೆಚ್ಚಿಸುವ ಧೋರಣ ಸ್ವೀಕರಿಸಿದ್ದು ಖಂಡನೀಯವಾಗಿದೆ. ಹಿಂದುಸ್ಥಾನ ಸರಕಾರದವರು ಕೂಡಲೆ ಇತ್ತ ಗಮನಿಸಿ ಬಟ್ಟೆ ಮತ್ತು ನೂಲಿನ ಬೆಲೆಯನ್ನು ಏರಿಸಬಾರದೆಂದು ಆಗ್ರಹಪಡಿಸುತ್ತೇವೆ.

ಸಿಂಧ ಮಂತ್ರಿಮಂಡಳ

ಸಿಂಧ ಶಾಸನಸಭೆಯಲ್ಲಿ ಮುಸ್ಲಿಂ ಲೀಗಿಗೆ ನಿಶ್ಚಿತ ಬಹುಮತವಿಲ್ಲದಿದ್ದರೂ ಗವರ್ನರರು ಮಂತ್ರಿಮಂಡಳ ಸ್ಥಾಪಿಸಲು ಆ ಪಕ್ಷಕ್ಕೆ ಅವಕಾಶ ಕೊಟ್ಟದ್ದರಿಂದ ಮೇಲಿಂದ ಮೇಲೆ ಅದಕ್ಕೆ ಗಂಡಾಂತರ ಬರುತಿರುವುವು. ಕೇವಲ ಯುರೋಪಿಯನ್ ಪಕ್ಷದ ಸಹಕಾರದಿಂದ ಅಸ್ತಿತ್ವವನ್ನುಳಿಸಿಕೊಂಡಿದ್ದ ಹಿದಾಯತುಲ್ಲಾ ಮಂತ್ರಿಮಂಡಳದಲ್ಲಿಯ ಇಬ್ಬರು ಸದಸ್ಯರು ಪಕ್ಷಕ್ಕೆ ರಾಜೀನಾಮೆ ಕೊಟ್ಟು ವಿರೋಧಿ ಪಕ್ಷವನ್ನು ಸೇರಿರುವರು. ಇದರಿಂದ ಲೀಗ ಮಂತ್ರಿಮಂಡಳವು ತತ್ತರಿಸಹತ್ತಿದೆ. ವಿರೋಧಿ ಪಕ್ಷದ ಧುರೀಣರಾದ ಶ್ರೀ ಸಯ್ಯದರು ಮಂತ್ರಿಮಂಡಳ ಪಕ್ಷದಲ್ಲೀಗ ಕೇವಲ ೨೫ ಸದಸ್ಯರಿರುವರೆಂದು ಹೇಳಿರುವರು. ಸಿಂಧ ಶಾಸನಸಭೆಯಲ್ಲಿ ಒಟ್ಟು ಸದಸ್ಯರ ಸಂಖ್ಯೆ ೬೦ ಇರುವದು. ಮಂತ್ರಿಮಂಡಳದ ಪಕ್ಷದಲ್ಲಿ ೨೫ ಸದಸ್ಯರೆ ಉಳಿದಿದ್ದರೆ ಅದು ಶಾಸನಸಭಾ ಸದಸ್ಯರ ವಿಶ್ವಾಸಕ್ಕೆ ಪಾತ್ರವಿಲ್ಲೆಂಬುದು ಸ್ಪಷ್ಟವಾಗುವುದು. ಈ ಪರಿಸ್ಥಿತಿಯಲ್ಲಿ ಹಿದಾಯತುಲ್ಲಾ ಮಂತ್ರಿಮಂಡಳದವರು ರಾಜೀನಾಮೆ ಕೊಟ್ಟು ಶಾಸನಸಭಾ ಸದಸ್ಯರ ಬಹುಮತದ ಬೆಂಬಲವುಳ್ಳ ಪಕ್ಷಕ್ಕೆ ಮಂತ್ರಿಮಂಡಳ ಸ್ಥಾಪಿಸುವ ಅವಕಾಶ ಕಲ್ಪಿಸಿಕೊಡಬೇಕು. ವಿರೋಧಿ ಪಕ್ಷದ ಧುರೀಣರಾದ ಶ್ರೀ ಸಯ್ಯದರು ಈಗಾಗಲೆ ಗವರ್ನರರಿಗೆ ಈ ಸಂಬಂಧದಲ್ಲಿ ಪತ್ರ ಬರೆದು ಸರ್ ಗುಲಾಮಹುಸೇನರಿಗೆ ರಾಜೀನಾಮೆ ಕೊಡಿರೆಂದು ತಿಳಿಸಿರೆಂದು ಸೂಚಿಸಿರುವರು. ಒಂದು ವೇಳೆ ಅವರು ನನ್ನೀ ಆಹ್ವಾನವನ್ನು ನಿರಾಕರಿಸಿ ಬಹುಮತದ ಬೆಂಬಲ ತಮಗಿದೆಂದು ಸಾಧಿಸುತಿದ್ದರೆ ಅವಿಶ್ವಾಸ ಗೊತ್ತುವಳಿ ಮಂಡಿಸಲು ಅಸ್ಪದ ಮಾಡಿಕೊಡಬೇಕೆಂದು ತಿಳಿಸಿದ್ದಾರೆ. ಸಯ್ಯದರವರ ಸೂಚನೆಗಳು ನ್ಯಾಯ್ಯವಾಗಿವೆ. ಮಂತ್ರಿಮಂಡಳದವರು ಇವೆರಡರಲ್ಲಿ ಯಾವುದೊಂದನ್ನೂ ಮಾಡದೆ ಹಾಗೆಯೆ ಅಧಿಕಾರದಲ್ಲುಳಿಯುವುದೆಂದರೆ ಏಕತಂತ್ರಿ, ಪ್ರತಿಗಾಮಿ ಆಡಳಿತವನ್ನು ನಡಿಸಿದಂತಾಗುತ್ತದೆ. ಆದರೆ ಘಟನಾ ಸಮಿತಿಯ ಸದಸ್ಯರನ್ನಾರಿಸುವುದಕ್ಕೆಂದು ಕರೆದ ಈ ಅಧಿವೇಶನದಲ್ಲಿ ಅವಿಶ್ವಾಸ ಗೊತ್ತುವಳಿ ಮಂಡಿಸಲು ಬರುವದಿಲ್ಲೆಂದು ಹೇಳಿ ಸರ್ ಗುಲಾಮ ಹುಸೇನರು ಪಾರಾಗುವ ಹಂಚಿಕೆ ನಡಿಸಿರುವರು. ಅದೇನೇ ಇದ್ದರೂ ಸದ್ಯ ಪರಿಸ್ಥಿತಿಯಲ್ಲಿ ಜನ ಇಂಥ ಆಡಳಿತವನ್ನು ಸಹಿಸಲಾರರೆಂಬುದು ನಿಶ್ಚಿತ.

ಶಾಂತಿ ಸಮ್ಮೇಲನ

ಟ್ರೀಸ್ಟದ ಸಂಬಂಧದಲ್ಲಿ ಮಂತ್ರಿಚತುಷ್ಟಯದಲ್ಲಿ ಒಡಂಬಡಿಕೆಯಾದುದರಿಂದ ಜಗತ್ತಿನಲ್ಲಿ ಶಾಂತಿಯ ಸುದಿನಗಳು ಸಮೀಪಿಸಿದವೆಂದೆನಿಸಹತ್ತಿದೆ. ಟ್ರೀಸ್ಟ ಬಂದರವನ್ನು ಅಂತರ್‌ರಾಷ್ಟ್ರೀಯ ಸೊತ್ತನ್ನಾಗಿ ಮಾಡುವಲ್ಲಿ ಯಶಸ್ವಿಗಳಾದ ಮಂತ್ರಿಶ್ರೇಷ್ಠರು ಹುರಿದುಂಬಿದವರಾಗಿ ಇದೇ ೨೯ ಕ್ಕೆ ಪ್ಯಾರಿಸಿನಲ್ಲಿ ಇಪ್ಪತ್ತೊಂದು ರಾಷ್ಟ್ರಗಳ ಶಾಂತಿ ಸಮ್ಮೇಲನವನ್ನು ಕರೆಯಬೇಕೆಂದು ನಿರ್ಧರಿಸಿ ಆಮಂತ್ರಣ ಪತ್ರಿಕೆಗಳನ್ನು ಕಳಿಸಿದ್ದಾರೆ. ನಿಜವಾಗಿ ವಿಚಾರ ಮಾಡಿದರೆ ಈ ಚತುರ್ ಮಂತ್ರಿ ಶ್ರೇಷ್ಠರೆ ಯುರೋಪಿನ ಶಾಂತಿಯನ್ನು ಅಷ್ಟೇ ಏಕೆ ಜಗತ್ತಿನ ಶಾಂತಿಯನ್ನು ಕೂಡ ನಿರ್ಣಯಿಸಬಲ್ಲರು: ಪ್ರಸ್ಥಾಪಿಸಬಲ್ಲರು. ಇಪ್ಪತ್ತೊಂದು ರಾಷ್ಟ್ರಗಳ ಪರಿಷತ್ತನ್ನು ಕರೆವ ಆವಶ್ಯಕತೆಯೆ ಇಲ್ಲ. ಏಕೆಂದರೆ ಉಳಿದ ರಾಷ್ಟ್ರಗಳೆಲ್ಲ ಈ ಮಂತ್ರಿಚತುಷ್ಟಯರ ಮಾತಿಗೇ ಹೊಗೊಡತಕ್ಕವು. ಅದರೂ ಉಳಿದ ೧೭ ರಾಷ್ಟ್ರಗಳನ್ನು ಕರೆದು ಯುರೋಪ ಶಾಂತಿಯ ಬಗ್ಗೆ ಚರ್ಚಿಸಿ ನಿರ್ಧರಿಸಬೇಕೆಂದು ಗೊತ್ತಾಗಿದೆ. ಈಗೇನೋ ಮಹಾಯುದ್ಧ ನಿಂತಿದೆ. ಆದರೆ ಜಗತ್ತಿನಲ್ಲಿ ಸ್ಥಿರವಾದ ಶಾಂತಿ ಸಂಸ್ಥಾಪಿತವಾಗಿಲ್ಲ. ಜಾವಾ, ಬರ್ಮಾ, ಮಲಯಾ, ಪಾಲಿಸ್ಟೈನ ಮೊದಲಾದ ಸಣ್ಣ ಸಣ್ಣ ರಾಷ್ಟ್ರಗಳಲ್ಲಿ ಇನ್ನೂ ಯುದ್ಧ ನಡೆದಿದೆ. ಜನ ಯುದ್ಧದ ಬೇಗೆಯಿಂದ ಬಳಲುತಿರುವರು. ಇದೆಲ್ಲ ನಿಂತು ಸರ್ವತ್ರ ಶಾಂತಿ ಪ್ರಸ್ಥಾಪಿತವಾದಾಗಲೆ ನಿಜವಾಗಿ ಯುದ್ಧದ ಭೀತಿ ತಪ್ಪಿದಂತಾಗುವದು. ಆದರೆ ಶಾಂತಿ ಎಂದಾಕ್ಷಣ ನಾಗರಿಕ ಚಟುವಟಿಕೆಗಳನ್ನೆಲ್ಲ ಹತ್ತಿಕ್ಕುವದೆಂದು ಅರ್ಥ ಮಾಡಬಾರದು. ಚತುರಾಷ್ಟ್ರಗಳು ಉಳಿದೆಲ್ಲ ರಾಷ್ಟ್ರಗಳ ಮೇಲೆ ತಮ್ಮ ಪ್ರಭುತ್ವ ನಡೆಸಬಯಸಿ ಅಲ್ಲಲ್ಲಿ ಶಾಂತಿಯನ್ನು ಪ್ರಸ್ಥಾಪಿಸಬಹುದು. ಆದರೆ ಇದು ನಿಜವಾದ ಶಾಂತಿಯಲ್ಲ. ಸ್ಮಶಾನ ಶಾಂತಿ. ಎಲ್ಲ ರಾಷ್ಟ್ರಗಳಿಗೂ ಸ್ವಾತಂತ್ರ್ಯ ದೊರೆತು ತಮ್ಮ ಸಾರ್ವಾಂಗಿಕ ಉನ್ನತಿ ಮಾಡಿಕೊಳ್ಳಲವಕಾಶ ದೊರೆತದ್ದಾದರೆ ಮಾತ್ರ ನಿಜವಾದ ಶಾಂತಿಯನ್ನು ಪ್ರಸ್ಥಾಪಿಸಿದಂತಾಗುವದು. ಕೂಡಲಿರುವ ಶಾಂತಿ ಪರಿಷತ್ತಿನಲ್ಲಿ ಇಂಥ ನಿಜವಾದ ಶಾಂತಿಯ ತಳಿಗಲ್ಲು ಹಾಕಲ್ಪಟ್ಟರೆ ಮಾತ್ರಅದು ಸಾರ್ಥಕವಾಗಬಹುದು ಆದರೆ ಇದು ಸಾಧ್ಯವಾಗದೇಕಾದರೆ ಪ್ರಬಲ ರಾಷ್ಟ್ರಗಳು ಸ್ವಾರ್ಥ, ಸಾಮ್ರಾಜ್ಯಲಾಲಸೆ ಮುಂತಾದ್ದನ್ನು ಬಿಡಬೇಕಾಗುವದು.

ಫಿಲಿಪೀನರಿಗೆ ಸ್ವಾತಂತ್ರ್ಯ

ಎರಡನೇ ಮಹಾಯುದ್ಧದ ನಂತರ ಪರದಾಸ್ಯ ಶೃಂಖಲೆಯನ್ನು ಹರಿದೊಗೆದು ಸ್ವಾತಂತ್ರ್ಯವನ್ನು ಸಂಪಾದಿಸಿದ ಮೊದಲ ಸನ್ಮಾನವು ಫಿಲಿಪೀನರಿಗೆ ಸಲ್ಲುವುದು. ಅಮೇರಿಕ ಸರಕಾರದವರು ಜುಲೈ ೪ ನೆಯ ತಾರೀಕು ಫಿಲಿಪೀನರ ಸ್ವಾತಂತ್ರ್ಯವನ್ನು ಸಾರಿದರು. ಜುಲೈ ೪ ನೆಯ ತಾರೀಕಿನ ದಿನವೆ ಅಮೇರಿಕ ಬ್ರಿಟಿಶ್ ದಾಸ್ಯಶೃಂಖಲೆಗಳನ್ನು ಹರಿದೊಗೆದು ಸ್ವಾತಂತ್ರ್ಯವನ್ನು ಪಡೆದದ್ದು. ಈ ಯೋಗಾಯೋಗವು ವಿಚಿತ್ರವಾಗಿದೆ. ೧೮೯೮ ರಲ್ಲಿ ಸ್ಪೇನ—ಅಮೇರಿಕೆಯ ಯುದ್ಧದ ನಂತರ ಫಿಲಿಪೀನವು ಅಮೇರಿಕನ್ನರ ಒಡೆತನದಲ್ಲಿ ಬಂದಿದೆ. ಕಳೆದ ಮಹಾಯುದ್ಧದ ಕಾಲಕ್ಕೆ ಅದು ಜಪಾನರ ವಶಕ್ಕೆ ಹೋಗಿತ್ತು. ಜಪಾನರು ಸಂಪೂರ್ಣ ಸ್ವಾತಂತ್ರ್ಯ ಕೊಡುವುದಾಗಿ ಆಶ್ವಾಸನ ಕೊಟ್ಟಿದ್ದರು. ಆದರೆ ಜಪಾನರು ಮಣ್ಣುಮುಕ್ಕಿ ಹೋದ್ದರಿಂದ ಫಿಲಿಪೀನರು ಮತ್ತೆ ಅಮೇರಿಕನ್ನರ ಆಳಿಕೆಗೆ ಒಳಪಟ್ಟರು. ಯುದ್ಧ ಮುಗಿದು ಪರಿಸ್ಥಿತಿ ಇದೀಗ ಸ್ವಲ್ಪಮಟ್ಟಿಗೆ ಶಾಂತವಾದ್ದರಿಂದ ಅಮೇರಿಕೆ ಈ ಮೊದಲು ವಚನ ಕೊಟ್ಟಂತೆ ೧೯೪೬ರಲ್ಲಿಯೆ ಫಿಲಿಪೀನರಿಗೆ ಸ್ವಾತಂತ್ರ್ಯ ಕೊಟ್ಟುಬಿಟ್ಟಿತು. ಫಿಲಿಪೀನರಿಗೆ ವಿಶೇಷ ಪರಿಶ್ರಮವಿಲ್ಲದೆ ಸ್ವಾತಂತ್ರ್ಯ ಸಿಕ್ಕಿತೆಂದು ಹೇಳಲಿಕ್ಕೆ ಬಾರದಿದ್ದರೂ ಅರ್ಧ ಶತಮಾನದಲ್ಲಿಯೆ ಅವರು ಸ್ವಾತಂತ್ರ್ಯ ಸಂಪಾದಿಸಿದ್ದು ಅಭಿನಂದನೀಯವಾಗಿದೆ. ಫಿಲಿಪೀನರಿಗೆ ಸ್ವಾತಂತ್ರ್ಯ ಸಿಕ್ಕ ಈ ಶುಭ ಪ್ರಸಂಗದಲ್ಲಿ ಆ ದೇಶದ ಬಗ್ಗೆ ಮತು ಅದರ ಸ್ವಾತಂತ್ರ್ಯ ಹೋರಾಟದ ಬಗ್ಗೆ ಕೆಲ ಮಾತು ಬರೆದರೆ ಅಪ್ರಾಸಂಗಿಕವಾಗದು. ಫಿಲಿಪೀನದ ಒಟ್ಟು ವಿಸ್ತೀರ್ಣವು ೧೧೪೪೦೦ ಚದುರು ಮೈಲು ಇರುವುದು. ೧೯೪೦ ರಲ್ಲಿಯ ಜನಗಣತಿಯಂತೆ ಅಲ್ಲಿ ೧೫೮೩೩೯೭೪ ಜನ ವಾಸಿಸುತಿರುವರು. ಇವರೆಲ್ಲ ಹೆಚ್ಚಾಗಿ ಮಲಯದ ವಂಶದವರೆ. ಇವರಲ್ಲದೆ ಸುಮಾರು ೨ ಲಕ್ಷ ಜನ ಪರದೇಶಸ್ಥರಿರುವರು. ಅಮೇರಿಕೆಯು ೧೯೦೦ ರಲ್ಲಿ ಫಿಲಿಪೀನವನ್ನಾಕ್ರಮಿಸಿದ ಕೂಡಲೆ ಆಗಿನ ಅಧ್ಯಕ್ಷ ಮ್ಯಾಕಿನ್ಲೆಯವರು ಫಿಲಿಪೀನ ಜನರ ಸುಖ, ಶಾಂತಿ ಸಮೃದ್ಧಿಗಾಗಿಯೆ ಆಡಳಿತವನ್ನು ಸಾಗಿಸುವುದಾಗಿ ಸಾರಿದ್ದರು. ತದನುಸಾರವಾಗಿಯೆ ಅಮೇರಿಕನ್‌ರು ಅಲ್ಲಿನ ಶೈಕ್ಷಣಿಕ ಮತ್ತು ಅರ್ಥಿಕಧೋರಣವನ್ನಿಟ್ಟಿದ್ದರು. ಕಳೆದ ಯುದ್ಧ ಪ್ರಾರಂಭವಾದ ಕೂಡಲೆ ಅಧ್ಯಕ್ಷ ರೂಜವೆಲ್ಟರು ೧೯೪೬ ರ ಜುಲೈ ೪ ಕ್ಕೆ ಫಿಲಿಪೀನರಿಗೆ ಸ್ವಾತಂತ್ರ್ಯ ಕೊಡುವುದಾಗಿ ನಾವು ಈಗಾಗಲೆ ವಚನಬದ್ಧರಾಗಿದ್ದೇವೆಂದು ಸಾರಿದ್ದರು. ಅಧ್ಯಕ್ಷ ಟ್ರೂಮನ್‌ರು ಆ ವಚನದಂತೆ ಫಿಲಿಪೀನರಿಗೆ ಸ್ವಾತಂತ್ರ ಕೊಟ್ಟು ೧ರಡನೆಯವರಿಗೆ ಪಾಠ ಹಾಕಿಕೊಟ್ಟಿರುವರು. ಫಿಲಿಪೀನರ ಈ ಸ್ವಾತಂತ್ರ್ಯವು ಏಶಿಯಾದಲ್ಲಿಯ ಉಳಿದ ದೇಶಗಳಿಗೆ ಸ್ವಾಗತಾರ್ಹವಾಗಿದೆಂದು ಪಂಡಿತ ಜವಾಹರಲಾಲರು ಹೇಳಿ ‘ಈ ಸ್ವಾತಂತ್ರ್ಯ, ಚೊಕ್ಕಸ್ವಾತಂತ್ರ್ಯವಾಗಿರಬೇಕೆಂದು’ ಹೇಳಿದ್ದನ್ನು ಯಾರೂ ಮರೆಯುವಂತಿಲ್ಲ. ಉಳಿದ ಸಾಮ್ರಾಜ್ಯವಾದಿ ರಾಷ್ಟ್ರಗಳೂ ಅಮೇರಿಕೆಯ ಈ ಆದರ್ಶವನ್ನು ಮುಂದಿಟ್ಟುಕೊಂಡು ತಮ್ಮ ಅಧೀನರಾಷ್ಟ್ರಗಳಿಗೆಲ್ಲ ಪೂರ್ಣ ಸ್ವಾತಂತ್ರ್ಯ ಕೊಟ್ಟು ವಚನ:ಕರ್ಷಿಸಿದ ಶ್ರೇಯಸ್ಸು ಪಡೆಯಬೇಕಾಗಿದೆ.

ಕಾರ್ಯಸಮಿತಿಯ ನಿರ್ಧಾರಕ್ಕೆ ಅ. ಭಾ. ಕಾಂಗ್ರೆಸ್ಸಿನ ಒಪ್ಪಿಗೆ

ಸಾಮ್ಯವಾದಿಗಳ ವಿರೋಧ— ಮುತ್ಸದ್ದಿತನ ಬೇಕೆಂದು ಅಧ್ಯಕ್ಷ ಜವಾಹರರ ಉಪದೇಶ—ಹೊಸ ಕಾರ್ಯಸಮಿತಿಯಲ್ಲಿ ಅನಿರೀಕ್ಷಿತ ಹೆಸರುಗಳು— "ಪ್ರಾಂತಿಕ ಗುಂಪುಗಳು ಅಸ್ತಿತ್ವಕ್ಕೆ ಬರಲಾರವು"

ಮುಂಬಯಿಯಲ್ಲಿ ತಾ. ೬—೭ ಕ್ಕೆ ಜರಗಿದ ಅ. ಭಾ. ಕಾಂ. ಸಮಿತಿ ಸಭೆಯಲ್ಲಿ ಜೂನ ೨೬ ಕ್ಕೆ ಕಾಂಗ್ರೆಸ್ ಸಮಿತಿಯವರು ಬ್ರಿಟಿಶ ಘಟನಾತ್ಮಕ ಸೂಚನೆಗಳ ಬಗ್ಗೆ ಮಾಡಿದ ಗೊತ್ತುವಳಿಯನ್ನು ೪೫೧ ಬಹುಮತದಿಂದ ಅಂಗೀಕರಿಸಿ ಹಳೆಯ ನಾಯಕರ ನೇತೃತ್ವದಲ್ಲಿ ಪ್ರಚಂಡ ವಿಶ್ವಾಸವನ್ನು ವ್ಯಕ್ತಗೊಳಿಸಿತು.

ಕಾಂಗ್ರೆಸ್ಸಿನ ಹೊಸ ಅಧ್ಯಕ್ಷರಾದ ಪಂ. ಜವಾಹರಲಾಲ ನೆಹರೂ ಅವರು ಅಧಿಕಾರ ದಂಡವನ್ನು ಸ್ವೀಕರಿಸಿ ಹೊಸ ಕಾರ್ಯ ಸಮಿತಿಯ ಸದಸ್ಯರ ಹೆಸರುಗಳನ್ನು ಬಹಿರಂಗಗೊಳಿಸಿದ್ದಾರೆ. ಅವರಲ್ಲಿ ಹಿಂದಿನ ಸಮಿತಿಯ ಕೆಲ ಪ್ರಮುಖರಿದ್ದರೂ ಅನೇಕ ಹೊಸ ಅನಿರೀಕ್ಷಿತ ಹೆಸರುಗಳು ಕಂಡು ಬರುತ್ತಿವೆ.

ಒಂದೇ ಪಂಕ್ತಿಯ ಗೊತ್ತುವಳಿ

ನಿವೃತ್ತ ಅಧ್ಯಕ್ಷ ಮೌಲಾನಾ ಅಬುಲ್ ಕಲಂ ಅಝಾದರು ಈ ಬಾರಿಯ ಅ. ಭಾ. ಕಾಂ ಸಮಿತಿಯ ಅಧಿವೇಶನದ ಮುಂದೆ ಪ್ರಮುಖ ರಾಜಕೀಯ ಗೊತ್ತುವಳಿಯನ್ನು ಮಂಡಿಸಿದರು. ಅದು ಬಹುಶಃ ಅ. ಭಾ. ಕಾಂಗ್ರೆಸ್ಸಿನ ಮುಂದೆ ಬಂದ ಅತಿ ಚಿಕ್ಕ ಗೊತ್ತುವಳಿಯೇನೊ. ಅದು ಒಂದೇ ಪಂಕ್ತಿಯದ್ದಿತ್ತು. "ಜೂನ ೨೬ ರ ಕಾರ್ಯ ಸಮಿತಿಯ ಗೊತ್ತುವಳಿಯನ್ನು ಈ ಮೂಲಕ ಅಂಗೀಕರಿಸಲಾಗಿದೆಯೆಂದು ನಿರ್ಧರಿಸಲಾಯಿತು." ಎಂದಿಷ್ಟೇ ಅದು ಹೇಳುತ್ತಿತ್ತು. ಅದರ ಮೇಲೆ ಎರಡು ದಿನ-೭॥ ತಾಸು ಚರ್ಚೆ ನಡೆಯಿತು. ಮೌಲಾನಾ ಅಝಾದ, ಸರದಾರ ಪಟೇಲ, ಮಹಾತ್ಮಾ ಗಾಂಧಿ, ಜಗತನಾರಾಯಣಲಾಲ, ಜವಾಹರಲಾಲ ಮೊದಲಾದವರು ಗೊತ್ತುವಳಿಯನ್ನು ಅನುಮೋದಿಸಿ ಭಾಷಣ ಮಾಡಿದರು. ಜಯಪ್ರಕಾಶ, ಅರುಣಾ ಅಸಫ ಅಲ್ಲಿ, ಅಚ್ಯುತ ಪಟವರ್ಧನ ಮೊದಲಾದವರು ವಿರೋಧಿಸಿದರು. ಕೊನೆಗೆ ಗೊತ್ತುವಳಿ ೨೦೪ ವಿರುದ್ಧ ೫೧ ಮತಗಳಿಂದ ಅಂಗೀಕರಿಸಲ್ಪಟ್ಟಿತು.

ಕಾಂಗ್ರೆಸ್ ಸಾಮ್ಯವಾದಿಗಳೇ ಮೊದಲಾದವರಿಂದ ಮಂಡಿಸಲ್ಪಟ್ಟ ಅನೇಕ ತಿದ್ದುಪಡಿಗಳನ್ನು ವಿಸಂಗತ ಮತ್ತು ನಿಯಮವಿರುದ್ಧವೆಂದು ಸಾರಿ ಅಧ್ಯಕ್ಷ ಜವಾಹರಲಾಲರು ತಳ್ಳಿಹಾಕಿದರು. ಆದ್ದರಿಂದ ಸರದಾರ ಪಟೇಲರು ತಮ್ಮ ಸ್ವಾಭಾವಿಕ ಹಟವಾದದಿಂದ ಬೇಡಿದಂತೆ "ಗೊತ್ತುವಳಿಯನ್ನು ಇದ್ದಕ್ಕಿದ್ದಂತೆ ಸ್ವೀಕರಿಸುವ ಇಲ್ಲವೇ ತಿರಸ್ಕರಿಸುವ" ಪ್ರಶ್ನೆ ಬಂದಿತು. ಅದು ಸ್ವೀಕರಿಸಲ್ಪಟ್ಟಿತು.

"ನಮಗೆ ಬೇಕಾದ್ದು ಇದೆ"

ಗೊತ್ತುವಳಿಯನ್ನು ಮಂಡಿಸಿದ ಮೌಲಾನಾ ಅಝಾದರು ಬಹಳ ತರ್ಕಬದ್ಧವೂ ಸಮರ್ಥವೂ ಆದ ಭಾಷಣದಲ್ಲಿ "ಇದೀಗ ೧೫ ವರ್ಷಗಳಿಂದ ನಾವು ಬೇಡುತ್ತಿದ್ದ ವಸ್ತು, -ಘಟನಾ ಸಮಿತಿ. ಇದು ದಿಲ್ಲಿಯ ಪೇಟಿಯಲ್ಲಿ ಕೊಂಡು ತಂದ ವಸ್ತುವಲ್ಲ. ನಾವು ಬೇಡುತ್ತಿದ್ದನ್ನು ಮಂತ್ರಿರಾಯಭಾರದವರು ಅಂಗೀಕರಿಸಿದ್ದಾರೆ.... ಒಂದು ವೇಳೆ ಯುದ್ಧರಂಗದಲ್ಲಿ ಹಿಂದುಸ್ತಾನಕ್ಕೆ ಇಂಥದೇ ಪ್ರಶ್ನೆ ಎದುರಾಗಿತ್ತೆನ್ನಿರಿ. ಹಿಂಸಾತ್ಮಕ ಹೋರಾಟವನ್ನು ನಡೆಸಿ ಗೆದ್ದಿದ್ದರೂ ರಾಷ್ಟ್ರಕ್ಕೆ ಏನು ಸಿಗುತಿತ್ತು? ತನ್ನ ಘಟನೆಯನ್ನು ತಾನೇ ರಚಿಸಿಕೊಳ್ಳುವ ಹಕ್ಕು. ಅದಕಿಂತ ಹೆಚ್ಚೇನೂ ಇಲ್ಲ. ಆ ಹಕ್ಕನ್ನು ಈಗ ಬ್ರಿಟಿಶರು ಒಪ್ಪಿಕೊಂಡಿರುವರು.... ರಾಯಭಾರದವರು ಮುಂದಿರಿಸಿದ ಸೂಚನೆಯಲ್ಲಿ ಅಖಂಡ ಹಿಂದುಸ್ತಾನದ ಚಿತ್ರವಿದೆ" ಎಂದು ಪ್ರತಿಪಾದಿಸಿದರು. "ಈ ಯೋಜನೆಯನ್ವಯ ಬ್ರಿಟಿಶರಿಂದ ಹಿಂದೀಯರ ಕೈಗೆ ಅಧಿಕಾರದಾನ ಶಾಂತ ರೀತಿಯಲ್ಲಿ ಆಗುವದು. ಆದ್ದರಿಂದ ಈ ಯೋಜನೆಯ ಉಪಯೋಗ ಪಡೆಯಬೇಕೆಂದೂ ದೇಶವನ್ನು ಹೋರಾಟದಲ್ಲಿ ಕೆಡಹಬಾರದೆಂದೂ ನಮ್ಮ ಮನಸ್ಸಿಗೆ ಉಚಿತವಾಗಿದೆ"ಯೆಂದು ಸರದಾರ ಪಟೇಲರು ಹೇಳಿದರು. ಮುಂದುವರಿದರವರು: "ಮುಸ್ಲಿಂ ಲೀಗಿನವರು ಈ ಯೋಜನೆಯಲ್ಲಿ ಪಾಕಿಸ್ತಾನದ ಬೀಜವನ್ನು ಕಾಣುತ್ತಾರೆ, ನಾವು ಅಖಂಡ ಹಿಂದುಸ್ತಾನವನ್ನು ಕಾಣುತ್ತೇವೆ. ಘಟನಾ ಸಮಿತಿಯೆ ಇದರಲ್ಲಾವುದನ್ನು ಶ್ರೀ ಇದ್ದುದು ನಿರ್ಧರಿಸಲಿ!" ... ಅವರ ಬಾಲ್ಯ ಸ್ನೇಹಿ

"ಮಾಡಿರಿ ಇಲ್ಲವೆ ಮಡಿಯಿರಿ"ಗಿಂತ ಬಹು ದೂರ

ಎಲ್ಲ ತಿದ್ದುಪಡಿಗಳು ಹಾರಿಸಿ ಒಗೆಯಲ್ಪಟ್ಟದ್ದರಿಂದ ಕಾಂಗ್ರೆಸ್ ಸಾಮ್ಯವಾದಿಗಳು ನೇರವಾಗಿ ಗೊತ್ತುವಳಿಯನ್ನು ನಿರಾಕರಿಸಬೇಕೆಂದು ಸಾಧಿಸಿದರು. "ಹಿಂದೀ ರಾಷ್ಟ್ರೀಯ ಕಾಂಗ್ರೆಸ್ಸು ಬೇಡಿದ ಘಟನಾ ಸಮಿತಿ ಇದಲ್ಲ. ೧೯೪೨ರ ಮಾಡಿರಿ ಇಲ್ಲವೆ ಮಡಿಯಿರಿ" ಘೋಷಣೆಗಿಂತ ಈ ಘಟನಾ ಸಮಿತಿ ದೂರ ಬಹುದೂರ" ಎಂದು ಅನ್ವಾರ ಹರ್ವಾಣಿಯವರು ಹೇಳಿದರು ಜಯಪ್ರಕಾಶ ನಾರಾಯಣರು ಪ್ರಶಾಂತ ನಿರ್ಲಿಪ್ತಭಾವದಿಂದ, ಈ ಘಟನಾ ಸಮಿತಿಯ ಯೋಜನೆಯನ್ವಯ ಹಿಂದುಸ್ತಾನದ ರೋಗಕ್ಕೆ ನಿಜವಾದ ಪರಿಹಾರ ದೊರೆಯುವಂತಿಲ್ಲ. ಬಳಿಕ ಈ ಹಸೆ ಇಟ್ಟಿಗೆಗಳಿಂದ ಹಿಂದುಸ್ತಾನದ ಭವಿತವ್ಯವನ್ನು ಕಟ್ಟಲೆಳಸುವದೇಕೆ?" ಎಂದು ಕೇಳಿದರು. ಲೀಗಿನ ವಿರುದ್ಧ ಕಾಂಗ್ರೆಸ್ಸು ಕಠೋರ ಧೋರಣೆ ವಹಿಸಬೇಕೆಂದು ಹೇಳಿದ್ದಲ್ಲದೆ ಅವರು ಈಗಿನ ಯೋಜನೆಯಂತೆ ಘಟಿತವಾದ ಘಟನಾ ಸಮಿತಿಯಲ್ಲಿ ಮುಸ್ಲಿಂ ಲೀಗು ಕಾಂಗ್ರೆಸ್ಸುಗಳಲ್ಲಿ ತಿಕ್ಕಾಟ ಬಾರದಿರದೆಂದೂ ಆಗ ಬ್ರಿಟಿಶರ ಖಂಡಿತವಾಗಿಯೂ ಸೂತ್ರ ಚಾಲನೆ ನಡೆಸುವರೆಂದೂ ಜಾತೀಯ ದ್ವೇಷ ಬೆಳೆಯುವದೆಂದೂ ಭವಿಷ್ಯ ನುಡಿದು ಈ ಗೊತ್ತುವಳಿಯನ್ನು ನಿರಾಕರಿಸಿ ದೇಶವನ್ನು ಇನ್ನೊಂದು ಹೋರಾಟಕ್ಕೆ ಅಣಿಮಾಡಬೇಕೆಂದು ಸಾಧಿಸಿದರು. ಸ್ವಾಮೀ ಸಹಜಾನಂದರು ಇದು ಸ್ವಾತಂತ್ರ ಘಟನಾ ಸಮಿತಿಯಲ್ಲ, ಅದರ ಕೈಕಾಲಿಗೆ ಸರಪಳಿ ಬಿಗಿದಿದೆಯೆಂದರು. ಶ್ರೀಮತಿ ಅರುಣಾ ಅಸಫ ಅಲ್ಲಿಯವರು ಗೊತ್ತುವಳಿಯನ್ನು ವಿರೋಧಿಸಿ ಗಾಂಧೀಜಿಯವರಿಗಂದರು. "ಎಲ್ಲರೂ ಗಾಂಧಿಜೀಯನ್ನು ಕಳೆದ ೨೫ ವರ್ಷಗಳಿಂದ ಕಟ್ಟಿನ್ನದೆ ಹಿಂಬಾಲಿಸಿದರು. ಇನ್ನು ಗಾಂಧೀಜಿ ಇತರರನ್ನು ಅನುಸರಿಸಲಿ" ಅಚ್ಯುತ ಪಟವರ್ಧನರು ಕ್ಲೈವ ಸ್ಟ್ರೀಟದ ಯುರೋಪಿಯನ್ ವ್ಯಾಪಾರಿಗಳ ಹಿಡಿತದಿಂದ ಈ ಯೋಜನೆ ಹಿಂದುಸ್ತಾನವನ್ನು ಮುಕ್ತಮಾಡುವದಿಲ್ಲವೆಂದರು.

ಗಾಂಧೀಜಿಯ ಸಲಹೆ

ಕೆಲವರ ನಿರೀಕ್ಷೆಗೆ ವಿರುದ್ಧವಾಗಿ, ಮಹಾತ್ಮಾ ಗಾಂಧಿಯವರು ಗೊತ್ತುವಳಿಗೆ ಬೆಂಬಲವಿತ್ತೇ ಮಾತಾಡಿದರು. ತಮ್ಮ ಒಂದು ತಾಸಿಗೂ ಮಿಕ್ಕಿದ ಭಾಷಣದಲ್ಲಿ ಅವರು ತಮ್ಮ ಸುತ್ತು ಕವಿದ ಕತ್ತಲೆ ಇನ್ನೂ ಹಾಗೆಯೆ ಇದೆ ಅಥವಾ ಇನ್ನೂ ದಟ್ಟವಾಗಿದೆಯೆಂದರೂ ಸಲ್ಲುವವೆಂದುಸುರಿದರು. ಆದ್ದರಿಂದಲೇ ತಾವು ಕಾರ್ಯಸಮಿತಿಗೆ ಸ್ವತಂತ್ರ ನಿರ್ಣಯ ಮಾಡಲು ಕೇಳಿಕೊಂಡದ್ದಾಗಿ ಅವರು ಹೇಳಿದರು. ಸಾಮ್ಯವಾದಿಗಳ ಟೀಕೆಗಳಿಗೆ ಸೌಮ್ಯವಾದದ ಹಿಂದೇಟು ಕೊಡುತ್ತ ಅವರು, "ಘಟನಾ ಸಮಿತಿಯ ಯೋಜನೆಯಲ್ಲಿ ಹಲವು ದೋಷಗಳಿವೆಯೆಂದು ನಾನು ಒಪ್ಪುವೆ. ಆದರೆ ನಾವು ಹೋರಾಟಗಾರರು. ಈ ಲೋಪದೋಷಗಳಿಗೆ ನಾವೇಕೆ ಹೆದರಬೇಕು? ಸಾಮ್ಯವಾದಿಗಳು ಸೋಲು ಬರಬಹುದೆಂದು ಭಯಪಡುವರೆ?" ಎಂದು ಕೇಳಿದರು.

ಮೌಲಾನಾ ಅಝಾದರು ತಮ್ಮ ಉತ್ತರದಲ್ಲಿ ಕೆಲವರ ಮನಸ್ಸಿನಲ್ಲಿ ಅಸ್ಪಷ್ಟ ಭಯಗಳಿರುವಂತೆಯೆಂದರು. ಘಟನಾ ಸಮಿತಿ ಬ್ರಿಟಿಶರ

ಕೂಸಲ್ಲ, ಅದು ಜನತೆಯ ಶಕ್ತಿಯ ಫಲವೆಂದು ಹೇಳಿ, ಕಾಂಗ್ರೆಸ್ಸು ಪೂರ್ಣ ಸ್ವಾತಂತ್ರ್ಯದ ಮೂಲಭೂತ ಬೇಡಿಕೆಯನ್ನು ಬಿಟ್ಟುಕೊಟ್ಟಿಲ್ಲವೆಂದೂ ಪಾಕಿಸ್ತಾನ ಸಿದ್ಧಾಂತವೇ ಈಗ ಮೃತಪ್ರಾಯವಾಗಿದೆಯೆಂದು ಸೂಚಿಸಿದರು.

ಜವಾಹರರ ಸಮಾಧಾನ

ಅಧ್ಯಕ್ಷ ಜವಾಹರಲಾಲರು ಕಾಂಗ್ರೆಸ ಗೊತ್ತುವಳಿಯನ್ನು ವಿವರಿಸಿ ವಿರೋಧಿಗಳಿಗೆ ಸಮಾಧಾನ ಹೇಳಿದರು. ಈ ಘಟನಾ ಸಮಿತಿ ನಿರ್ದೋಷವೆಂದು ಅವರು ಅಭಿಪ್ರಾಯಪಡಲಿಲ್ಲ. ಆದರೆ ನಮ್ಮ ಸಮಸ್ಯೆಗಳಲ್ಲಿ ಕೆಲವನ್ನು ಪರಿಹರಿಸಿ ನಮಗೆ ಹಿತವಾದ ಘಟನೆ ಅದರಿಂದ ಉಂಟಾಗುವ ಸಂಭವವಿದೆ. ಕಾಂಗ್ರೆಸ್ಸು ಯೋಜನೆಯನ್ನು ಮಾನ್ಯ ಮಾಡಿದೆ. ಅಥವಾ ಇಲ್ಲವೆಂಬ ಪ್ರಶ್ನೆಯೆ ಇಲ್ಲ. ಅದು ಕೇವಲ ಘಟನಾ ಸಮಿತಿಯಲ್ಲಿ ಪ್ರವೇಶಿಸಲು ಒಪ್ಪಿದೆ. ಮತ್ತಾವ ರೀತಿಯಿಂದಲೂ ನಾವು ಬದ್ಧರಾಗಿಲ್ಲ ಎಂದು ಹೇಳಿ ಜವಾಹರರು ನಾವು ಬರಿ ಜಯಘೋಷಗಳನ್ನು ಒದರಿದರೆ ಫಲವಿಲ್ಲ. ನಾವು ಕ್ರಾಂತಿಕಾರರಾಗಿರುವಾಗ ಸಂಗಡಲೇ ಮುತ್ಸದ್ದಿಗಳೂ ಆಗಿ ಸಮಸ್ಯೆಗಳನ್ನು ಎದುರಿಸಬೇಕಾಗುವದೆಂದರು. ನಮ್ಮ ಸಮಸ್ಯೆಗಳನ್ನು ಬಿಡಿಸುವ ಹೊಣೆಯಿಂದ ನಾವು ಸರ್ವ ಕಾಲದಲ್ಲಿಯೂ ತಪ್ಪಿಸಿಕೊಳ್ಳಲಾರೆವೆಂದು ಅವರು ಬುದ್ಧಿ ಹೇಳಿದರು. ಅಲ್ಲದೆ ಎಷ್ಟರವರೆಗೆ ಹಿಂದುಸ್ತಾನದ ಹಿತ ಸಾಧಿಸುವದು ಸಾಧ್ಯವೆಂದು ತೋರುವದೋ ಅಷ್ಟು ಕಾಲ ಮಾತ್ರ ಕಾಂಗ್ರೆಸ್ಸು ಘಟನಾ ಸಮಿತಿಯಲ್ಲುಳಿಯುವದೆಂದು ಆಶ್ವಾಸನವಿತ್ತರು.

ದಕ್ಷಿಣಾಫ್ರಿಕಾ ಗೊತ್ತುವಳಿ

ದರ್ಬಾನದಲ್ಲಿ ಹಿಂದೀಯರು ತಮ್ಮ ನ್ಯಾಯವಾದ ಮಾನವ ಹಕ್ಕುಗಳಿಗಾಗಿ ಹೂಡಿದ ಸತ್ಯಾಗ್ರಹ ಸಮರದಲ್ಲಿ ಸಹಾನುಭೂತಿಯನ್ನು ವ್ಯಕ್ತಗೊಳಿಸುವ ಗೊತ್ತುವಳಿಯೊಂದು ಅ. ಭಾ. ಸಮಿತಿಯಲ್ಲಿ ಸರ್ವಾನುಮತಿಯಿಂದ ಅಂಗೀಕರಿಸಲ್ಪಟ್ಟಿತು. ಶ್ರೀಮತಿ ಸರೋಜಿನಿಯವರು ಗೊತ್ತುವಳಿಯನ್ನು ಮಂಡಿಸುತ್ತ ದಕ್ಷಿಣಾಫ್ರಿಕೆಯ ಹಿಂದೀಯರ ಸ್ಥಿತಿಯ ಮನೋವೇಧಕ ಶಬ್ದಚಿತ್ರವನ್ನು ತೆಗೆದರು. ಸೇಠ ಗೋವಿಂದದಾಸ, ಪಂ ಗೋವಿಂದ ವಲ್ಲಭ ಪಂತ ಮೊದಲಾದವರು ಬೆಂಬಲವಿತ್ತು ಮಾತಾಡಿದರು.

ಪಟ್ಟ ಪರಿವರ್ತನ

ಅ. ಭಾ. ಕಾಂಗ್ರೆಸ್ ಸಮಿತಿಯ ಮೊದಲನೆ ಕಾರ್ಯಕ್ರಮ ಹಿಂದಿನ ಅಧ್ಯಕ್ಷ ಅಝಾದರಿಂದ ನಿಯೋಜಿತಾಧ್ಯಕ್ಷರಾದ ಜವಾಹರರ ಕೈಯಲ್ಲಿ ಅಧಿಕಾರಾರೋಪಣದ ಸಮಾರಂಭವಾಗಿತ್ತು. ಆರು ಬಿರುಗಾಳಿಯ ವರ್ಷಗಳಲ್ಲಿ ಕಾಂಗ್ರೆಸ್ ನಾವೆಯನ್ನು ಸಾಗಿಸಿಕೊಂಡು ಹೋದ ಅಧ್ಯಕ್ಷ ಅಝಾದರು ಹೃತ್ಪೂರ್ವಕ ಸ್ತೋತ್ರಕ್ಕೆ ಪಕ್ಕಾದರು. ಸರದಾರಪಟೇಲ, ಗೋವಿಂದ ವಲ್ಲಭ ಪಂತ ಮೊದಲಾದವರು ಅವರ ಗುಣಗಾನ ಮಾಡಿದರು. ಮೌಲಾನಾ ಸಾಹೇಬರು ಅಧ್ಯಕ್ಷತೆಯನ್ನು ಜವಾಹರರಿಗೊಪ್ಪಿಸುತ್ತ ಭವಿತವ್ಯದ ಉಜ್ವಲ ಚಿತ್ರವನ್ನು ನಿರೂಪಿಸಿ, ಕಳೆದ ಆರು ವರ್ಷಗಳು ಆರು ಯುಗಗಳಂತಿವೆ; ಆರು ವರ್ಷಗಳ ಹಿಂದಿನ ಹಿಂದುಸ್ತಾನವಿಂದು ಎಷ್ಟು ಹುಡುಕಿದರೂ ಸಿಗುವಂತಿಲ್ಲ. ಹಿಂದುಸ್ತಾನದ ಸ್ತ್ರೀ-ಪುರುಷರ ಹೃದಯವಿಂದು ಆಮೂಲಾಗ್ರ ಪರಿವರ್ತನೆಗೊಂಡಿದೆ. ಜಾಗತಿಕ ಪರಿಸ್ಥಿತಿಯ ಫಲವಾಗಿ ಹಿಂದೀ ಸ್ವಾತಂತ್ರ್ಯವನ್ನು ಒಪ್ಪುವ ಸ್ಥಿತಿಗೆ ಬ್ರಿಟಿಶ್‌ರು ಬಂದಿದ್ದಾರೆ. ನಮ್ಮ ಬಲಿದಾನಗಳ ಫಲವಿಂದು ದೊರಕತೊಡಗಿದೆ. ಸ್ವಾತಂತ್ರ್ಯ ಇನ್ನೊಂದೇ ಹೆಜ್ಜೆಯಷ್ಟು ದೂರವಿದೆ ಎಂದ್ಯ ಆಶಾವಚನಗಳನ್ನಾಡಿದರು.

ಹೊಸ ಅಧ್ಯಕ್ಷ ಜವಾಹರರು, ನಾವು ಸ್ವಾತಂತ್ರ್ಯದ ಬಾಗಿಲ ಬಳಿ ಬಂದು ನಿಂತಿದ್ದೇವೆ. ಆದರೂ ಬಾಗಿಲು ಮುಚ್ಚಿದೆ. ಅದನ್ನೊಡೆಯುವ ಸಾಮರ್ಥ್ಯ ನಮಗೆ ಬೇಕು ಎಂದು ಹೇಳಿದರು ಕಾಂಗ್ರೆಸ್ಸಿನ ಶಕ್ತಿ ಒಂದು ರೀತಿಯಲ್ಲಿ ಬೆಳೆದಿದ್ದರೂ ಅಂತರಿಕ ವೈಷಮ್ಯ ಭೇದಭಾವಗಳಿಂದ ಅದರ ಶಕ್ತಿ ಕೆಲವಂಶ ಕಡಿಮೆಯಾಗಿದೆ. ಅದುದರಿಂದ ಎಲ್ಲರೂ ಒಗ್ಗಟ್ಟಾಗಬೇಕೆಂದು ಕೇಳಿಕೊಂಡರು.

ಹೊಸ ಕಾರ್ಯಸಮಿತಿ

ಹೊಸ ಕಾಂಗ್ರೆಸ್ ಅಧ್ಯಕ್ಷ ಜವಾಹರರು ಅ. ಭಾ. ಕಾಂಗ್ರೆಸ್ ಸಮಿತಿಯ ಸಭೆಯಲ್ಲಿಯೇ ಹೊಸ ಕಾರ್ಯಸಮಿತಿಯಲ್ಲಿ "ಹೊಸ ನೆತ್ತರ"ನ್ನು ಸೇರಿಸುವ ಅಭಿವಚನವಿತ್ತಿದ್ದರೂ ಅವರು ತಾ. ೯ಕ್ಕೆ ಹೊರಪಡಿಸಿದ ಯಾದಿಯಿಂದ ಕೆಲ ಮಟ್ಟಿನ ಆಶ್ಚರ್ಯವುಂಟಾಗದೆ ಇಲ್ಲ.

ಹೊಸ ಕಾರ್ಯಸಮಿತಿಯ ಸದಸ್ಯರು ಕೆಳಗಿನಂತಿದ್ದಾರೆ:—

೧ ಮೌಲಾನಾ ಅಬುಲ ಕಲಮ ಅಝಾದ
೨ ಸರದಾರ ವಲ್ಲಭಭಾಯಿ (ಕೋಶಾಧ್ಯಕ್ಷ)
೩ ಡಾ. ರಾಜೇಂದ್ರ ಪ್ರಸಾದ
೪ ಖಾನ ಅಬ್ದುಲ ಗಫರ ಖಾನ
೫ ಪಂ. ಗೋವಿಂದ ವಲ್ಲಭ ಪಂತ
೬ ಶ್ರೀ ಸಿ ರಾಜಗೋಪಾಲಾಚಾರಿ
೭ ಶ್ರೀ ರಫಿ ಅಹ್ಮದ ಕಿಡವಾಯಿ
೮ ಶ್ರೀ ಶರಚ್ಚಂದ್ರ ಬೋಸ
೯ ಶ್ರೀಮತಿ ಕಮಲಾದೇವಿ ಚಟ್ಟೋಪಾಧ್ಯಾಯ
೧೦ ಶ್ರೀ ಪಿ ಎಚ್ (ರಾವಸಾಹೇಬ) ಪಟವರ್ಧನ) ಮಹಾರಾಷ್ಟ್ರ
೧೧ ಶ್ರೀ ಫಕುರುದ್ದೀನ ಅಹ್ಮದ (ಅಸಾಮ)
೧೨ ಸರದಾರ ಪ್ರತಾಪಸಿಂಹ (ಪಂಜಾಬ)
೧೩ ಶ್ರೀಮತಿ ಮೃದುಲಾ ಸಾರಾಭಾಯಿ
೧೪ ಬಾಲಕೃಷ್ಣ ವಿ. ಕೇಸಕರ

ಕೊನೆಯರಿಬ್ಬರು ಕಾರ್ಯದರ್ಶಿಗಳಾಗಿರುವರು.

ಹೊಸ ಕಾರ್ಯ ಸಮಿತಿಯಾಗುವ ಮೊದಲು ಹಳೆಯ ಸಮಿತಿ ಘಟನಾ ಸಮಿತಿಗಾಗಿ ವಸ್ತುವನ್ನು ಸಿದ್ಧಗೊಳಿಸಲು ಪಂಡಿತ ಜವಾಹರಲಾಲ (ಅಧ್ಯಕ್ಷ), ಅಸಫ ಅಲ್ಲಿ, ಕೆ. ಎಂ. ಮುನಶಿ ಎನ್. ಗೋಪಾಲಸ್ವಾಮಿ ಅಯ್ಯಂಗಾರ ಪ್ರೊ. ಕೆ. ಟಿ. ಶಹಾ, ಡಿ. ಆರ್. ಗಾಡಗೀಳ, (ಗೋಖಲೆ ಆರ್ಥಿಕ ಸಂಸ್ಥೆ), ಪ್ರೊ. ಹುಮಾಯೂನ ಕಬೀರ, ಶ್ರೀ ಕೆ. ಸಂತಾನಂ ಇವರಿಂದೊಡಗೂಡಿದ ಸಮಿತಿಯೊಂದನ್ನು ಏರ್ಪಡಿಸಿದೆ.

ಗುಂಪುಗಳಾಗುವ ಸಂಭವವಿಲ್ಲ

ಸೀಖರು ಘಟನಾ ಸಮಿತಿಯನ್ನು ಬಹಿಷ್ಕರಿಸಬೇಕೆಂದು ಪಾಂಥಿಕ ಮಂಡಲದವರು ನಿರ್ಣಯಿಸಿದ್ದಾರೆ. ಆದರೆ ಕಾಂಗ್ರೆಸ ಅಧ್ಯಕ್ಷರ ವಿನಂತಿಯನ್ನು ಲಕ್ಷಿಸಿ ಅವರೀಗ ನಾಮಪತ್ರ ಕೊಟ್ಟಿರುವರು. ಮುಸ್ಲಿಂ ಲೀಗದವರು ತಮ್ಮ ಸಾಧಾರಣ ಕೌನ್ಸಿಲದ ಸಭೆಯನ್ನು ಜುಲೈ ೨೮ಕ್ಕೆ ಕರೆದಿದ್ದಾರೆ. ಲೀಗ ಕಾರ್ಯದರ್ಶಿ ಲಿಯಾಕತ ಅಲ್ಲಿಖಾನರು ಬ್ರಿಟಿಶ ರಾಯಭಾರಿಗಳು ಮಾತು ಮುರಿದಿದ್ದಾರೆಂದು ಆರೋಪಿಸಿ, ಗುಂಪು ಕಟ್ಟಿಕೊಳ್ಳುವ ವಿಷಯದಲ್ಲಿ ಕಾಂಗ್ರೆಸ್ಸು ಬೇರೆಯೆ ಅರ್ಥವನ್ನು ಕಲ್ಪಿಸಿಕೊಂಡು ಗೊತ್ತುವಳಿ ಮಾಡಿಕೊಂಡದ್ದರಿಂದ ಉಂಟಾದ ಹೊಸ ಪರಿಸ್ಥಿತಿಯನ್ನು ಚರ್ಚಿಸಲು ಲೀಗ ಕೌನ್ಸಿಲ್ ಕರೆಯಲಾಗಿದೆಯೆಂದು ಸಾರಿದ್ದಾರೆ. ಲಿಯಾಕತ ಅಲ್ಲಿಯವರ ಈ "ಬದಲಿಸಿದ ಪರಿಸ್ಥಿತಿ"ಗೆ ಕಾಂಗ್ರೆಸ್ಸೇ ಕಾರಣವಾಯಿತೆಂಬ ಬಗ್ಗೆ ಪೂರ್ಣ ಸಂತೋಷವನ್ನು ವ್ಯಕ್ತಗೊಳಿಸಿ ಅಧ್ಯಕ್ಷ ನೆಹರೂ ಅವರು ಮುಂಬಯಿಯಲ್ಲಿ ಪತ್ರಿಕಾ ಪರಿಷತ್ತಿನಲ್ಲಿ ಹೇಳಿಕೆ ಕೊಟ್ಟರು. ಅ. ಬ. ... ಗುಂಪುಗಳು ಅಸ್ತಿತ್ವಕ್ಕೆ ಬರುವ ಸಂಭವವೇ ಇಲ್ಲವೆಂದು ಅವರು ನೇರವಾಗಿ ಹೇಳಿದರು. ಗಡಿನಾಡು ಬ ಗುಂಪಿನಿಂದ ಹೊರಗುಳಿಯುವದಾದುದರಿಂದ ಅ ಗುಂಪು ಉಂಟಾಗಲಾರದು, ಕ ಗುಂಪಿನಲ್ಲಿ ಸೇರಲು ಅಸಾಮ ಸಮ್ಮತಿಸಲಾರದು. ಅ ಗುಂಪು ಗುಂಪಿನ ಯೋಜನೆಯನ್ನೇ ಎದುರಿಸುವದು ಎಂದು ಸ್ಪಷ್ಟಗೊಳಿಸಿದ್ದಲ್ಲದೆ ಅಲ್ಪಸಂಖ್ಯಾಕರ ಪ್ರಶ್ನೆ ಹಿಂದೀಯರದು ಅದರಲ್ಲಿ ಬ್ರಿಟಿಶರಿಗೆ ಕೈಹಾಕಲು ಬಂದರೆ ನಾವು ಎಂದೂ ಸಹಿಸಲಾರೆವೆಂದು ಸಾರಿಬಿಟ್ಟಿದ್ದಾರೆ.

ಅಂತರ್ ರಾಷ್ಟ್ರೀಯ

ಶಾಂತಿ ಪರಿಷತ್ತು

ಜರ್ಮನಿಯನ್ನು ಬಿಟ್ಟು ಉಳಿದ ಯುರೋಪಿಯನ್ ಅಚ್ಚಿನ ಮತ್ತು ಅವುಗಳ ಕೈಗೊಂಬೆ ರಾಷ್ಟ್ರಗಳ ಭವಿತವ್ಯ ನಿರ್ಣಯದ ಶಾಂತಿ ಪರಿಷತ್ತಿನ ಪ್ರಶ್ನೆಯನ್ನು ಕೊನೆಗೊಮ್ಮೆ —ಹಲವಾರು ತಿಂಗಳುಗಳ ಜಗ್ಗಾಟದ ನಂತರವಾದರೂ— ಬಿಡಿಸಲು ವಿದೇಶ ಮಂತ್ರಿಗಳು ಸಮರ್ಥರಾದುದು ಯುರೋಪಿಯನ ಸುದೈವವೆಂದೇ ಹೇಳಬಹುದು. ಪರಿಸ್ಥಿತಿ ನಿರಾಶಾದಾಯಕವೆಂದು ತೋರುತಿದ್ದಾಗ ಒಮ್ಮಿಂದೊಮ್ಮೆ ಟ್ರೀಸ್ಟ ಎಂಬ ಜಟಿಲ ಸಮಸ್ಯೆ ಎಲ್ಲ ಪಕ್ಷಗಳಿಗೆ— ಅರ್ಥಾತ್ ಚತುರ್ರಾಷ್ಟ್ರಗಳಿಗೆ— ಸಂತುಷ್ಟಿಯಾಗುವಂತೆ ಬಿಡಿಸಲ್ಪಟ್ಟು ಅದರ ಆಡಳಿತೆಯನ್ನು ಅಂತರರಾಷ್ಟ್ರೀಯ ಮಂಡಳಕೊಪ್ಪಿಸಬೇಕೆಂಬ ನಿರ್ಣಯಕ್ಕೆ ಬಂದುದು ಇಡಿ ಬಿಕ್ಕಟ್ಟಿನ ಮೂಲೆಯೇ ಬಗೆಹರಿಯಲು ದಾರಿ ಬಿಡಿಸಿಕೊಟ್ಟಿತು. ಟ್ರೀಸ್ಟದಲ್ಲಿ ಸಿಟ್ಟಿಗೆದ್ದ ಇಟಾಲಿಯನ್ನರು ಮಿತ್ರ ರಾಷ್ಟ್ರ ವಿರೋಧಿ ಪ್ರದರ್ಶನಗಳನ್ನು ಮಾಡಿದರೂ ಮಿತ್ರರ ಶಸ್ತ್ರಬಲ ಅದನೆಲ್ಲ ಮುರಿಯಲು ಸಮರ್ಥವಾಗಿದೆ.

ಉಳಿದ ಮೂವರು ವಿದೇಶ ಮಂತ್ರಿಗಳು ಇಟಲಿಯಿಂದ ಸೋವಿಯಟ್ಟಿಗೆ ಸಲ್ಲಬೇಕಾದ ಪರಿಹಾರ ದ್ರವ್ಯದ ವಿಷಯದಲ್ಲಿ ಸೋವಿಯಟ್ ಬೇಡಿಕೆಗಳಿಗೆ ಮನ್ನಣೆಯಿತ್ತ ಕೂಡಲೆ ಇನ್ನೊಂದು ದೊಡ್ಡ ಅಡಚಣೆಯೂ ದೂರವಾಯಿತು. ೧೦ ಕೋಟಿ ಡಾಲರುಗಳಷ್ಟು ಪರಿಹಾರವನ್ನು ೭ ವಾರ್ಷಿಕ ಕಂತುಗಳಲ್ಲಿ [ಮೊದಲೆರಡು ವರ್ಷ ಬಿಟ್ಟು] ಚಾಲ್ತಿ ಉತ್ಪಾದನೆಯಿಂದ ಸಲ್ಲಿಸುತ್ತ ಬರಬೇಕೆಂಬ ನಿರ್ಣಯವಾಯಿತು. ಒಡನೆ ೨೧ ರಾಷ್ಟ್ರಗಳ ಶಾಂತಿ ಪರಿಷತ್ತನ್ನು ಇದೇ ೨೯ ನೇ ತಾರೀಖಿಗೆ ಪ್ಯಾರಿಸಿನಲ್ಲಿ ಕೂಡಿಸಲು ಚತುರ್ರಾಷ್ಟ್ರಗಳ ಬಗ್ಗೆ ಫ್ರಾನ್ಸು ಆಮಂತ್ರಣಗಳನ್ನು ಕಳಿಸಬೇಕೆಂದು ನಿರ್ಧರಿಸಲ್ಪಟ್ಟಿತು.

ಈ ಎರಡು ತೊಡಕುಗಳಿಂದ ಹೊರಗೆ ಬಂದ ಮಂತ್ರಿ ಚತುಷ್ಟಯ ಸಭೆಯನ್ನು ರಶಿಯನ್ ವಿದೇಶಮಂತ್ರಿ ಮಲಟೋವರು ನೇರವಾಗಿ ಮೂರನೆಯ ಬಿಕ್ಕಟ್ಟಿನೊಳಗೆ ಸೆಳೆದೊಯ್ದರು. ಶಾಂತಿ ಪರಿಷತ್ತಿನ ಕಾರ್ಯನಿರ್ವಾಹರೀತಿ, ವಿಧಿನಿಯಮಗಳನ್ನು ಚತುರ್ರಾಷ್ಟ್ರಗಳು ನಿರ್ಧರಿಸಬೇಕೆಂದೂ ಈ ನಿಬಂಧನೆಗಳನ್ನು ಆಮಂತ್ರಣಗಳ ಜತೆಗೇ ಕಳಿಸಬೇಕೆಂದೂ ಅವರು ಹಟಹಿಡಿದರು. ಅನೇಕ ದಿನಗಳ ವರೆಗೆ ಇದನ್ನು ಕುರಿತು ಕಜ್ಜಾಟವಾಯಿತು, ಶಾಂತಿಪರಿಷತ್ತಿಗೆ ತನ್ನ ನಿಬಂಧನೆಗಳನ್ನು ತಾನೇ ಮಾಡಿಕೊಂಬ ಹಕ್ಕಿರಬೇಕೆಂದೂ ಅದಕ್ಕೆ ಮೊದಲೇ ಅಟ್ಟು ಅಣಿಮಾಡಿದ ಔತಣದ ಹಟಭೋಜನ ಮಾಡಿಸುವದು ಸರಿಯಲ್ಲವೆಂದೂ ಅಂಗ್ಲೋ ಅಮೇರಿಕನ್ನರು ವಾದಿಸಿದರು. ಕೊನೆಗೆ ನಡುಹಾದಿಯನ್ನು ಹುಡುಕಿ ತೆಗೆದು ನಿಬಂಧನೆಗಳ ಕರಡುಪಂತಿಯನ್ನು ಸಿದ್ಧಗೊಳಿಸಿ ಕಳಿಸಬೇಕು. ಆದರೆ ಅದನ್ನೊಪ್ಪುವ ಬದಲಿಸುವ ಹಕ್ಕು ಶಾಂತಿ ಪರಿಷತ್ತಿಗಿರಬೇಕು, ಎಂಬುದಕ್ಕೆ ಎಲ್ಲರ ಒಪ್ಪಿಗೆ ದೊರೆಯಿತು.

ಹೀಗೆ ಇಟಲಿ, ರುಮಾನಿಯಾ, ಬಲ್ಗೇರಿಯಾ, ಹಂಗೆರಿ ಮತ್ತು ಫಿನ್ಲಂಡುಗಳು ತಾ. ೨೯ ಕ್ಕೆ ಪ್ಯಾರೀಸಿನಲ್ಲಿ ಶಾಂತಿಪರಿಷತ್ತಿನಲ್ಲಿ ಮಿತ್ರರಾಷ್ಟ್ರಗಳನ್ನೆದುರಿಸುವವು. ಅವುಗಳಿಗೊಪ್ಪಿಸುವ ಶಾಂತಿ ಕರಾರುಗಳ ಕರಡನ್ನು ವಿದೇಶಮಂತ್ರಿಗಳು ಈಗಾಗಲೆ ಸಿದ್ಧಗೊಳಿಸಿದ್ದಾರೆ.

ಈ ರಾಗದಲ್ಲಿ ಒಂದು ಅಪಸ್ವರ ಮಾತ್ರ ಕೇಳುತಿದೆ. ಮಲಟೋವರ ಸೂಚನೆಯ ಮೇರೆಗೆ ಯುರೋಪಿನ ಶಾಂತಿ ಪರಿಷತ್ತಿಗೆ ಆಮಂತ್ರಣ ಕಳಿಸುವವರ ಪಂಕ್ತಿಯಿಂದ ಚೀನವನ್ನು ಹೊರಗಿಡಲು ಅಂಗ್ಲೋ ಅಮೇರಿಕನ್ನರು ಒಪ್ಪಿ ಚೀನಕ್ಕೂ ಸಂಗಡಲೆ ಏಶಿಯಾ ಖಂಡಕ್ಕೂ ಅವಮಾನ ಮಾಡುವಲ್ಲಿ ಸಹಭಾಗಿಗಳಾಗಿದ್ದಾರೆ. ಇದು ಮಾಸ್ಕೋ ಘೋಷಣೆಗೆ ವ್ಯತಿರಿಕ್ತವಾದ್ದೆಂದು ಚೀನ ಈಗಾಗಲೆ ತನ್ನ ನಿಷೇಧವನ್ನು ವ್ಯಕ್ತಗೊಳಿಸಿದೆ. ರಶಿಯಾಕ್ಕೆ ಚಿಯಾಂಗ ಕೈಶೇಕರ ಸರಕಾರ ಅಪ್ರಿಯವಾಗಿರಬಹುದು. ಆದರೆ ಉಳಿದ ಪ್ರಬಲರಾಷ್ಟ್ರಗಳೂ ಅದರೊಡನೆ ಏಕೆ ಸಹಮತವಾದವೋ ಅದೀಗ ಸಮಸ್ಯೆ.



ಫ್ರಾಂಕೋನ ಪ್ರಯತ್ನ

ಸ್ಪೇನದ ಹಿಂದಿನ ಮಂತ್ರಿಗಳಲ್ಲೊಬ್ಬನಾದ ಪ್ರಸಿದ್ಧ ಪ್ರಜಾರಾಜ್ಯವಾದಿ ಅಲ್ವರೆಜಡೆಲ ವಾಯೋನು ಅಮೇರಿಕೆಯ ನೇಶನ ಪತ್ರಿಕೆಯಲ್ಲಿ ಕೆಲವು ವಿಷಯಗಳನ್ನು ಹೊರಗೆಡಹಿ ರಾಜಕಾರಣಿಗಳನ್ನು ಬೆಚ್ಚಿಸಿದ್ದಾನೆ. ಫ್ರಾಂಕೋನನ್ನು ಕಿತ್ತೊಗೆದು ಸೈನಿಕ ಸರ್ವಾಧಿಕಾರ ರಾಜ್ಯವನ್ನು ಸ್ಪೇನದಲ್ಲಿ ಅಸ್ತಿತ್ವಕ್ಕೆ ತರಲು ಸೈನ್ಯಾಧಿಕಾರಿಗಳ ಕ್ರಾಂತಿ ಒಳಸಂಚು ಸಿದ್ಧವಾಗಿದೆಯೆಂದೂ ಅದಕ್ಕೆ ಬ್ರಿಟನದ ಅಸ್ಥೆಯ ಬೆಂಬಲವಿದೆಯೆಂದೂ ಅವನು ಬರೆದಿದ್ದಾನೆ. ಅತ್ತ ಜನರಲ್ ಫ್ರಾಂಕೋನಾದರೂ ತನ್ನ ಸ್ಥಾನವನ್ನು ಉಳಿಸಿಕೊಳ್ಳಲು ಪ್ರಗತಿಪರ ಮನೋವೃತ್ತಿಗೆ ಕೆಲ ಸವಲತ್ತುಗಳನ್ನು ನೀಡಿದ್ದಾನೆ. ತನ್ನ ಆಳಿಕೆಗೆ ಜನಬೆಂಬಲವಿದೆಯೆಂದು ಪ್ರದರ್ಶಿಸುವ ಸಲುವಾಗಿ ಅವನು ಜನಮತಗಣನೆಯ ಸಿದ್ಧತೆ ನಡೆಸಿದ್ದು ಅದಷ್ಟು ಜನರ ಬೆಂಬಲ ದೊರೆದಂತೆ ದೊಡ್ಡ ಜಮೀನದಾರರ ಭೂಮಿಗಳನ್ನು ರೈತರಿಗೆ ಹಂಚಿ (ಮತ್ತು ಜಮೀನುದಾರರಿಗೆ ಪರಿಹಾರ ಕೊಟ್ಟು) ಉಭಯತರನ್ನೂ ಸಂತೋಷಗೊಳಿಸಲು ಅಜ್ಞಾಪಿಸಿದ್ದಾನೆ. ಪ್ರಜಾರಾಜ್ಯವಾದಿಗಳು ಸಿದ್ಧಗೊಳಿಸಿದ ಈ ಸಾಮ್ಯವಾದಿ ಯೋಜನೆಗೆ ಈ ವರೆಗೆ ಫ್ರಾಂಕೋ ಬಹಳ ಉಗ್ರವಾಗಿ ವಿರೋಧ ತೋರುತ್ತ ಬಂದಿದ್ದನು. ಇನ್ನು ಕೂಲಿಕಾರರ ಕೂಲಿಯನ್ನೂ ಹೆಚ್ಚಿಸಲಾಗಿದೆ. ಅಲ್ಲದೆ ಫ್ರಾಂಕೋನ ಆಳಿಕೆಯಲ್ಲಿ ಮೊದಲನೆ ಬಾರಿ ಮತದಾರರ ಯಾದಿಯನ್ನು ಸಿದ್ಧಗೊಳಿಸುವ ಎತ್ತುಗಡೆ ನಡೆದಿದೆ. ಆದರೆ ಫ್ರಾಂಕೋನ ಆಳಿಕೆಯನ್ನು ಹೀಗೆಯೇ ಸಾಗಗೊಟ್ಟರೆ ಅಲ್ಲಿ ಸಾಮ್ಯವಾದಿ ಕ್ರಾಂತಿಯಾಗಿ ಪಶ್ಚಿಮ ಯುರೋಪಿನಲ್ಲಿ ರಶಿಯಾದ ಪ್ರಭಾವಕ್ಕೆ ಅವಕಾಶವಾದೀತೆಂಬ ಭಯದಿಂದ ಕೈಗೊಂಬೆ ಸೈನಿಕ ಸರ್ವಾಧಿಕಾರ ಸ್ಥಾಪನೆಗೆ ಬ್ರಿಟನು ಉತ್ತೇಜನ ಕೊಡುತಿದೆಯೆಂದು ಆಪಾದಿಸಲಾಗಿದೆ.

ಹೊಸ ತುರ್ಕ--ಅರಬ ಗುಂಪು?

ಮಧ್ಯಪೂರ್ವದಲ್ಲಿ ಗೂಢ ಅಂತಃಪ್ರವಾಹಗಳು ಹರಿಯಲಾರಂಭಿಸಿವೆ. ಲೆಬನಾನದ ಅಧ್ಯಕ್ಷ ಶೇಖ ಬಿಶಾರಾ ಎಲ್ ಖೋರಿಯವರು ತುರ್ಕಿಗೆ "ಸೌಹಾರ್ದ" ದ ಭೆಟ್ಟಿ ಕೊಟ್ಟದ್ದರಲ್ಲಿ ಯಾವ ರಾಜಕೀಯ ಮಹತ್ವವೂ ಇಲ್ಲವೆಂದು ಅಧಿಕೃತ ಪ್ರಕಟನೆಗಳು ಸಾರುತಿದ್ದರೂ ಸೋವಿಯೆಟ್ ಗೂಢಚಾರ ಮಾರ್ಜಾಲಗಳಿಗೆ ಏನೋ ಇಲಿಯ ನಾತ ಬಡಿದು ಅವು ಇದರ ಗುಟ್ಟನ್ನು ಅರಿತುಕೊಳ್ಳಲು ಶತಪ್ರಯತ್ನ ಮಾಡಿದವು. ಮರೆಸುವ ಪ್ರಯತ್ನಗಳೆಷ್ಟೇ ಇದ್ದರೂ ಈ ಭೆಟ್ಟಿಯ ಹಿಂದೆ ಮಧ್ಯಪೂರ್ವದಲ್ಲಿ ಸೋವಿಯೆಟ್ ಪ್ರಭಾವದ ವಿರುದ್ಧ ತುರ್ಕಿ ಹಾಗು ಅರಬ ರಾಷ್ಟ್ರಗಳ ಒಂದು ಗುಂಪು ನಿರ್ಮಿಸುವ ಎತ್ತುಗಡೆಯುಂಟೆಂಬುದರಲ್ಲಿ ಸಂದೇಹವೇ ಇಲ್ಲ. ಸುಲ್ತಾನರ ತುರ್ಕಿಯಿಂದ ಸಿಡಿದು ಹೋದ ಅರಬ ರಾಷ್ಟ್ರಗಳನ್ನು ಮತ್ತೆ ಸೌಹಾರ್ದಬಂಧನದಲ್ಲಿ ಬಿಗಿಯುವ ಪ್ರಯತ್ನದ ಮೊದಲ ಹೆಜ್ಜೆಯಾಗಿ ಕಳೆದ ಸಪ್ಟೆಂಬರದಲ್ಲಿ ಇರಾಕದ ರೀಜಂಟ ಅಮೀರ ಅಬ್ದುಲ್ಲರು ಮತ್ತು ಅವರ ನಂತರ ಜನರಲ್ ನೂರಿಯವರು ತುರ್ಕಿಗೆ ಬಂದು ಗುಪ್ತ ಕರಾರುಗಳಿಂದೊಡಗೂಡಿದ ಒಪ್ಪಂದ ಮಾಡಿಕೊಂಡು ಹೋಗಿದ್ದರು. ಲೆಬನಾನದ ಅಧ್ಯಕ್ಷರ ಭೆಟ್ಟಿ ಎರಡನೆಯ ಹೆಜ್ಜೆ. ಸಿರಿಯಾದ ಅಧ್ಯಕ್ಷ ಶುಕ್ರಿ ಬೇಯವರನ್ನು ಇಷ್ಟರಲ್ಲೇ ತುರ್ಕಿಗೆ ಆಮಂತ್ರಿಸಲಾಗುವದು ಟ್ರಾನ್ಸಜೋರ್ಡನದ ಅರಸ ಅಬ್ದುಲ್ಲಾರ ಆಗಮನದ ವ್ಯವಸ್ಥೆಗಳು ಈಗಾಗಲೆ ಸಿದ್ಧವಾಗಿವೆ.

ತುರ್ಕಿ, ಲೆಬನಾನ, ಸೀರಿಯಾ, ಟ್ರಾನ್ಸಜಾರ್ಡನಗಳಿಂದ ಕೂಡಿದ ಒಂದು ಮಿಲಿಟರಿ ಗುಂಪನ್ನು ರಚಿಸುವ ಈ ಪ್ರಯತ್ನಗಳ ಹಿಂದೆ ಬ್ರಿಟಿಶ ಸೂತ್ರಚಾಲನೆಯಿದೆಯೆಂದು ನಂಬಲಾಗಿದೆ. ರಶಿಯನ್ ಕರಡಿಯ ಭಯದಿಂದ ನಡುಗುತಿರುವ ತುರ್ಕಿ ಬ್ರಿಟಿಶ ಸಿಂಹದ ಈ ಸೂತ್ರಚಾಲನೆಗೆ ಶರಣುಹೋಗಲು ಸಿದ್ಧವಾಗಿರಬೇಕು. ಅಫಘಾಣಿಸ್ತಾನದ ವರೆಗೂ ಒಂದು ಸೋವಿಯಟ್ ವಿರೋಧಿ ಗುಂಪನ್ನು ರಚಿಸಬೇಕೆಂಬ ಬ್ರಿಟಿಶ ಮಹತ್ವಾಕಾಂಕ್ಷೆಗೆ ಇರಾಣದಲ್ಲಿ ರಶಿಯಾ ನಡೆಸಿದ ತಂತ್ರಗಳು ಬಿಸಿ ನೀರು ಹೊಯ್ದವು. ಅಫಘಾಣಿಸ್ತಾನ ರಶಿಯಾದೊಡನೆ ಒಪ್ಪಂದ ಮಾಡಿಕೊಂಡಿತು. ಇಜಿಪ್ತಕ್ಕೆ ರಶಿಯಾ ತೀರ ದೂರವಾಗಿರುವದರಿಂದ ಅದು ಈ ಗುಂಪಿನಲ್ಲಿ ಸೇರಲು ಒಪ್ಪಲಿಲ್ಲ.

ಬಾಲ್ಕನ ರಾಷ್ಟ್ರಗಳ ಗುಂಪೊಂದನ್ನು ರಶಿಯಾದ ವಿರುದ್ಧ ಕಳೆದ ಯುದ್ಧಾಂತದಲ್ಲಿ ರಚಿಸಿದಂತೆ ಈ ಬಾರೆ ಈ ಹಿಂದುಳಿದ ಮುಸ್ಲಿಮ ರಾಷ್ಟ್ರಗಳ ಗುಂಪನ್ನು ಉಂಟುಮಾಡಲು ಯತ್ನಿಸುವ ಬ್ರಿಟನದ ಪ್ರಯತ್ನಗಳಿಗೆ ಅದೇ ಮಾದರಿಯ ಫಲ ದೊರಕದೆ?

ದಕ್ಷಿಣ ಆಫ್ರಿಕೆಯ ಸತ್ಯಾಗ್ರಹ

ಕಳೆದ ಕೆಲ ವಾರಗಳಲ್ಲಿ ದರ್ಬಾನದಲ್ಲಿ ನಡೆದಿರುವ ಹಿಂದೀಯರ ಸತ್ಯಾಗ್ರಹದ ಪರಿಣಾಮವಾಗಿ ನೂರಾರು ಸ್ತ್ರೀಪುರುಷರು ೬ ವಾರುಗಳಿಂದ ೪ ತಿಂಗಳುಗಳ ವರೆಗಿನ ಸಶ್ರಮ ಶಿಕ್ಷೆಗೆ ಗುರಿಯಾಗಿದ್ದಾರೆ. ಹಿಂದೀಯರನ್ನು ಪ್ರತ್ಯೇಕಿಸಿಡುವ "ಘೆಟ್ಟೋ" ಕಾಯಿದೆಯ ವಿರುದ್ಧ ಹಿಂದೀಯರ ಸತ್ಯಾಗ್ರಹವಿದ್ದರೂ ಹಳೆಯ ದಂಗೆಗಾರ ಕಾಯಿದೆಯನ್ನು ಪ್ರಯೋಗಿಸಿ ಅವರನ್ನು ಶಿಕ್ಷಿಸಲಾಗಿದೆ. ತಾ. ೬ ಕ್ಕೆ ಶಿಕ್ಷೆಗೊಳಗಾದ ೧೫೦ ಜನರ ಮುಂದಾಳಾದ ಶ್ರೀ ಜೆ. ಪಡಯಾಚಿಯವರು ನ್ಯಾಯಸ್ಥಾನದಲ್ಲಿ ಹೇಳಿದ್ದು: "ದಕ್ಷಿಣ ಆಫ್ರಿಕೆಯ ಸೈನ್ಯದೊಡನೆ ಸ್ಟಾಫ ಸಾರ್ಜೆಂಟನಾಗಿ ಮೂರುವರ್ಷದ ವರೆಗೆ ದುಡಿದ ಭೂತಪೂರ್ವ ಸೈನಿಕನು ನಾನು. ನನ್ನ ಜನ್ಮಭೂಮಿಗೆ ಮರಳಿದಾಗ ಸಾವಿರಾರು ಜನರು ಹೋರಾಡಿ ಬಿಡಿಸಿದ ಪ್ರಾಣ ತೆತ್ತರೋ ಆ ಎಲ್ಲ ಸುಖಗಳು ನನಗೂ ದೊರೆಯುವವೆಂದು ಆಸೆ ಕೊಟ್ಟದ್ದೆ. ಆದರೆ ಅದರ ಬದಲು ನನಗೆ "ಘೆಟ್ಟೋ" ಕಾಯಿದೆ ಎದುರಾಯಿತು. "ನಾತಾಳ ಹಿಂದೀ ಕಾಂಗ್ರೆಸ್ಸು ಸತ್ಯಾಗ್ರಹದ ಮೊದಲನೆ ಘಟ್ಟವೀಗ ಮುಗಿದು ಎರಡನೆಯದು ಒಂದು ವಾರದಲ್ಲಿ ಪ್ರಾರಂಭವಾಗುವದೆಂದು ಸಾರಿದೆ. ನೂರುಗಟ್ಟಲೆ ಸ್ವಯಂಸೇವಕರು ಸಿದ್ಧರಾಗಿರುವರಲ್ಲದೆ ಟ್ರಾನ್ಸವಾಲ, ಕೇಪ ಪ್ರಾಂತಗಳಿಂದ ಹಲವರು ಬರಲಿರುವರೆಂದು ಹೇಳಲಾಗಿದೆ.

ಹಿಂದೀಯರ ಈ ವೀರ ಸಂಗ್ರಾಮ ಮುಂದೆ ಸಾಗಿದಂತೆ ಜಗತ್ತಿನ ಕಣ್ಣು ತುಸುತುಸುವೆ ತೆರೆಯತೊಡಗಿದೆ. ಹಿಂದೀಯರು ಆಫ್ರಿಕೆಯ ಮೂಲ ನಿವಾಸಿಗಳೊಡನೆ ಒಂದುಗೂಡಿ ವಿಶಾಲವಾದ ಹೋರಾಟ ಹೂಡುವ ಮಾತು ನಡೆಸಿರುವಾಗ ಅತ್ತ "ಘೆಟ್ಟೋ" ಕಾಯಿದೆಯಿಂದ ಎಲ್ಲ ಏಶಿಯಾಟಿಕ್ ಜನರು ಪೀಡಿತರಾಗಿರುವದರಿಂದ ಚೀನದ ಸರಕಾರವೂ ದಕ್ಷಿಣಾಫ್ರಿಕೆಯೊಡನೆ ಇದರ ಚರ್ಚೆಯನ್ನಿತ್ತಿದೆ. ಎಲ್ಲಕ್ಕೂ ಹೆಚ್ಚಾಗಿ ಬಿಳಿಯರೇ ಹಿಂದೀ ಸತ್ಯಾಗ್ರಹದ ಔಚಿತ್ಯವನ್ನು ಮನಗಂಡು ಅವರ ಪರವಾಗಿ ಚಳವಳಿಯನ್ನು ಆರಂಭಿಸಿರುವರು. "ಮಾನವ ಹಕ್ಕುಗಳ ಮಂಡಲ" ವೆಂಬ ಹೊಸ ಯುರೋಪಿಯನ್ ಸಂಸ್ಥೆಯವರು ಸತ್ಯಾಗ್ರಹಿಗಳ ವಿರುದ್ಧ ನಡೆದ ಬಿಳಿಯರ ಪುಂಡಾಟಿಕೆಯನ್ನು ಖಂಡಿಸಿ ಕಾಯಿದೆ ಮಂತ್ರಿಗೆ ಪತ್ರ ಬರೆದಿರುವರಲ್ಲದೆ ಹಿಂದೀ ಚಳವಳಿಗೆ ಧನ ಸಹಾಯವನ್ನು ಕೂಡ ಮಾಡಲನುವಾಗಿದ್ದಾರೆ. ಏಶಿಯಾಟಿಕ್ ಹಕ್ಕುಗಳ ಮಂಡಲದ ಯುರೋಪಿಯನ್ ಕಾರ್ಯದರ್ಶಿ ಶ್ರೀ ಬಿಲ್ಲಿ ಸಿಚಿಯವರು ಸತ್ಯಾಗ್ರಹಿಗಳೊಡನೆ ಸೇರಿಕೊಂಡು ೧೫ ಪೌಂಡು ದಂಡಕ್ಕೆ ಗುರಿಯಾದರು. ಆದರೆ ಅದನ್ನು ಕೊಡಲೊಪ್ಪಲಿಲ್ಲ. ಮ್ಯಾಜಿಸ್ಟ್ರೇಟರಿಗೆ ಅವರು ಹೇಳಿದ್ದು "ಇದು ನನಗೂ ನಿಮಗೂ ಸೇರಿಯೆ ಅವಮಾನಕರವಾದ ಕಾಯಿದೆ."

ಕಳೆದ ಶನಿವಾರ ರಾತ್ರಿ ಕೆಲವು ದರೋಡೆಗಾರರು ಕಿರ್ಲೋಸ್ಕರ ವಾಡಿಯಲ್ಲಿಯ ಬೊಕ್ಕಸವನ್ನು ಅಪಹರಿಸುವ ಪ್ರಯತ್ನ ಮಾಡಿದರು. ಉಪಕೋಶಾಧ್ಯಕ್ಷ ಶ್ರೀ ನವರೆಯವರ ಮನೆಯನ್ನು ರಾತ್ರಿ ಹೊಕ್ಕು ಪಿಸ್ತೂಲಿನ ಅಂಜಿಕೆ ಹಾಕಿ ಕೀಲಿಕೈಗಳನ್ನು ಪಡೆದರು. ಆದರೆ ನವರೆಯವರು ಗದ್ದಲ ಮಾಡಲಾಗಿ ಓಡಿಹೋದರು.

ಹಿಂದೀ ಸಶಸ್ತ್ರ ಬಲಗಳ ಪುನರ್ಘಟನೆ

(೧ನೇ ಪುಟದಿಂದ)

ಮುಖ್ಯ ಸೇನಾಪತಿಯ ಸ್ಥಾನವನ್ನೇ ರದ್ದುಗೊಳಿಸಿ ಭೂಜಲ ಆಕಾಶ ಬಲಗಳ ಪರಮಾಧಿಪತ್ಯವನ್ನು ರಾಷ್ಟ್ರಪತಿಯು ಕೈಯಲ್ಲಿರಿಸಬೇಕು. ಯುದ್ಧ ಮಂತ್ರಿಯ ಮೂಲಕ ದೇಶರಕ್ಷಣದ ವಿಷಯಗಳನ್ನು ರಾಷ್ಟ್ರಪತಿ ನಿರ್ವಹಿಸಬೇಕು.

ಯುದ್ಧಮಂತ್ರಿ ಮಂತ್ರಿಮಂಡಲದ ಸದಸ್ಯನಿದ್ದು ರಾಷ್ಟ್ರಪತಿಗೂ ಶಾಸನ ಸಭೆಗೂ ಹೊಣೆಯುಳ್ಳವನಾಗಿರಬೇಕು. ಅವನ ಕರ್ತವ್ಯಗಳನ್ನು ಇಲ್ಲಿ ವಿಸ್ತಾರವಾಗಿ ಹೇಳಬೇಕಾಗಿಲ್ಲ.

ಯುದ್ಧಮಂತ್ರಿಗೆ ತನ್ನ ಕರ್ತವ್ಯ ನಿರ್ವಹಣೆಯಲ್ಲಿ ಮೂರೂ ಸಂರಕ್ಷಣ ಬಲಗಳ ಮುಖ್ಯ ನಾಯಕರು (ಚೀಫ ಅಫ್ ಸ್ಟಾಫ) ಸಹಾಯ ಮಾಡಬೇಕು. ಈ ಮೂವರು ಮುಖ್ಯ ನಾಯಕರೂ ಯುದ್ಧ ಖಾತೆಯ ಹಿರಿಯ ಸದಸ್ಯರೂ ಹಿಂದೀಯರಿರಬೇಕು. ಮುಖ್ಯ ನಾಯಕರು ತಮ್ಮ ನೇಮಕದ ಬಲದಿಂದ ಆಯಾ ಬಲದ ಹಿರಿಯರಲ್ಲಿ ಹಿರಿಯ ಅಧಿಕಾರಿಗಳೆನಿಸಬೇಕು.

ಈಗ ಹಿಂದೀ ಜಲ ಮತ್ತು ಆಕಾಶ ಪಡೆಗಳು ಬಹಳ ಸಣ್ಣವಿರುವದರಿಂದ ಅವುಗಳಿಗಾಗಿ ಪ್ರತ್ಯೇಕ ಮಂತ್ರಿಗಳವಶ್ಯವಿಲ್ಲವಾದರೂ ಆ ಎರಡು ಶಾಖೆಗಳ ಸರ್ವತೋಮುಖ ಬೆಳವಣಿಗೆಯ ಭರವಸೆಗಾಗಿ ಮುಂಗಡ ಪತ್ರಿಕೆಯಲ್ಲಿ ಅವುಗಳಿಗಾಗಿ ಪ್ರತ್ಯೇಕ ಹಣವನ್ನು ತೋರಿಸಬೇಕಲ್ಲದೆ, ಪ್ರತಿ ಶಾಖೆಯ ಮುಖ್ಯ ನಾಯಕನಿಗೂ ಒಬ್ಬೊಬ್ಬ ಹಣಕಾಸಿನ ಸಲಹೆಗಾರನಿರಬೇಕು.

ಪ್ರತಿ ಶಾಖೆಯ ಮುಖ್ಯ ನಾಯಕನಿಗೂ ಒಂದು ತಾಂತ್ರಿಕ ಸಲಹೆ ಮಂಡಲವಿರಬೇಕು. ಇದರಲ್ಲಿ ವಿದೇಶಿ ತಜ್ಞರಿದ್ದು ಅವರನ್ನು ಹಿಂದುಸ್ತಾನ ಸರಕಾರ ಕರಾರಿನಮೇಲೆ ನೇಮಿಸಿಕೊಳ್ಳಬೇಕು. ಅವರು ಹಿಂದೀ ಸಶಸ್ತ್ರ ಬಲಗಳನ್ನು ಅಧುನಿಕ ಮಟ್ಟದಲ್ಲಿರಿಸಲು ಬೇಕಾದ ತಾಂತ್ರಿಕ ಸಲಹೆ ಕೊಡಬೇಕು. ಅವರಿಗೆ ಯಾವ ಆಡಳಿತದ ಅಧಿಕಾರವೂ ಇರತಕ್ಕದ್ದಲ್ಲ. ಮುಖ್ಯ ನಾಯಕನ ನಿರ್ಣಯವೇ ಕೊನೆಯದಾಗಿರಬೇಕು. ಹಿಂದೀ ಸಂರಕ್ಷಣ ಬಲಗಳ ಬೆಳವಣಿಗೆ ಒಂದು ಮಟ್ಟಕ್ಕೆ ಬಂದೊಡನೆ ಅವರನ್ನು ಮನೆಗೆ ಕಳಿಸಬೇಕು.

ಯುದ್ಧ ಖಾತೆಯಲ್ಲಿ ಶಿಕ್ಷಣ ಮತ್ತು ಪ್ರಾಯೋಗಿಕ ಸಂಶೋಧನಗಳಿಗೆ ಎರಡು ಮುಖ್ಯ ಉಪಖಾತೆಗಳು ಸೇರಿರಬೇಕು. ಪರಮಾಣು ಬಾಂಬಿನ ಅವಿಷ್ಕಾರದಿಂದ ಯುದ್ಧ ಕಲೆಯ ಗತ್ತೇ ಕ್ರಾಂತಿಗೊಳಗಾಗಿದ್ದು ವೈಜ್ಞಾನಿಕ ಸಂಶೋಧನೆಯನ್ನು ಸೈನಿಕ ಸಾಮಗ್ರಿಗಳಿಗೆ ಬಳಸುವದರಲ್ಲಿ ಹಿಂದುಸ್ತಾನ ಹಿಂದೆ ಬಿದ್ದರೆ ಅಪಾಯವಿದೆ. ಪ್ರಾಯೋಗಿಕ ಸಂಶೋಧನ ಖಾತೆಯವರು ಹಿಂದುಸ್ತಾನದಲ್ಲಿಯೂ ಬೇರೆಡೆಗಳಲ್ಲಿಯೂ ಆಗುವ ವೈಜ್ಞಾನಿಕ ಸಂಶೋಧನೆಗಳನ್ನು ಹಿಂದೀ ಸಶಸ್ತ್ರ ಬಲಗಳ ಸಾಮರ್ಥ್ಯ ಹೆಚ್ಚಿಸಲು ಉಪಯೋಗಿಸಿಕೊಳ್ಳತಕ್ಕದ್ದು.

ವಿದೇಶೀಯರು ಸಾಕು

ಯುದ್ಧ ಮಂತ್ರಿಯು ಕೈಕೆಳಗೆ, ಮೂರೂ ಸಶಸ್ತ್ರ ಬಲಗಳಲ್ಲಿ ಎಲ್ಲ ಆಜ್ಞಾಪಕ ಮತ್ತು ಮುಖ್ಯ ಆಡಳಿತ ಸ್ಥಾನಗಳಿಗೆ ಯೋಗ್ಯ ಹಿಂದೀಯರನ್ನು ಆರಿಸಲು ಒಂದು ಆಯ್ಕೆ ಸಮಿತಿಯಿರಬೇಕು. ಬ್ರಿಟಿಶ ಅಧಿಕಾರಿಗಳನ್ನು ಆದಷ್ಟು ಬೇಗ ತೆಗೆದುಹಾಕಿ ಹಿಂದೀಯರನ್ನು ನೇಮಿಸಬೇಕು. ಇನ್ನು ಮೇಲೆ ವಿದೇಶೀಯರನ್ನು ಹಿಂದೀ ಸಶಸ್ತ್ರ ಬಲಗಳಿಗೆ ಭರ್ತಿ ಮಾಡಿಕೊಳ್ಳುವದನ್ನು ಒಡನೆ ನಿಲ್ಲಿಸಿಬಿಡಬೇಕು.

ಅಧುನಿಕ ಯುದ್ಧಗಳು ಬರಿ ಸೈನಿಕ ವೃತ್ತಿಯವರ ಯುದ್ಧಗಳಲ್ಲ. ಆದುದರಿಂದ ಯಾವುದೊಂದು ನೇಮಕಕ್ಕೆ ಆಯಾ ಸಶಸ್ತ್ರ ಬಲದಿಂದ ಸಾಕಷ್ಟು ಯೋಗ್ಯತೆಯುಳ್ಳವನು ದೊರಕದೆ ಹೋದರೆ ಯೋಗ್ಯ ಹಿಂದೀ ನಾಗರಿಕನನ್ನು ತಾತ್ಕಾಲಿಕ ಮಿಲಿಟರಿ ತರಗತಿ ಕೊಟ್ಟು ಆ ಸ್ಥಾನಕ್ಕೆ ನೇಮಿಸಬೇಕು.

ಕೊನೆಯದಾಗಿ ಈ ವರೆಗೆ ಬ್ರಿಟಿಶರು ಹಿಂದೀ ಸೈನ್ಯದಲ್ಲಿ ಕುಂದಿದ ಧಾರ್ಮಿಕ ಪ್ರಾಂತಿಕ, ವರ್ಗೀಯ ಭೇದಗಳನ್ನೆಲ್ಲ ತೊಡೆದುಹಾಕಿ ವಿವಿಧ ಧರ್ಮ, ಪ್ರಾಂತಗಳ ಜನರನ್ನು ಹೆಚ್ಚು ಒಗ್ಗಟ್ಟಾಗುವಂತೆ ಮಾಡಿ, ಸೈನ್ಯದ ಸಾಮರ್ಥ್ಯವನ್ನು ಹೆಚ್ಚಿಸುವದಲ್ಲದೆ ಅದು ದೇಶಕ್ಕೇ ಮಾರ್ಗದರ್ಶಕವಾಗುವಂತೆ ಮಾಡಬೇಕು.

ನಮಗೆ ಯಾರಲ್ಲಿಯೂ ವೈರವಿಲ್ಲ. ಯಾವ ದೇಶದ ಮೇಲೂ ನಮ್ಮ ಕಣ್ಣಿಲ್ಲ. ಜಾಗತಿಕ ಶಾಂತಿಗೆ ನಮ್ಮ ಪಾಲಿನ ಸೇವೆ ಸಲ್ಲಿಸಲು ನಾವು ಸಿದ್ಧರೆ. ಆದರೆ ನಮ್ಮ ದೇಶದ ಸಾರ್ವಭೌಮತ್ವ, ಪ್ರಾದೇಶಿಕ ಸ್ವಾಮಿತ್ವ, ಗೌರವಗಳನ್ನು ರಕ್ಷಿಸಲು ನಾವು ದೃಢ ನಿರ್ಧಾರವುಳ್ಳವರೂ ಆಗಿದ್ದೇವೆ. ಅದೊಂದೇ ಕಾರಣಕ್ಕಾಗಿ ನಮಗೆ ನಿಜವಾಗಿ ರಾಷ್ಟ್ರೀಯವೆನಿಸಿದ ಸೇನೆ, ನೌಕಾ ಬಲ, ವಿಮಾನ ಬಲಗಳು ಬೇಕಾಗಿವೆ.

ಕರ್ನಾಟಕ ಏಕೀಕರಣ ಮತ್ತು ಕಾಂಗ್ರೆಸ ಮಂತ್ರಿಮಂಡಲಗಳು—

ಆಗಬೇಕಾದ ಸಹಾಯಗಳು

[ಕಳೆದ ಸಂಚಿಕೆಯಿಂದ ಮುಂದರಿದುದು]

ಮದ್ರಾಸ ಮಂತ್ರಿ ಮಂಡಲದಿಂದ ಆಗಬಹುದಾದುದೇನು?

ಮುಂಬಯಿ ಮಂತ್ರಿಮಂಡಲದಿಂದ ಕರ್ನಾಟಕ ಏಕೀಕರಣದ ಪೂರ್ವಸಿದ್ಧತೆಗೆ ಆಗಬಹುದಾದ ಸಹಾಯವನ್ನು ವಿವರಿಸಿದ ಬಳಿಕ ಮದ್ರಾಸ ಸರಕಾರದಿಂದಾಗಬಹುದಾದ ಸಹಾಯಗಳನ್ನು ೧೪ ಅವಾಂತರಗಳಲ್ಲಿ ಉಲ್ಲೇಖಿಸುತ್ತ ಏಕೀಕರಣ ಸಂಘದ ಪುಸ್ತಿಕೆ, ಮೊಟ್ಟ ಮೊದಲು ಮದ್ರಾಸ ಇಲಾಖೆಯಲ್ಲಿರುವ ಕನ್ನಡ ಭಾಗಗಳಲ್ಲಿ ಏಕೀಕರಣದ ಕಲ್ಪನೆ ಕೂಡ ಜನರಲ್ಲಿಲ್ಲದಷ್ಟು ಹಿಂದುಳಿತವಿದೆಯೆಂದು ಟೀಕಿಸಿದೆ. ಮುಂಬಯಿಯಲ್ಲಿರುವಂತೆ ಕನ್ನಡ ಭಾಗಗಳು ಏಕತ್ರ ಸೇರಿರದಿರುವದೇ ಇದಕ್ಕೆ ಕಾರಣ. ಈ ಅವ್ಯವಸ್ಥೆಯನ್ನು ಹೋಗಲಾಡಿಸಲು ಮದ್ರಾಸ ಕರ್ನಾಟಕದ ಎಲ್ಲ ಭಾಗಗಳನ್ನೂ ಸೇರಿಸಿ ಶೀಘ್ರವಾಗಿ ಒಂದು ಹೊಸ ಆಡಳಿತ ಪ್ರದೇಶವನ್ನು ನಿರ್ಮಿಸಬೇಕೆಂದು ಬಹಳ ಜೋರಿನಿಂದ ಒತ್ತಾಯಗೊಳಿಸಲಾಗಿದೆ. ಇದರಿಂದ ಕನ್ನಡಿಗರ ಪರಸ್ಪರ ಪರಿಚಯ ಬೆಳೆದು ಏಕೀಕರಣ ಭಾವನೆಯುಂಟಾಗುವದು. ಇದಲ್ಲದೆ ಇನ್ನೂ ಕೆಲ ಪ್ರಾದೇಶಿಕ ಸ್ಥಿತ್ಯಂತರಗಳನ್ನು ಸೂಚಿಸಲಾಗಿದೆ. ಸೇಲಂ ಕೊಯಮತ್ತೂರ ಜಿಲ್ಲೆಗಳ ಕನ್ನಡ ತಾಲೂಕುಗಳನ್ನು ಜೋಡಿಸಿ ಹೊಸ ಜಿಲ್ಲೆ ಮಾಡುವದು, ಅನಂತಪುರ, ಕರ್ನೂಲ ಜಿಲ್ಲೆಗಳ ಕೆಲಭಾಗಗಳನ್ನೂ ಬಳ್ಳಾರಿಯ ಕೆಲ ಭಾಗಗಳನ್ನೂ ಸೇರಿಸಿ ಹೊಸ ಅನಂತಪುರ ಜಿಲ್ಲೆ ರಚಿಸುವದು, ವಾಯನಾಡು ತಾಲೂಕಿನ ಕನ್ನಡ ಹಳ್ಳಿಗಳನ್ನು ನೀಲಗಿರಿ ಜಿಲ್ಲೆಗೆ ಸೇರಿಸುವದು ಸೂಚಿಸಲ್ಪಟ್ಟಿದೆ.

ಮದ್ರಾಸ ಪ್ರಾಂತದ ಅಸೆಂಬ್ಲಿ, ಕೌನ್ಸಿಲ, ವಿಶ್ವವಿದ್ಯಾಲಯ ಮತ್ತು ದಿಲ್ಲಿಯ ಕೇಂದ್ರ ಶಾಸನ ಸಭೆ ಇವುಗಳಿಗೆ ಕರ್ನಾಟಕ ಭಾಗದಿಂದ ಪ್ರತ್ಯೇಕವಾಗಿ ಪ್ರತಿನಿಧಿಗಳನ್ನು ಕಳಿಸುವ ಏರ್ಪಾಡು ಮಾಡಬೇಕು.

ಔದ್ಯೋಗಿಕ ವಿಷಯದಲ್ಲಿ, ಮಂಗಳೂರು ಜಿಲ್ಲೆಯಲ್ಲಿ ನೈಸರ್ಗಿಕ ಅನುಕೂಲತೆಯುಳ್ಳ ಮಲ್ಪೆ ಬಂದರವನ್ನು ರೂಪಿಸಬೇಕು, ಮಂಗಳೂರಿಂದ ಕಡೂರ ಮುಖಾಂತರ ಮಂಗಳೂರು ಹುಬ್ಬಳ್ಳಿ ರೇಲ್ವೆ ಮಾರ್ಗ ಪ್ರಾರಂಭಿಸಲು ಕೇಂದ್ರ ಸರಕಾರಕ್ಕೆ ಒತ್ತಾಯ ಮಾಡಬೇಕು, ಮದ್ರಾಸ ಕರ್ನಾಟಕ ಭಾಗಕ್ಕಾಗಿಯೆ ಪ್ರತ್ಯೇಕ ಯುದ್ಧೋತ್ತರ ಯೋಜನೆ ಸಿದ್ಧಗೊಳಿಸಬೇಕು. ಕರ್ನಾಟಕ ಭಾಗದಲ್ಲಿರುವ ಪಾಯಕಾರಾ ವಿದ್ಯುತ್ ಯೋಜನೆಯ ಪೂರ್ಣ ಉಪಯೋಗ ಕರ್ನಾಟಕ ನಿವಾಸಿಗಳಿಗೆ ದೊರೆಯುವಂತೆ ಮಾಡಬೇಕು, ಮಂಗಳೂರು ಜಿಲ್ಲೆಯ ಔದ್ಯೋಗಿಕ ಅಭಿವೃದ್ಧಿಗಾಗಿ ಶ್ರೀ ಎಂ. ಶಂಕರ ನಾರಾಯಣರಾಯರ Development of Industries in South Canara ಪುಸ್ತಕದಲ್ಲಿರುವ ಸೂಚನೆಗಳನ್ನು ಗಮನಿಸಬೇಕು, ಎಂದು ಸೂಚಿಸಲಾಗಿದೆ. ಬರಗಾಲಕ್ಕೆ ತುತ್ತಾಗಿರುವ ಬಳ್ಳಾರಿ ಅನಂತಪುರ ಜಿಲ್ಲೆಗಳಿಗೆ ಕಾಲುವೆಗಳಿಂದ ನೀರು ಪೂರೈಸಬೇಕೆಂದೂ ಕೇಳಿಕೊಳ್ಳಲಾಗಿದೆ.

ಮದ್ರಾಸ ಬಾನುಲಿಕೇಂದ್ರದಲ್ಲಿ ತೆಲುಗು ತಮಿಳು ಕಾರ್ಯಕ್ರಮಗಳಂತೆ ಕನ್ನಡ ಕಾರ್ಯಕ್ರಮಗಳಿಗೂ ನಿತ್ಯ ಅವಕಾಶ ಕೊಡಬೇಕು. ಅನಂತಪುರ, ಕೊಯಮತ್ತೂರು ಪಟ್ಟಣಗಳಲ್ಲಿಯೂ ನೀಲಗಿರಿ ಜಿಲ್ಲೆಯಲ್ಲಿಯೂ ನ್ಯಾಯಸ್ಥಾನದ ಭಾಷೆಗಳಲ್ಲಿ ಕನ್ನಡಕ್ಕೂ ಸ್ಥಾನವೀಯುವದು ಸಂಘದ ಇತರ ಸೂಚನೆಗಳಲ್ಲಿ ಕೆಲವು.

ಸಂಯುಕ್ತ ಕಾರ್ಯಗಳು

೧೯೪೭ರಲ್ಲಿ ವರ್ಧಾದಲ್ಲಿ ಸೇರಿದ ಕಾಂಗ್ರೆಸ್ ವರ್ಕಿಂಗ ಕಮಿಟಿಯಲ್ಲಿ ಸೂಚಿಸಲ್ಪಟ್ಟ ಅಂತಃಪ್ರಾಂತೀಯ ಸಮಿತಿಗಳ ತತ್ವದ ಮೇಲೆ ಮುಂಬಯಿ-ಮದ್ರಾಸ ಅಂತಃಪ್ರಾಂತೀಯ ಸಂಯುಕ್ತ ಸಮಿತಿ ನಿರ್ಮಿಸಿ ಕರ್ನಾಟಕ ಏಕೀಕರಣಕ್ಕಾಗಿ ಕೆಲ ಬಗೆಯ ಸಹಾಯಗಳನ್ನು ನೀಡಬಹುದೆಂದು ಏಕೀಕರಣ ಸಂಘ ಸೂಚಿಸಿದೆ. ಮುಖ್ಯವಾಗಿ ಮುಂಬಯಿ ಕರ್ನಾಟಕ ಮತ್ತು ಮದ್ರಾಸದ ಕರ್ನಾಟಕ ಭಾಗಗಳಿಗೆ ಸೇರಿ ಕರ್ನಾಟಕ ವಿಶ್ವವಿದ್ಯಾಲಯ ಸ್ಥಾಪಿಸುವ ಪ್ರಯತ್ನ ಮಾಡುವದು, ಅಖಿಲ ಕರ್ನಾಟಕಕ್ಕಾಗಿ ಸಂಸ್ಥಾನಗಳ ಮತ್ತು ಕೊಡಗು ಜಿಲ್ಲೆಯ ಸಹಕಾರದಿಂದ ಒಮ್ಮುಖವಾದ ಯುದ್ಧೋತ್ತರ ಯೋಜನೆ ಸಿದ್ಧಗೊಳಿಸುವದು ಮತ್ತು ಯೋಜನೆಗಳಿಗಾಗಿ ಕೇಂದ್ರ ಸರಕಾರದಿಂದ ಪ್ರಾಂತಗಳಿಗೆ ಬರುತಿರುವ ಸಹಾಯದ್ರವ್ಯದಲ್ಲಿ ಕರ್ನಾಟಕ ಭಾಗಕ್ಕೆ ಯೋಗ್ಯ ಪಾಲು ಸಿಗುವಂತೆ ನೋಡುವದು (ಈಗ ಅದಕ್ಕೆ ನ್ಯಾಯವಾದ ಪಾಲು ಸಿಗುತ್ತಿಲ್ಲ), ಎರಡೂ ಪ್ರಾಂತಗಳಲ್ಲಿ ಕರ್ನಾಟಕಕ್ಕೆ ಸೇರಬೇಕಾದ ಭಾಗಗಳ ಗಡಿ ನಿರ್ಣಯ, ಕರ್ನಾಟಕ ಪ್ರಾಂತದ ಸ್ವಾವಲಂಬಿತ್ವದ

—ಪುಟ ೧೨ಕ್ಕೆ

ಕರ್ಮವೀರ

ಹರಿಜನ ಪುರವಣಿ

ವ್ಯಾಜಸ್ತುತಿ

“ ನಿಮ್ಮಿಂದ ಯೋಗ್ಯ ಮತ್ತು ಕೂಡಲೆ ಉತ್ತರ ದೊರೆಯುವ ಆಸೆಯಿಂದ ನಾನೀ ಪತ್ರವನ್ನು ಬರೆಯುತಿದ್ದೇನೆ. ಮೆಹತರ ಜಾತಿಯವರ ಬಗ್ಗೆ ಇಡೀ ಹಿಂದುಸ್ತಾನದಲ್ಲಿಯ ಜನತೆಯಂತೆ ನಿಮ್ಮದು ಸದ್ಭಾವನೆಯಿರುವದೆಂಬುದು ನನಗೆ ಚೆನ್ನಾಗಿ ಗೊತ್ತಾಗಿದೆ. ನಿಮ್ಮ ‘ಹರಿಜನ’ ಪತ್ರಿಕೆಯಿಂದ ನಿಮ್ಮ ಹೃದಯವನ್ನು ತಿಳಿದುಕೊಳ್ಳಲು ಒಳ್ಳೆ ಅವಕಾಶ ಸಿಕ್ಕಿದೆ. ವಿಶೇಷತಃ ಇತ್ತೀಚಿನ ‘ಹರಿಜನ’ ಹಂಚಿಕೆಗಳಲ್ಲಿ ಮೆಹತರ ಜಾತಿಯ ಬಗ್ಗೆ ನಿಮ್ಮ ವಿಚಾರಗಳು ಸ್ಪಷ್ಟವಾಗಿ ಪ್ರತಿಪಾದಿತವಾಗಿವೆ.

“ನಮ್ಮ ಬಗ್ಗೆ ನಿಮ್ಮ ಭಾವನೆಗಳೇನಿವೆಂಬುದನ್ನು ಚೆನ್ನಾಗಿ ತಿಳಿದುಕೊಳ್ಳಬೇಕೆಂದು ನಾನು ನನ್ನ ಹೃದಯ ಬಿಚ್ಚಿ ಕೇಳಬಯಸುತ್ತೇನೆ. ಗೊಂದಲದ ಮತ್ತು ಅವ್ಯವಸ್ಥಿತ ಹಿಂದೀ ರಾಜಕಾರಣ ಕ್ಷೇತ್ರದಲ್ಲಿ ನಮ್ಮ ನಿಶ್ಚಿತ ಸ್ಥಾನಮಾನಗಳನ್ನು ತಿಳಿದುಕೊಳ್ಳಬೇಕೆಂದೂ ನನ್ನ ಬಯಕೆ.

“ ಈ ಪತ್ರ ನಿಮ್ಮ ಕೈಸೇರುವಷ್ಟರಲ್ಲಿ ಘಟನಾ ಸಮಿತಿಗಾಗಿ ಹುರಿಯಾಳುಗಳ ನಾಮಪತ್ರ ಕೊಡುವ ಕೊನೆಯ ತಾರೀಕು ಬರುವದು. ಈ ತಿಂಗಳ ಕೊನೆಯೊಳಗಾಗಿ ಅದು ಮುಗಿಯತಕ್ಕದ್ದೆಂದು ತಿಳಿಯುತ್ತದೆ. ಕಾಂಗ್ರೆಸ್ಸು ಆ ಸಮಿತಿಗಾಗಿ ಶಾಸನ ಸಭೆಯ ಸದಸ್ಯರನ್ನು ಮತ್ತು ಇತರರನ್ನು ನಿಲ್ಲಿಸಲಿರುವದು. ಅಸ್ಪೃಶ್ಯವರ್ಗದವರಿಗೂ ಪ್ರಾತಿನಿಧ್ಯ (ಸಾಕಷ್ಟು ?) ಸಿಕ್ಕುವದೆಂದು ನಂಬಲಾಗಿದೆ. ಆದರೆ ಮೆಹತರ ಜಾತಿಯ ಜನರಲ್ಲಿ ಸಾಕಷ್ಟು ಇಲ್ಲವೆ ಕನಿಷ್ಠ ಕೆಲವರನ್ನಾದರೂ ಆರಿಸಬೇಕೆಂದು ನೀವಾಗಲಿ ಕಾಂಗ್ರೆಸ್ಸಾಗಲಿ ಸೂಚಿಸುವಿರೋ ? ಆ ಜನರು ಆರಿಸಲ್ಪಟ್ಟರೆ ತಮ್ಮ ನಾಗರಿಕತೆಯ ಕರ್ತವ್ಯವನ್ನು ಅವರು ನೆರವೇರಿಸುವರೆಂದು ನನ್ನ ಮನವರಿಕೆಯಿದೆಯಲ್ಲದೆ ಸ್ವತಂತ್ರ ಹಿಂದುಸ್ತಾನದ ಭಾವೀ ರಾಜ್ಯಘಟನೆಯಲ್ಲಿ ತಮ್ಮ ನ್ಯಾಯ್ಯವಾದ ಪಾಲನ್ನು ವಹಿಸುವದಾಗಿಯೂ ನಾನು ಮನಗಂಡಿದ್ದೇನೆ.

೨) ನಮ್ಮ ಬಗ್ಗೆ ನೀವು ಉದಾರ ಧೋರಣವನ್ನು ತಾಳಿರುವಿರಾದ್ದರಿಂದ ಘಟನಾಸಮಿತಿಯಲ್ಲಿ ಮೆಹೆತರರಿಗಾಗಿ ಸ್ಥಳಪಡೆಯುವದನ್ನು ನೀವು ಅಲಕ್ಷಿಸಲಾರಿರೆಂದು ನಾನು ಮತ್ತು ನನ್ನ ಜಾತಿಯವರು ಭಾವಿಸಬಹುದಷ್ಟೆ.

೩) ಸಲಹೆ ಸಮಿತಿಯ ಘಟಕಗಳಾವುವು ? ಸವರ್ಣ ಹಿಂದುಗಳೊ ಇಲ್ಲವೆ ಅಸ್ಪೃಶ್ಯರನ್ನೊಳಗೊಂಡ (?) ಅಲ್ಪಸಂಖ್ಯಾಕರೊ ?

೪) ಸಲಹೆ ಸಮಿತಿಯ ಸಲಹೆ ಇಲ್ಲವೆ ಸೂಚನೆಗಳು ಘಟನಾ ಸಮಿತಿಗೆ ಬಂಧನಕಾರಕವೊ ? ಅವು ಬಂಧನಕಾರಕವಲ್ಲೆಂದು ನನಗನಿಸುತ್ತದೆ. ಹಾಗಿದ್ದರೆ ಇಂಥ ಸಲಹೆ ಸಮಿತಿಯನ್ನು ನೇಮಿಸುವುದರಲ್ಲಿ ಅರ್ಥವೇನು ? ಘಟನಾ ಸಮಿತಿಯು ಇದರ ಸಲಹೆ ಕೇಳದಿದ್ದರೆ ಅದು ನಿರರ್ಥಕ ಸಂಸ್ಥೆಯಾಗಿಯೇ ಪರಿಣಮಿಸುವುದು. ಅಶಕ್ತ ಅಲ್ಪಸಂಖ್ಯಾಕರನ್ನು ಸಂತುಷ್ಟಗೊಳಿಸಲಿಕ್ಕೆಂದು ಮಾತ್ರವೆ ಈ ಸಲಹೆಸಮಿತಿಯನ್ನು ನೇಮಿಸಿದ್ದೊ ?

“ ನಿಮ್ಮ ಸಲುವಾಗಿ ಎಲ್ಲವನ್ನು ನಾನು ಮಾಡುವೆನು ಮಾಡುತ್ತ ಬಂದಿರುವೆನೆಂದು ನೀವು ಹೇಳಬಹುದು. “ ನಮ್ಮ ಸಲುವಾಗಿ ಮಾಡಬೇಕಾದಾಗೆಲ್ಲ ನಾವು ನಿಮ್ಮಗೂಡ ಸಹಕರಿಸುವಾ. ಪ್ರಜಾಪ್ರಭುತ್ವದ ತಳಹದಿಯ ಮೇಲೆ ನಮಗೆ ಪ್ರಾತಿನಿಧ್ಯ ಸಿಕ್ಕಲಿ’ ಎಂದು ನಾನು ಹೇಳಬಯಸುತ್ತೇನೆ.

“ ನನ್ನ ಪ್ರಶ್ನೆಗಳಿಗೆ ಪೂರ್ಣ ಮತ್ತು ಸಮಾಧಾನಕಾರಕ ಉತ್ತರ ಬೇಗನೆ ಸಿಕ್ಕಲೆಂದು ನಾನು ತುಂಬ ಆಶಿಸುತ್ತೇನೆ. ನಿಮ್ಮ ‘ಹರಿಜನ’ ವಾರಪತ್ರಿಕೆಯಲ್ಲಿ ನಿಮ್ಮ ಉತ್ತರಗಳನ್ನು ಪ್ರಸಿದ್ಧಿಸಿ ಕೃಪೆ ಮಾಡಬೇಕೆಂದೂ ನಾನು ವಿನಯದಿಂದ ಬಿನ್ನವಿಸಿಕೊಳ್ಳುತ್ತೇನೆ.

“ ತೊಂದರೆ ಕೊಟ್ಟದ್ದಕ್ಕಾಗಿ ಕ್ಷಮಿಸಬೇಕು”

ಇಂಗ್ಲಿಶಿನ ಘಾತಕ ಜ್ಞಾನದಿಂದ ಎಂಥ ಅನರ್ಥ ನಮ್ಮ ಸಮಾಜದಲ್ಲಿ ಸಂಭವಿಸಿದೆಂಬುದನ್ನು ತೋರಿಸಿಕೊಡುವದಕ್ಕಾಗಿ ಮೇಲಿನದನ್ನೆಲ್ಲ ನಾನು ಉದ್ಧರಿಸಿದ್ದೇನೆ. ಇದೇನು ಇಂಗ್ಲಿಶ ಇಂಗ್ಲಿಶ ಅಲ್ಲ. ಇಷ್ಟೇ ಅಲ್ಲ ಇಂಡಿಯನ್ ಇಂಗ್ಲಿಶೂ ಅಲ್ಲ. ಅದು ಪುಸ್ತಕೀ ಇಂಗ್ಲಿಶ್; ಲೇಖಕನು ಕದಾಚಿತ್ ಅದನ್ನು ಅರ್ಧಮರ್ಧ ತಿಳಿಯುತ್ತಾನೆ. ರಾಷ್ಟ್ರೀಯ ಭಾಷೆಯಾದ ಹಿಂದುಸ್ತಾನಿಯಲ್ಲಿ ಇಲ್ಲವೆ ತಮ್ಮ ಪ್ರಾಂತಿಕ ಭಾಷೆಯಲ್ಲಿ ಅವರು ಇದನ್ನೆಲ್ಲ ಬರೆದಿದ್ದರೆ ನಾನು ಈ ಬಗೆಯಾಗಿ ಅನನುಕೂಲ ಉತ್ತರಕೊಡಲು ಪ್ರವೃತ್ತನಾಗುತಿದ್ದಿಲ್ಲೆಂದು ಸೂಚಿಸಬಯಸುತ್ತೇನೆ.

ಲೇಖಕರು ನನ್ನ ವ್ಯಾಜಸ್ತುತಿಯನ್ನು ಮಾಡಿರುವರುವರು. ಮೆಹತರ ಎಂದು ಕರೆಯಲ್ಪಡುತಿರುವ ಭಂಗಿಗಳ ಬಗ್ಗೆ ನಾನು ಯಾವ ಬಗೆಯಾಗಿ ಪ್ರೇಮ ತೋರಿಸಬೇಕೆಂಬದನ್ನು ಕದಾಚಿತ ನನಗೆ ಕಲಿಸಲು ಈ ವ್ಯಾಜಸ್ತುತಿ ಮಾಡಿರಬಹುದು. ಈ ಲೇಖಕರು ಅಸಂತುಷ್ಟ ಪದವೀಧರರು, ಭಂಗಿಗಳಿಗೆ ಯಾವ ಆದರ್ಶವನ್ನೂ ಹಾಕಿಕೊಟ್ಟವರಲ್ಲ. ಕೆಟ್ಟ ಆದರ್ಶವನ್ನು ಹಾಕಿಕೊಟ್ಟವರು. ಅವರ ಪ್ರತಿನಿಧಿಗಳೆಂದು ಹೇಳಿಕೊಳ್ಳುತಿದ್ದರೂ ಅವರಿಂದ ಇವರು ಸಿಡಿದು ಹೋಗಿರುವರು.

ಅವರು ಯೋಗ್ಯ ಭಂಗಿಗಳಾಗುವ ಕಲೆಯಲ್ಲಿ ಪದವೀಧರರಾದರೆ ನಿಜವಾಗಿಯೂ ನನ್ನ ಗುರುಗಳಾಗುವರು. ಅವರು ಸ್ವತಃ ಕಸಗುಡಿಸುವ ಕೆಲಸವನ್ನು ಬಹುಶಃ ಮಾಡುತಿರಲಿಕ್ಕಿಲ್ಲೆಂದು ನನಗೆ ಅನಿಸುತ್ತದೆ. ಶಾಸ್ತ್ರೀಯ ದೃಷ್ಟಿಯಿಂದ ಅದನ್ನು ಮಾಡುವದೆಂತು ಎಂಬುದೂ ಅವರಿಗೆ ಗೊತ್ತಿಲ್ಲ. ಆ ಕಲೆಯಲ್ಲಿ ಅವರು ನಿಷ್ಣಾತರಾದರೆ ಹಿಂದುಸ್ತಾನದ ಎಲ್ಲ ನಗರಗಳಲ್ಲಿ ಅವರ ಸೇವೆ ಅವಶ್ಯವಾಗುತ್ತದೆ. ಭಂಗಿಗಳು ಯುಗಾಂತಗಳಿಂದ ಇದ್ದ ಗಾಢನಿದ್ರೆಯಿಂದ ನಿಜವಾಗಿ ಎಚ್ಚತ್ತರೆ ಅವರು ಎಲ್ಲೆಡೆಯಲ್ಲಿಯ ವೈತರಣಿಯನ್ನು ಯಶಸ್ವಿಯಾಗಿ ಸ್ವಚ್ಛ ಮಾಡುವರು ಮತ್ತು ಹಿಂದುಸ್ತಾನವು ಸ್ವಚ್ಛತೆಯ ಆದರ್ಶ ರಾಷ್ಟ್ರವಾಗಬಲ್ಲದು. ಹೊಲಸು ಇಲ್ಲವೆ ಅಸ್ವಚ್ಛತೆಯಿಂದ ಹುಟ್ಟುತಿರುವ ಪ್ಲೇಗು ಮತ್ತು ಬೇರೆ ಬೇನೆಗಳು ಸುಳುವು ಕೂಡ ಹಿಂದುಸ್ತಾನದಲ್ಲಿ ಉಳಿಯದು.

ಮುಂಬಯಿಯಲ್ಲಿ ನಾನಿರುವ ಸ್ಥಳದಲ್ಲಿ ನನ್ನ ಕೋಣೆ ಮತ್ತು ಸುತ್ತಲಿನ ಶೌಚಕೂಪಗಳು ಸಾಧಾರಣ ಸ್ವಚ್ಛ ಇರುವವು. ಆದರೆ ಉಸುರುಗಟ್ಟುವಂಥ ಹೊಲಸಿನ ಮಧ್ಯದಲ್ಲಿ ನಾನಿರುತಿರುವೆನು. ನನ್ನೆದುರಿಗಿರುತಿರುವ ವಸತಿಗಳನ್ನು ಪರೀಕ್ಷಿಸುವ ಸಮಯ ನನಗಿರಲಿಲ್ಲ. ಅವುಗಳಲ್ಲಿ ಬಹಳ ದಟ್ಟಣೆಯಿದೆ. ಹೊಸದಿಲ್ಲಿಯಲ್ಲಿ ನಾನು ಇರುತಿದ್ದ ವಸತಿಗಳಲ್ಲಿಯಷ್ಟೆ ಹೊಲಸು ಈ ವಸತಿಗಳಲ್ಲಿದೆ. ನನ್ನೀ ಪದವೀಧರ ಭಂಗಿ ಬಾಂಧವನು ಆ ಕಲೆಯಲ್ಲಿ ನಿಷ್ಣಾತನಾಗಿದ್ದರೆ ನನಗೆ ಸಹಾಯಕ ಮತ್ತು ಸಲಹೆಗಾರನೆಂದು ನಾನವನ ಸೇವೆಯನ್ನು ನಿಃಸಂಶಯವಾಗಿ ಕೋರುತಿದ್ದೆ.

ವಸ್ತುಸ್ಥಿತಿಯನ್ನು ಹೇಳುವದಾದರೆ ಅವರಿಗೆ ನಾನು ಯಾವ ರೀತಿಯಿಂದಲೂ ಸಹಾಯಕನಾಗಲಾರೆ, ಘಟನಾ ಸಮಿತಿಯ ಇಲ್ಲವೆ ಉಳಿದ ಸಮಿತಿಗಳ ವಿಚಾರ ಮಾಡಬಾರದೆಂದು ನಾನವರಿಗೆ ಹೇಳಿ ಅವರ ಅವಕೃಪೆಗೆ ಪಾತ್ರನಾಗುವ ಗಂಡಾಂತರ ಮಾತ್ರ ಇದೆ. ಯಾರ ಅವಶ್ಯಕತೆ ಎಲ್ಲಿ ಇದೆಯೊ ಅಲ್ಲಿಗೆ ಅವರು ಹೋಗಲಿ. ತಿರಸ್ಕರಣೀಯವಾದ ಜಾತೀಯ ಮನೋವೃತ್ತಿಯನ್ನು ಬಿಟ್ಟುಗೊಡದೆ ಅವರು ಆ ಉದ್ದೇಶಕ್ಕಾಗಿ ಯಾವದೇ ಹರಿಜನನ ಶಿಫಾರಸು ಮಾಡದೆ ಮಹೆತರ ಜಾತಿಯವರಿಗೆ ಪ್ರಾಶಸ್ತ್ಯ ಕೊಡಬೇಕೆಂದು ಪ್ರತಿಪಾದಿಸುತಿರುವರು. ಇದು ಅಪಾಯಕಾರಕ ಪದ್ಧತಿಯೆಂದೂ ಇದರಿಂದ ಯಾರಿಗೂ ಹಿತವಾಗುವುದಿಲ್ಲೆಂದೂ ನಾನವರಿಗೆ ಸೂಚಿಸುತ್ತೇನೆ.

ಏನೇ ಇದ್ದರೂ ಅಶಕ್ಯವಿದ್ದುದನ್ನು ಅವರು ನನ್ನಿಂದ ಅಪೇಕ್ಷಿಸಿರುವರು. ಇಂಥ ದೊಡ್ಡ ಸಂಸ್ಥೆಗಳಲ್ಲಿ ನನ್ನದೇನೂ ನಡೆಯುವದಿಲ್ಲ. ಕಾಲಕಾಲಕ್ಕೆ ನಡೆಯುತ್ತಿರುವ ಶಾಸನಸಭೆಗಳ ಚುನಾವಣೆಗಳಲ್ಲಿ ನಾನೆಂದೂ ಮನಸು ಹಾಕಿರುವದಿಲ್ಲ. ಈ ಆಯ್ಕೆಯನ್ನು ಮಾಡುತಿರುವಾಗ ಕಾರ್ಯ ಸಮಿತಿಯ ಸಭೆಗಳಲ್ಲಿ ನಾನು ಉಪಸ್ಥಿತನಾಗಿರುವುದಿಲ್ಲ ವೃತ್ತಪತ್ರಿಕೆಗಳಿಂದಲೆ ನಾನು ಸದ್ಯದ ಆಯ್ಕೆಗಳನ್ನು ತಿಳಿದುಕೊಳ್ಳುತ್ತೇನೆ. ಪ್ರತಿಯೊಬ್ಬ ಹಿಂದುವಿನ ವೃತ್ತಿಯು ಭಂಗಿಯದೆಂದು ನನಗನಿಸಿದ್ದರಿಂದ ನಾನು ಭಂಗಿಯಾಗಿರುವೆನು. ಹಿಂದುಗಳು ಮನಃಪೂರ್ವಕವಾಗಿ ಭಂಗಿಗಳಾಗಿ ಅವರ್ಣೀಯರಾದಾಗಲೆ ಸದ್ಯದಲ್ಲಿ ಅಕರಾಳ ಅಕಾರದಲ್ಲಿ ಕಾಣುತಿರುವ ಅಸ್ಪೃಶ್ಯತೆಯ ನರಿತ ಸಂಸ್ಥೆಯು ಯೋಗ್ಯ ಸಮಾಧಿಯನ್ನು ಹೊಂದುವದೆಂದು ನನಗನಿಸಿದ್ದರಿಂದ ನಾನು ಭಂಗಿಯಾಗಿರುವೆ. ನನ್ನ ಪತ್ರಲೇಖಕನು ಬಯಸುವಂತೆ ಸದಸ್ಯತ್ವಕ್ಕೆ ಹಪಾಪಿಸುವುದರಿಂದ ಇದು ಸಾಧ್ಯವಾಗಲಾರದು.

ಮುಂಬಯಿ — ಮೋ. ಕ. ಗಾಂಧಿ

೬-೭-೧೯೪೬

ಹೊಸ ಸಮಿತಿಯ ಯಶಸ್ಸು

ಹೊಸ ಸಮಿತಿಯ ಯಶಸ್ಸು ಹಳೆಯ ಸಮಿತಿಯ ರೀತಿ ನೀತಿಗಳನ್ನವಲಂಬಿಸುವಂತೆ ಅದು ಮಾಡತಕ್ಕ ಕಾರ್ಯದ ಪದ್ಧತಿಯನ್ನೂ ಅವಲಂಬಿಸುತ್ತದೆ. ಹೊಸ ಸಮಿತಿಯು ಹಳೆಯ ಸಮಿತಿಯ ಪದಲು ಹರಕೊಂಡರೆ ಪಿತ್ರಾರ್ಜಿತವನ್ನೆ ಅಲ್ಲಗಳೆಯುವ ಮಗನಂತೆ ಅದು ಅಯಶಸ್ವಿಯಾಗುವದು. ನಿವೃತ್ತರಾದ ಸದಸ್ಯರು ಶಕ್ಯವಿದ್ದ ಪ್ರತಿಯೊಂದು ಬಗೆಯಲ್ಲಿ ಹೊಸ ಸಮಿತಿಗೆ ಸಹಾಯ ಸಲ್ಲಿಸದಿದ್ದರೂ ಅದು ಅಯಶಸ್ವಿಯಾಗುವಲ್ಲಿ ಸಂದೇಹವಿಲ್ಲ; ಹಿಂದಿನ ಸದಸ್ಯರಿಗೆ ಮಹತ್ವ ಕೊಡಬೇಕೆಂದು ಮೌಲಾನಾಸಾಹೇಬರು ಅವರನ್ನು ಆರಿಸಿರಲಿಲ್ಲ ಅವರು ತಮ್ಮ ತಮ್ಮ ಪ್ರಾಂತಗಳಲ್ಲಿ ಮಾಡಿದ ಸೇವೆಗಾಗಿ ಅವರನ್ನಾರಿಸಿಕೊಂಡಿದ್ದರು. ಹೊಸಬರಿಗೆ ಸ್ಥಳಮಾಡಿ ಕೊಡುವದಕ್ಕಾಗಿ ಇಲ್ಲವೆ ಅಂಥ ಬೇರೆ ಸಮಾಧಾನಕರ ಕಾರಣಕ್ಕಾಗಿ ಯಾವನೊಬ್ಬ ಸೇವಕನು ಬೇರೆಯವನಿಗೆ ಸ್ಥಳಬಿಟ್ಟುಗೊಟ್ಟರೆ ಅವನು ಸೇವಾ ಕಾರ್ಯವನ್ನೆ ಬಿಟ್ಟುಗೊಟ್ಟಂತಾಗುವದಿಲ್ಲ. ಆದುದರಿಂದ ಹಳೆಯ ಸದಸ್ಯರು ತಮ್ಮ ಅನುಭವದ ಸಂಪೂರ್ಣ ಲಾಭವನ್ನು ಹೊಸಬರಿಗೆ ಮಾಡಿಕೊಡುವರೆಂದು ಆಶಿಸಲಾಗಿದೆ.

ಜನರಲ್ ಸೆಕ್ರೆಟರಿಗಳು ನಿವೃತ್ತರಾದುದು ಎಲ್ಲಕ್ಕೂ ಮಹತ್ವದ ಬದಲಾವಣೆಯು. ಅವರು ಅವಿಚ್ಛಿನ್ನವಾಗಿ ಹತ್ತು ವರುಷಗಳ ವರೆಗೆ ಜನರಲ್ ಸೆಕ್ರೆಟರಿಗಳಾಗಿದ್ದರು. ಅವರ ಸ್ಥಳಕ್ಕೆ ಬಂದ ಹೊಸ ಕಾರ್ಯದರ್ಶಿಗಳಿಗೆ ಅವರ ಸಹಾಯವು ಪ್ರತಿಕ್ಷಣಕ್ಕೆ ಬೇಕಾಗುತ್ತದೆ. ಕಾರ್ಯಕಾರಿ ಸಮಿತಿಯ ಹೊಸ ಸದಸ್ಯರಿಗೂ ಅವರ ಸಹಾಯ ಯಾವಾಗಲೂ ಬೇಕಾಗುತ್ತದೆ. ಆವಶ್ಯಕ ಎಲ್ಲ ಸಹಾಯವು ಆಚಾರ್ಯ ಕೃಪಲಾಣಿಯವರಿಂದ ಅವರಿಗೆ ದೊರೆಯುವದೆಂಬುದು ನನಗೆ ಗೊತ್ತಿದೆ. ಹೆಣ್ಣುಮಗಳೊಬ್ಬಳು ಜನರಲ್ ಸೆಕ್ರೆಟರಿಯ ಸ್ಥಳಕ್ಕೆ ಆರಿಸಲ್ಪಟ್ಟದ್ದು ಒಳ್ಳೆಯದೆ. ಕಾಂಗ್ರೆಸ್ಸಿನ ಇತಿಹಾಸದಲ್ಲಿಯೆ ಇದು ಅಪೂರ್ವವಾದುದು. ಕುಮಾರಿ ಮೃದುಲಾ ಸಾರಾಭಾಯಿಯವರು ಗುಜರಾಥ ವಿದ್ಯಾಪೀಠದ ಪ್ರಾರಂಭದ ದಿನಗಳಲ್ಲಿ ಆಚಾರ್ಯ ಕೃಪಲಾಣಿಯವರ ಶಿಷ್ಯಳಾಗಿದ್ದವಳು. ಆದುದರಿಂದ ಅವಳು ಕೈಕೊಂಡ ಕಠಿನ ಕೆಲಸದಲ್ಲಿ ಅವಳ ಆಚಾರ್ಯರಿಂದ ಸಂಪೂರ್ಣ ಸಲಹೆ ಸಹಕಾರ ಸಿಕ್ಕುವುದು.

ಹಳೆಯ ಸದಸ್ಯರಲ್ಲಿ ಮತ್ತು ಹೊಸಬರಲ್ಲಿ ಸುಂದರ ಮತ್ತು ಸುಭದ್ರ ಸೇತುವೆಯನ್ನು ಪಂಡಿತ ಜವಾಹರಲಾಲರು ಕಟ್ಟುವರೆಂದು ಈ ಬದಲಾವಣೆಯ ಬಗ್ಗೆ ತಪ್ಪು ತಿಳುವಳಿಕೆ ಮಾಡಿಕೊಂಡವರಿಗೆ ನಾನು ಹೇಳಬಯಸುತ್ತೇನೆ. ಹಳೆಯ ಸಮಿತಿಯಲ್ಲಿಯ ಅತ್ಯಂತ ಸಮರ್ಥ ಹಲವು ಸದಸ್ಯರ ಸಹಾಯದಿಂದ ಅವರು ಇದನ್ನು ಸಾಧಿಸಬಲ್ಲರು. ಆದುದರಿಂದ ಹಳೆಯ ಸಮಿತಿಯವರು ಸಿಡಿದು ಹೋದರೆಂದು ಯಾರೂ ಭಯಭೀತರಾಗಲಾರರು. ವ್ಯಕ್ತಿಯ ಜೀವನದಲ್ಲಿ ಆರೋಗ್ಯಕರ ರಕ್ತಾಭಿಸರಣೆ ಅವಶ್ಯವಿದ್ದಂತೆ ರಾಜಕೀಯದಲ್ಲಿಯೂ ಅಂಥ ಬದಲಾವಣೆ ಅವಶ್ಯವಾಗಿದೆ.

ಪುಣೆ — ಮೋ. ಕ. ಗಾಂಧಿ

೧೦-೭-೪೬

ಗಾಣವು ಯಂತ್ರೋಪಕರಣವೆಂದಾಗುವದು ?

ರೇಲ್ವೆ ಸಾರಿಗೆಯ ತಾರತಮ್ಯ ನಿಯಮಗಳು ಹಳ್ಳಿಯ ಉದ್ಯೋಗಗಳನ್ನು ಕೊಲ್ಲುವುದಕ್ಕಾಗಿ ಉಪಯೋಗಿಸಲಾಗುತ್ತವೆ. ಈ ನಿಯಮಗಳ ಅರ್ಥವಿವರಣೆ ಅತ್ಯಂತ ಮನೋರಂಜಕವಾಗಿದೆ. ತತ್ಪರಿಣಾಮವಾಗಿ ದುರಂತ ಪರಿಣಾಮಗಳಾಗಹತ್ತಿವೆ. ಭತ್ತ ಕುಟ್ಟುವ, ಧಾನ್ಯ ಬೀಸುವ, ಎಣ್ಣೆ ತೆಗೆವ, ಜೇನ್ನೊಣ ಸಾಕುವ, ಕಾಗದಮಾಡುವ ಮೊದಲಾದ ಗ್ರಾಮೋದ್ಯೋಗಗಳ ಉಪಕರಣಗಳನ್ನು ನಾವು ಕಳಿಸಲು ತಿಂಗಳುಗಟ್ಟಲೆ ಸಮರ್ಥರಾಗಿರುವುದಿಲ್ಲ. ರೇಲ್ವೆ ನೌಕರರು ಈ ನಿಯಮಗಳ ಅರ್ಥವನು ನಗೆಗೇಡಾದ ರೀತಿಯಲ್ಲಿ ಮಾಡಿದ್ದುದೆ ಇದಕ್ಕೆ ಕಾರಣ. ನಮ್ಮ ಉಪಕರಣಗಳನ್ನೆಲ್ಲ ಕಟ್ಟಿಗೆಯಿಂದಲೆ ಮಾಡಿದ್ದರಿಂದ ಅವುಗಳನ್ನು “ ಯಂತ್ರ ” ಮತ್ತು ಯಂತ್ರೋಪಕರಣಗಳ ವರ್ಗದಲ್ಲಿ ಸೇರಿಸಲು ರೇಲ್ವೆ ಅಧಿಕಾರಿಗಳು ನಿರಾಕರಿಸುತ್ತಾರೆ. ಅವರರ್ಥದಂತೆ ಯಂತ್ರಗಳು ಯಾವಾಗಲೂ ಕಬ್ಬಿಣದಿಂದ ಇಲ್ಲವೆ ಉಕ್ಕಿನಿಂದ ಮಾಡಿದ್ದಿರುವವು. ಆದುದರಿಂದ ನಮ್ಮ ಸರಕುಗಳನ್ನು “ ಔದ್ಯೋಗಿಕ ಉತ್ಪಾದನೆಯ ರಕ್ಷಣೆ”ಯೆಂಬ ೪ ನೇ ವರ್ಗದಲ್ಲಿ ಸೇರಿಸಲೊಲ್ಲರು. ಅಂತೆಯೆ ಗಾಣವನ್ನು “ ನಾಗರಿಕ ” ಉಪಕರಣವೆಂದು ವರ್ಗೀಕರಿಸುತ್ತಾರೆ. ಇದು ೬ ನೇ ವರ್ಗದಲ್ಲಿ ಬರುತ್ತದೆ. ಸುಮಾರು ಒಂದಡಿ ಎತ್ತರಿರುವ ಗಾಣದ ಪಡಿಯಚ್ಚನ್ನು ಇದೇ ವರ್ಗದಲ್ಲಿ ಸೇರಿಸಲಾಗಿದೆ. ಬೀಸುವ ಕಲ್ಲುಗಳನ್ನು ವೈಕ್ತಿಗತ ಸರಕು ಎಂದು ವರ್ಗೀಕರಿಸಲಾಗುತ್ತದೆ.

ಸಿಗರೇಟು, ಶರೆ, ಖಾಲಿ ಬಾಟಲಿಗಳು ಮುಂತಾದವುಗಳನ್ನು ೫ ನೇ ವರ್ಗದಲ್ಲಿ ಸೇರಿಸಿದ್ದರಿಂದ ನಮ್ಮ ವಸ್ತುಗಳಿಗಿಂತ ಅವುಗಳಿಗೇ ಅಗ್ರಸ್ಥಾನ ಸಿಕ್ಕುತ್ತದೆ. ಸಾರಿಗೆಯ ನಿಯಮಗಳನ್ವಯ, ‘ಗಿರಣಿ’ಗಳಿಂದ ಕಾಗದಗಳನ್ನು ಕಳಿಸುವುದಕ್ಕೆ ಒಂದು ಪರಿಚ್ಛೇದ ಅವಕಾಶ ಕೊಡುತ್ತದೆ. ಆದರೆ ನಾವು “ಗಿರಣಿ”ಗಳಲ್ಲಿ ತಯಾರಾದ ಕಾಗದ ಎಂದು ಕೈಕಾಗದಗಳನ್ನು ಕಳಿಸಲು ಒಪ್ಪುವುದಿಲ್ಲಾದ್ದರಿಂದ ರೇಲ್ವೆಯವರು ಅವುಗಳನ್ನು ಕಳಿಸಲು ನಿರಾಕರಿಸುತಿರುವರು. “ಕಾಗದ ಚೂರುಗಳನ್ನು ಕಾಗದ ಗಿರಣಿಗಳಿಗೆ ಕಳಿಸುವಾಗ ಮಾತ್ರವೆ ಕಚ್ಚಾ ಮಾಲೆಂದು ಪರಿಗಣಿಸಲಾಗುವುದು ಮತ್ತು ನಮ್ಮದು “ಗಿರಣಿ”ಯಲ್ಲೆಂದು ನಮ್ಮ ಕಾಗದ ಚೂರುಗಳನ್ನು “ಕಚ್ಚಾ ಮಾಲು” ಎಂದು ಪರಿಗಣಿಸಲಾಗುವುದಿಲ್ಲ” ಎಂದು ಚೀಫ ಟ್ರಾಫಿಕ್ ಮ್ಯಾನೇಜರರು ಬರೆಯುತ್ತಾರೆ. ಇದಕ್ಕಿಂತ ಮೂರ್ಖತನವಿನ್ನೇನು ಬೇಕು? ಇಲ್ಲವೆ ಕಲಾಕೌಶಲ್ಯಗಳ ನಾಶಕ್ಕೆ ಬೇಕೆಂತಲೆ ಮಾಡುತಿರುವ ಪ್ರಯತ್ನವೆ ಇದು? ಅಜ್ಞಾನಿ “ಗೂಡ್ಸ ಕ್ಲಾರ್ಕ”ನ ಕೈವಾಡತನವಲ್ಲ; ಆದರೆ ಕೇಂದ್ರ ಸ್ಥಳಗಳಲ್ಲಿರುವ ಉಚ್ಚಾಧಿಕಾರಿಗಳ ದುರಾಗ್ರಹವೆ ಇದಕ್ಕೆ ಕಾರಣವೆಂದು ತೋರುತ್ತದೆ.

ಜೆ. ಸಿ. ಕು.

ಅ. ಭಾ. ಕಾಂಗ್ರೆಸ್ಸಿನಲ್ಲಿ ಗಾಂಧೀಜಿಯ ಭಾಷಣ

ತಾ. ೭ ಜುಲೈ ದಿನ ಮುಂಬಯಿಯಲ್ಲಿ ಅ. ಭಾ. ಕಾಂಗ್ರೆಸ್ ಸಮಿತಿ ಸಭೆಯಲ್ಲಿ ಗಾಂಧೀಜಿಯವರು ಮಾಡಿದ ಭಾಷಣದ ಪೂರ್ಣ ಪಾಠ ಇಂತಿದೆ:....

"ಮನುಷ್ಯನು ಹಂಚಿಕೆ ಹಾಕುತ್ತಾನೆ, ಆದರೆ ಅವನ ಹಂಚಿಕೆಗಳ ಯಶಸ್ಸು ಅವನನ್ನು ಅವಲಂಬಿಸಿರದೆ ನಮ್ಮ ಭಾಗ್ಯಗಳ ಪರಮ ನಿಯಾಮಕನಾದ ಆ ಪರಾಶಕ್ತಿಯ ಇಚ್ಛೆಯನ್ನೆ ಅವಲಂಬಿಸಿದೆಯೆಂದು ನಾನು ಎಷ್ಟೋ ಸಲ ಹೇಳಿದ್ದೇನೆ. ನಿಮ್ಮೆಲ್ಲರಂತೆ ನಾನು ನನ್ನ ಸ್ವಂತ ಅಧಿಕಾರದಿಂದ ಇಲ್ಲಿ ನಿಂತಿಲ್ಲ. ನಿಮ್ಮ ಅನುಜ್ಞೆಯಿದ್ದುದರಿಂದಲೆ ಬಂದಿದ್ದೇನೆ. ಈ ಹಿಂದೆ ನಾನು ಬ್ರಿಟಿಶ ಮಂತ್ರಿ ರಾಯಭಾರದ ಯೋಜನೆಯನ್ನು ಕುರಿತು ಆಡಿದ ಮಾತುಗಳು ಜನರ ಮನಸಿನಲ್ಲಿ ತುಂಬ ಗೊಂದಲವನ್ನು ಹುಟ್ಟಿಸಿವೆಯೆಂದು ನನಗೆ ತಿಳಿದು ಬಂದಿದೆ. ನಾನು ಸತ್ಯಾಗ್ರಹಿಯಾಗಿರುವದರಿಂದ ಪೂರ್ಣ ಸತ್ಯವನ್ನು ನುಡಿಯಲು ಮತ್ತು ಸತ್ಯವನ್ನು ಹೊರತು ಬೇರಾವುದನ್ನೂ ಆಡದಿರಲು ಹೆಣಗುವವನಾಗಿದ್ದೇನೆ. ನಿಮ್ಮಿಂದ ಯಾವುದನ್ನೂ ಬಚ್ಚಿಡುವದು ನನ್ನ ಬಯಕೆಯಲ್ಲ. ಮನಸಿನೊಳಗೊಂದು ಬೇರೆಯ ಇಟ್ಟು ಬಾಯಲ್ಲಿ ಬೇರೊಂದು ನುಡಿಯಲು ನಾನು ಹೇಸುತ್ತೇನೆ. ಆದರೆ ಭಾಷೆಯೆಂಬುದು ಎಷ್ಟಾದರೂ ವಿಚಾರಗಳ ಅಭಿವ್ಯಕ್ತಿಯ ಅಪರಿಪೂರ್ಣ ಸಾಧನ. ತನಗೆ ಅನಿಸುವದನ್ನು ಅಥವಾ ತಾನು ಎಣಿಸುವದನ್ನು ಸಂಪೂರ್ಣವಾಗಿ ಶಬ್ದಗಳಲ್ಲಿ ವ್ಯಕ್ತಗೊಳಿಸಬಲ್ಲ ಮನುಷ್ಯನೇ ಇಲ್ಲ. ಪ್ರಾಚೀನ ಕಾಲದ ಋಷಿಗಳು, ದೈವಜ್ಞರು ಕೂಡ ಈ ದೌರ್ಬಲ್ಯದಿಂದ ತೊಂದರೆಪಟ್ಟಿದ್ದಾರೆ.

ಪೂರ್ವಾಪರ ವಿರೋಧವಲ್ಲ

"ಮಂತ್ರಿ ರಾಯಭಾರದ ಸೂಚನೆಗಳನ್ನು ಕುರಿತು ನಾನು ಹೇಳಿದುದೆಂದು ಪತ್ರಿಕೆಗಳಲ್ಲಿ ಏನೇನು ಬಂದಿದೆಯೋ ಅದನ್ನೆಲ್ಲ ನಾನು ನೋಡಿಲ್ಲ. ಎಲ್ಲ ಪತ್ರಿಕೆಗಳನ್ನು ನಾನೇ ಓದಲಾರೆ ಸಹಕಾರ್ಯಕರ್ತರೂ ಸಹಾಯಕರೂ ನನ್ನ ಮುಂದಿರಿಸಬಹುದಾದ್ದನ್ನಷ್ಟೇ ನಾನು ಪರಿಶೀಲಿಸುತ್ತಿರುತ್ತೇನೆ. ಇದರಿಂದ ನನಗೆ ಯಾವ ನಷ್ಟವೂ ಆಗಿಲ್ಲೆಂದು ನನ್ನ ನಂಬಿಕೆ. ಪತ್ರಿಕೆಗಳಲ್ಲಿ ಬಂದುದೆಲ್ಲದರ ಫಲವಾಗಿ, ನಾನು ದಿಲ್ಲಿಯಲ್ಲಿ ಹೇಳಿದ್ದೇ ಬೇರೆ, ಈಗ ಹೇಳುತ್ತಿರುವದೇ ಬೇರೆ ಎಂಬ ಭಾವನೆ ಹುಟ್ಟಿದಂತೆ ಕಾಣುತ್ತದೆ. ಮೊದಲು ಬೆಳಕು ಕಾಣುತ್ತಿದ್ದಲ್ಲಿ ಈಗ ಕತ್ತಲು ನನಗೆ ತೋರುತಿದೆಯೆಂದು ದಿಲ್ಲಿಯಲ್ಲಿ ಒಂದು ಭಾಷಣದಲ್ಲಿ ನಾನು ಹೇಳಿದುದಿದೆ. ಆ ಕತ್ತಲು ಇನ್ನೂ ಹರಿದಿಲ್ಲ. ಅದು ಇನ್ನಷ್ಟು ನಿಬಿಡವಾಗಿದೆಯೆಂದರೂ ನಡೆಯುತ್ತದೆ ನನ್ನ ಮುಂದಿನ ಮಾರ್ಗ ನಿಚ್ಚಳವಾಗಿ ನನಗೆ ತೋರಿದ್ದರೆ ಘಟನಾ ಸಮಿತಿಯ ಸೂಚನೆಗಳನ್ನೂ ತಿರಸ್ಕರಿಸಿಬಿಡಬೇಕೆಂದು ಕಾರ್ಯಸಮಿತಿಗೆ ಹೇಳುತ್ತಿದ್ದೆ. ಕಾರ್ಯಸಮಿತಿಯ ಸದಸ್ಯರೊಡನೆ ನನಗಿರುವ ಸಂಬಂಧ ನಿಮಗೆ ಗೊತ್ತು. ಬಾಬು ರಾಜೇಂದ್ರ ಪ್ರಸಾದರು ಹಾಯಕೋರ್ಟ ನ್ಯಾಯಾಧೀಶರಾಗಬಹುದಾಗಿತ್ತು ಬದಲಿಗೆ ಅವರು ಚಂಪಾರಣ್ಯದಲ್ಲಿ ನನ್ನ ದುಭಾಷಿಯೂ ಕಾರಕೂನನೂ ಆಗುವದರಲ್ಲಿ ಸಂತೋಷ ಕಂಡರು. ಇನ್ನು ಸರದಾರರು. ಅವರು ನನ್ನ ಕೌಲೆತ್ತು ಎಂಬ ಅಡ್ಡ ಹೆಸರು ಸಂಪಾದಿಸಿದ್ದಾರೆ. ಅದಕ್ಕಾಗಿ ಅವರು ನಾಚದೆ ಆ ಅಡ್ಡ ಹೆಸರನ್ನೇ ಬಿರುದೆಂದು ಪ್ರದರ್ಶಿಸುತ್ತಾರೆ. ಅವರೊಬ್ಬ ಬಿರುಗಾಳಿಯಂಥ ಮನುಷ್ಯರು ಒಂದಾನೊಂದು ಕಾಲದಲ್ಲಿ ಅವರು ಪಾಶ್ಚಿಮಾತ್ಯ ರೀತಿಯ ವೇಷ, ಭೂಷೆ, ಆಚಾರಗಳನ್ನು ಅನುಸರಿಸುತ್ತಿದ್ದರು. ಆದರೆ ನನ್ನ ಭಾಗ್ಯದ ಸಂಗಿಗೆ ತಮ್ಮ ಭಾಗ್ಯವನ್ನು ಅವರು ಗಂಟು ಹಾಕಿದಂದಿನಿಂದ ಅವರಿಗೆ ನನ್ನ ಮಾತೇ ವೇದವಾಕ್ಯವಾಗಿದೆ. ಆದರೆ ಈ ವಿಷಯದಲ್ಲಿ ಮಾತ್ರ ಅವರಿಗೆ ನನ್ನ ಅಭಿಪ್ರಾಯ ಸಮಂಜಸವಾಗಿ ಕಾಣುವದಿಲ್ಲ ಈ ಹಿಂದೆ ಎಲ್ಲ ಪ್ರಸಂಗಗಳಲ್ಲಿಯೂ ನನ್ನ ಅಂತಃಪ್ರೇರಣೆಯನ್ನು ತರ್ಕದ ಬಲದಿಂದ ಪ್ರತಿಪಾದಿಸಿ ಅವರ ಬುದ್ಧಿ ಹೃದಯಗಳೆರಡನ್ನೂ ತೃಪ್ತಿಗೊಳಿಸಲು ಸಮರ್ಥನಾಗಿದ್ದ ನಾನು ಈ ಸಲ ಮಾತ್ರ ಹಾಗೆ ಮಾಡಲು ಅಸಮರ್ಥನಾಗಿರುವೆನೆಂದು ಅವರಿಬ್ಬರೂ ಹೇಳುತ್ತಾರೆ ನನ್ನ ಹೃದಯವೇನೋ ಶಂಕೆಗಳಿಂದ ತುಂಬಿದ್ದರೂ ಅದಕ್ಕೆ ಯೋಗ್ಯ ಕಾರಣವನ್ನು ಮಾತ್ರ ನಾನು ಕೊಡಲಾರೆ. ಇಲ್ಲದಿದ್ದರೆ ಯೋಜನೆಯನ್ನು ನೆಟ್ಟಗೆ ತಿರಸ್ಕರಿಸಿಬಿಡಲು ಹೇಳುತ್ತಿದ್ದೆ, ಎಂದು ನಾನು ಅವರಿಗೆ ಉತ್ತರವಿತ್ತೆ. ಅವರು ಎಚ್ಚರಿಕೆಯಿಂದಿರುವಂತೆ ನನ್ನ ಆ ಶಂಕೆಗಳನ್ನು ಅವರ ಮುಂದಿರಿಸುವುದು ನನ್ನ ಕರ್ತವ್ಯವಾಗಿತ್ತು. ಆದರೆ ನನ್ನ ಹೇಳಿಕೆಯನ್ನು ನಿಷ್ಠುರ ತರ್ಕದ ಒರೆಗಲ್ಲಿಗೆ ಹಚ್ಚಿ ನನ್ನ ಅಭಿಪ್ರಾಯದ ಸಾಮಂಜಸ್ಯ ಮನೋನೀತವಾದರೆ ಮಾತ್ರ ಅವರು ಅದನ್ನು ಅಂಗೀಕರಿಸಬೇಕಾಗಿತ್ತು. ಸುದೀರ್ಘ ಚಿಂತನೆ ಚರ್ಚೆಗಳನಂತರ ಅವರು ಹೆಚ್ಚು ಕಡಿಮೆ ಸರ್ವಾನುಮತದಿಂದ ಮಾಡಿದ ನಿರ್ಣಯ ನಿಮ್ಮ ಮುಂದಿದೆ. ಕಾರ್ಯಸಮಿತಿಯ ಸದಸ್ಯರು ನಿಮ್ಮ ವಿಶ್ವಾಸದ, ಹಳೆಯ ಸೇವಕರು. ಅವರ ಗೊತ್ತುವಳಿಯನ್ನು ನೀವು ಹಿಂದು ಮುಂದೆ ನೋಡದೆ ತಿರಸ್ಕರಿಸಬಾರದು.

ಪರಾಜಯವಾದಿ ತರ್ಕ

"ಸಂಕಲ್ಪಿತ ಘಟನಾ ಸಮಿತಿ ಜನತೆಯ ಪಾರ್ಲಮೆಂಟಲ್ಲವೆಂದು ಒಪ್ಪಿಕೊಳ್ಳಲು ನಾನು ಸಿದ್ಧನಾಗಿದ್ದೇನೆ. ಅದರಲ್ಲಿ ಹಲವು ದೋಷಗಳಿವೆ. ಆದರೆ ನೀವೆಲ್ಲ ಅನುಭವಿಗಳಾದ ಹಳೆಯ ಯೋಧರು. ಸೈನಿಕನಾದವನು ಗಂಡಾಂತರಕ್ಕೆ ಎಂದೂ ಹೆದರುವದಿಲ್ಲ. ಗಂಡಾಂತರದಲ್ಲಿಯೇ ಅವನಿಗೆ ಹುರುಪು. ಸಂಕಲ್ಪಿತ ಘಟನಾ ಸಮಿತಿಯಲ್ಲಿ ಲೋಪದೋಷಗಳಿದ್ದರೆ ಅವುಗಳನ್ನು ಹೋಗಲಾಡಿಸುವದು ನಿಮಗೆ ಸೇರಿದ್ದು ಅದು ಹೋರಾಟದ ಆಹ್ವಾನವೆನಿಸಬೇಕಲ್ಲದೆ ನಿರಾಶೆಗೆ ಕಾರಣವಾಗಬಾರದು. ಸಂಕಲ್ಪಿತ ಘಟನಾ ಸಮಿತಿಯಲ್ಲಿ ಭಾಗವಹಿಸುವದು ಗಂಡಾಂತರದ್ದಾಗಿರುವದರಿಂದ ಕಾರ್ಯ ಸಮಿತಿಯ ಗೊತ್ತುವಳಿಯನ್ನು ನಿರಾಕರಿಸಬೇಕೆಂದು ಶ್ರೀ ಜಯಪ್ರಕಾಶ ನಾರಾಯಣರು ನಿನ್ನೆ ಹೇಳಿದ್ದನ್ನು ಕೇಳಿ ನನಗೆ ಆಶ್ಚರ್ಯವಾಗಿದೆ. ಜಯಪ್ರಕಾಶರಂಥ ಪಳಗಿದ ಸೈನಿಕನಿಂದ ಇಂಥ ಪರಾಜಯ ಭಯಗ್ರಸ್ತ ಭಾಷೆಯನ್ನು ಕೇಳಲು ನಾನು ಸಿದ್ಧನಾಗಿರಲಿಲ್ಲ. ಸ್ವರ್ಗೀಯ ಚೌಧುರಿ ರಾಮಬಾಗದತ್ತರ, ರಚಿಸಿದ ಗೀತದ ಒಂದು ಪುಟ್ಟ ಚರಣ ನನ್ನ ಮನಸ್ಸಿನಲ್ಲಿ ಆಳವಾದ ಮುದ್ರೆಯೊತ್ತಿದೆ. ಅದರ ಅರ್ಥ ಹೀಗಿದೆ—

"ನಮಗೆ ಸೋಲೆಂಬುದಿಲ್ಲ-ಸತ್ತರು ಕೂಡ;

"ಈ ಮನೋಭಾವದಿಂದೀಗ ನೀವು ಈ ಗೊತ್ತುವಳಿಯನ್ನು ಅವಲೋಕಿಸಬೇಕು. ಸತ್ಯಾಗ್ರಹಿಗೆ ಸೋಲೆಂಬುದೇ ಅರಿಯದು.

"ಇಂಗ್ಲೀಷರು ಮಾಡಿದ್ದೆಲ್ಲ ಕೆಟ್ಟದ್ದೇ ಇರಬೇಕೆಂಬ ಭಾವನೆಯೂ ಸತ್ಯಾಗ್ರಹಿಯೆನಿಸಿದವನಲ್ಲಿ ಇರತಕ್ಕದ್ದಲ್ಲ. ಇಂಗ್ಲೀಷರು ಕೆಟ್ಟವರೇ ಇರಬೇಕೆಂಬ ನಿಯಮವಿಲ್ಲ. ಬೇರೆ ಯಾವದೇ ಜನರಲ್ಲಿರುವಂತೆ ಇಂಗ್ಲೀಷರಲ್ಲಿಯೂ ಒಳ್ಳೆವರು ಕೆಟ್ಟವರು ಇದ್ದಾರೆ. ನಾವಾದರೂ ದೋಷದೂರರಾಗಿಲ್ಲ ಅವರಲ್ಲಿ ಏನೂ ಗುಣವಿದ್ದಿಲ್ಲವಾದರೆ ಈಗಿನ ಶಕ್ತಿಸಾಮರ್ಥ್ಯಕ್ಕೆ ಅವರು ಏರುತ್ತಲೇ ಇದ್ದಿಲ್ಲ. ನಾವು ನಮ್ಮೊಳಗೆ ಬಡಿದಾಡುತ್ತ ಅವರಿಗೆ ನಮ್ಮನ್ನು ಶೋಷಿಸಲು ಅವಕಾಶ ಕೊಟ್ಟದ್ದರಿಂದಲೇ ಅವರು ಬಂದು ನಮ್ಮನ್ನು ಶೋಷಿಸಿದರು. ಪರಮಾತ್ಮಸೃಷ್ಟಿಯಲ್ಲಿ ನಿರ್ಗುಣವಾದ ದೋಷ ಎಂದಿಗೂ ಬಾಳಲಾರದು. ಸೈತಾನನ ಹಿಡಿತದಲ್ಲಿಯೆ ಇರುವಂತೆ ಕಾಣುವಲ್ಲಿ ಕೂಡ ದೇವರ ಇಚ್ಛೆ ಇದ್ದುದರಿಂದಲೆ ಸೈತಾನನ ಕಾರುಬಾರು ನಡೆಯುತ್ತದೆ. ನೈತಿಕ ಪ್ರವೃತ್ತಿಯೇ ಇಲ್ಲದವನಮುಂದೆ ಸತ್ಯಾಗ್ರಹದಿಂದ ಫಲವಿಲ್ಲೆಂದು ಕೆಲವರು ಹೇಳುವರು. ಆದರೆ ನಾವು ಸತ್ಯಸಂಧರಾಗಿದ್ದರೆ ನಮ್ಮಲ್ಲಿ ಸಾಕಷ್ಟು ಸಹನೆಯಿದ್ದರೆ ಎಂಥ ಕಲ್ಲೆದೆಯೂ ಕರಗಿತೀರಬೇಕೆಂದು ನಾನು ಎದೆತಟ್ಟಿ ಹೇಳಬಲ್ಲೆ. ಸತ್ಯಾಗ್ರಹಿ ಜೀವ ಹೋದರೂ ತನ್ನ ಹೋರಾಟ ನಿಲ್ಲಿಸುವದಿಲ್ಲ. "ಮಾಡು ಇಲ್ಲವೆ ಮಡಿ" ಘೋಷದ ಅರ್ಥ ಇದೇ "ಕೊಲ್ಲು ಇಲ್ಲವೆ ಸಾಯಿ" ಎಂದು ಅದರ ಅರ್ಥವಲ್ಲ ಹಾಗೆ ಅರ್ಥ ಮಾಡಿದರೆ ಬೇಕೆಂದೇ ಅದರ ನಿಜಾರ್ಥವನ್ನು ಬಿಟ್ಟು ಅಪಾರ್ಥವನ್ನು ಕಲ್ಪಿಸಿದಂತಾದೀತು. ನಮ್ಮ ಕರ್ತವ್ಯವನ್ನು ನಾವು ಮಾಡಬೇಕು. ಅವಶ್ಯವಿದ್ದರೆ ಅದರ ಅನುಷ್ಠಾನದಲ್ಲಿಯೆ ಮಡಿಯಬೇಕು. ಇದೀಗ ಅದರ ನಿಜವಾದ ಅರ್ಥ ಕೊಲ್ಲದೇ ಸಾಯುವದು ಸತ್ಯಾಗ್ರಹಿಯ ಬಿರುದು. ಅಥ್ಯೇಯಕ್ಕೆ ಅಂಟಿಕೊಂಡಿದ್ದರೆ ನಾವು ಇಷ್ಟರಲ್ಲೇ ಸ್ವರಾಜ್ಯ ಗಳಿಸಬಹುದಾಗಿತ್ತು. ಆದರೆ ನಮ್ಮ ಅಹಿಂಸೆ ಕಾಲು ಕುಂಟಾಗಿತ್ತು. ಅದು ಕಾಲುಕುದುರೆಯ ಬಲದಿಂದ ನಡೆಯುತ್ತ ಇತ್ತು- ಹೀಗಿದ್ದರೂ ಅದು ನಮ್ಮನ್ನು ಸದ್ಯದ ಸಾಮರ್ಥ್ಯಕ್ಕೆ ಏರಿಸಿದೆ. ೧೯೪೨ ರಲ್ಲಿ ಅದುದು ನನಗೆ ಗೊತ್ತಿದೆ. ವಿನಾಶಕ ಮತ್ತು ಗುಪ್ತ ಚಟುವಟಿಕೆಗಳೇ ದೇಶಕ್ಕೆ ಸದ್ಯದ ಶಕ್ತಿಯನ್ನು ಕೊಟ್ಟಿದೆಯೆಂದು ನೀವು ಹೇಳಬಹುದು. ೧೯೪೨ರ ಹೋರಾಟದಲ್ಲಿ ವಿನಾಶಕ ಚಟುವಟಿಕೆಯನ್ನು ಕಾಂಗ್ರೆಸ್ಸಿನ ಹೆಸರಲ್ಲಿ ನಡೆಸಲಾಯಿತೆಂಬುದನ್ನು ಅಲ್ಲಗಳೆಯುವಂತಿಲ್ಲ. ಆದರೆ ಜನತೆಯ ಶಕ್ತಿ ಅದರಿಂದ ಉಂಟಾಯಿತೆಂಬದನ್ನು ಮಾತ್ರ ನಾನು ಸರ್ವಾತ್ಮನಾ ನಿರಾಕರಿಸುತ್ತೇನೆ. ಜನತೆಯ ಶಕ್ತಿಯೇನಾದರೂ ಇದ್ದರೆ ಅದು ಪೂರ್ಣವಾಗಿ ಅಹಿಂಸೆಯಿಂದಲೇ ಹುಟ್ಟಿದೆ. ಆದರ ಅನುಷ್ಠಾನ ಎಷ್ಟೆ ಅಪರಿಪೂರ್ಣವಾಗಿರುವದೊಲ್ಲದೇಕೆ? ನಮ್ಮ ಅಹಿಂಸೆ ಅಪರಿಪೂರ್ಣವಾಗಿದ್ದುದೇಕೆಂದರೆ, ನಾನೆಲ್ಲ ಅಪರಿಪೂರ್ಣರು, ಅದನ್ನು ನಿಮಗೆ ತೋರಿಸಿ ಕೊಟ್ಟವನು ನನ್ನಂಥ ಅಪರಿಪೂರ್ಣ ಜೀವಿ. ಅಪರಿಪೂರ್ಣ ಸಾಧಕನ ಕೈಯಲ್ಲಿಯೇ ಅದು ಇಂಥ ಉಜ್ವಲ ಫಲಗಳನ್ನು ಬಿಚ್ಚಿತೆಂದಮೇಲೆ ಪರಿಪೂರ್ಣ ಸತ್ಯಾಗ್ರಹಿಯ ಕೈಯಲ್ಲಿ ಏನೇನು ಮಾಡಲು ಸಮರ್ಥವಾಗುತ್ತಿದ್ದಿಲ್ಲ?

"೧೯೪೨ರಲ್ಲಿ ನಮ್ಮ ಜನರು ಮಹತ್ತರವಾದ ಧೈರ್ಯ ಶೌರ್ಯಗಳನ್ನು ತೋರಿಸಿದರು. ಆದರೆ ನಾವು ಗುರಿ ಮುಟ್ಟಬೇಕಾದರೆ ಅದಕ್ಕಿಂತಲೂ ಹೆಚ್ಚು ಧೈರ್ಯ ಶೌರ್ಯಗಳು ಬೇಕು. ನಾವು ಬಹಳಷ್ಟು ಮಾಡಿದ್ದೇವೆ. ಆದರೂ ಮಾಡಬೇಕಾದುದು ಇನ್ನೂ ಉಳಿದಿದೆ. ಅದಕ್ಕೆ ನಿಮ್ಮಲ್ಲಿ ಸ್ಥೈರ್ಯ, ವಿನಯ, ಅನಾಸಕ್ತಿಗಳು ಅವಶ್ಯವಾಗಿವೆ. ೧೯೪೨ರಲ್ಲಿ ಅದುದೇನು, ಆ ಹೋರಾಟದ ಒಳಗುಟ್ಟೇನು, ಅದು ಎಲ್ಲಿ ನಿಂತಿತೊ ಅಲ್ಲಿ ಏಕೆ ನಿಂತುಹೋಯಿತು. ಅದನ್ನೆಲ್ಲ ಅರಿತು ಕೊಳ್ಳಲು ನೀವು ಯತ್ನಿಸಬೇಕು.

ಹೂವಿನ ಹಾಸಿಗೆಯಲ್ಲ

"ಇದು ಸಡಿಲು ಬಿಟ್ಟು ಆರಾಮು ಕೊಡುವ ಕಾಲವಲ್ಲ. ರಾಷ್ಟ್ರದ ಹಿತದಗೋಸುಗ ಮುಳ್ಳಿನ ಗಾದಿಯನ್ನೇರಬೇಕೆಂದು ನಾನು ಜವಾಹರರಿಗೆ ಕೇಳಿಕೊಂಡೆ ಅವರು ಒಪ್ಪಿದರು. ಘಟನಾ ಸಮಿತಿ ನಮಗೊಂದು ಹೂವಿನಹಾಸಿಗೆಯಾಗದು ಅದು ಮುಳ್ಳಿನ ಹಾಸಿಗೆಯಾಗುವದು ನಿಶ್ಚಯ. ನೀವು ಅದರಲ್ಲಿ ಪಾಲುಗಾರರಾಗಲು ಒಪ್ಪದಿರಬಹುದು.

"ಅಂದ ಮಾತ್ರಕ್ಕೆ ಎಲ್ಲರೂ ಅದರಲ್ಲಿ ಪ್ರವೇಶಿಸಬಯಸಬೇಕೆಂದಲ್ಲ ಶ್ರಾಯಿದೆಯ ತರಬೇತಿಯಿಂದಲೋ ವಿಶಿಷ್ಟ ಯೋಗ್ಯತೆಯಿಂದಲೋ ಆ ಕಾರ್ಯಕ್ಕೆ ವಿಶೇಷವಾಗಿ ಸಮರ್ಥರೆನಿಸುವವರು ಮಾತ್ರ ಅಲ್ಲಿ ಹೋಗಬೇಕು. ಹಿಂದಿನ ಬಲಿದಾನಕ್ಕೆ ಕ್ರಯರೂಪವಾಗಿ ಪಡೆಯತಕ್ಕ ಬಹುಮಾನವಲ್ಲ ಅದು. ಸಿಲುಬೆಯನ್ನೇರುವಂತೆ ಅಥವಾ ಸೇವೆಯ ಬಲಿಶಿಲೆಯ ಮೇಲೆ ತನ್ನ ಸರ್ವಸ್ವವನ್ನು ಬಲಿಗೊಡುವಂತೆ ಅದೂ ನಾವು ಎದುರಿಸಬೇಕಾದ ಕರ್ತವ್ಯಗಳಲ್ಲೊಂದು.

"ನೀವು ಘಟನಾ ಸಮಿತಿಯಲ್ಲಿ ಪ್ರವೇಶಿಸಬೇಕಾದ ಇನ್ನೊಂದು ಕಾರಣವೂ ಇದೆ. ಸಂಕಲ್ಪಿತ ಘಟನಾ ಸಮಿತಿಯನ್ನು ನೀವು ತಿರಸ್ಕಾರ ಮಾಡಿದ್ದರೆ ಅಥವಾ ಘಟನಾ ಸಮಿತಿಯ ಅಸ್ತಿತ್ವಕ್ಕೆ ಬರಲಾರದೆ ಹೋದರೆ ನಾನು ಜನರಿಗೆ ವೈಯಕ್ತಿಕ ಅಥವಾ ಸಾಮೂಹಿಕ ಶಾಸನ ಭಂಗ ಮಾಡಲು ಸಲಹೆ ಕೊಡುವೆನೆ? ಅಥವಾ ಸ್ವಂತ ನಾನು ಉಪವಾಸವನ್ನು ಕೈಕೊಳ್ಳುವೆನೆ? ಎಂದು ನೀವು ಕೇಳಿದರೆ ಇಲ್ಲವೆಂದೇ ನನ್ನ ಉತ್ತರ. ಏಕಾಕಿಯಾಗಿ ದಾರಿ ನಡೆಯುವದೇ ಒಳಿತೆಂದು ನನ್ನ ನಂಬಿಕೆ. ನಾನು ಏಕಾಕಿಯಾಗಿ ಈ ಜಗತ್ತಿಗೆ ಬಂದಿದ್ದೇನೆ. ಏಕಾಕಿಯಾಗಿ ಮೃತ್ಯುಚ್ಛಾಯೆಯ ಕಂದರದಲ್ಲಿ ನಡೆದಿದ್ದೇನೆ- ಕಾಲಬಂದಾಗ ಏಕಾಕಿಯಾಗಿಯೇ ಹೊಟು ಹೋಗುವವನಿದ್ದೇನೆ ನಾನು ಒಬ್ಬಂಟಿಗನಾಗಿಯೇ ಇದ್ದರೆ ಸತ್ಯಾಗ್ರಹವನ್ನು ಪ್ರಾರಂಭಿಸಲು ಸಮರ್ಥನೆಂದು ನನಗೆ ಗೊತ್ತು. ಹಿಂದೆ ನಾನು ಹಾಗೆ ಮಾಡಿದ್ದುಂಟು, ಆದರೆ ಇದು ಉಪವಾಸ ಅಥವಾ ಶಾಸನಭಂಗಕ್ಕೆ ಸಮಯವಲ್ಲ. ಘಟನಾ ಸಮಿತಿಯೇ ಸತ್ಯಾಗ್ರಹಕ್ಕೊಂದು ಬದಲೆಂದು ನಾನು ತಿಳಿದಿದ್ದೇನೆ-

ಸತ್ಯಾಗ್ರಹಿಗೆ ಭೂಷಣವಲ್ಲ

"ಘಟನಾ ಸಮಿತಿಗೆ ಬದಲೆಂದರೆ ವಿಧಾಯಕ ಕಾರ್ಯಕ್ರಮ. ಅದನ್ನು ನೀವು ಎಂದೂ ಸರಿಯಾಗಿ ಪಾಲಿಸಿದ್ದಿಲ್ಲ. ಹಾಗೆ ಪಾಲಿಸಿದ್ದರೆ ಇಂದು ನಿಮಗೆ ಜಯಪ್ರಕಾಶರ ಕನಸಿನ ಘಟನಾ ಸಮಿತಿ ಸಿಗುತಿತ್ತು. ಹೊರತು ಇಂದಿನ ಘಟನಾ ಸಮಿತಿಯಲ್ಲ. ಆದರೆ ಸತ್ಯಾಗ್ರಹಿಯಾದವನು ಪರಿಪೂರ್ಣ ಪರಿಸ್ಥಿತಿ ಉಂಟಾಗುವತನಕ ಕಾಯಲಾರನು. ತನ್ನ ಕೆಲಸವನ್ನು ಮುಂದೆ ಹಾಕಲಾರನು ಅವನು ಕೈಗೆ ಸಿಕ್ಕ ಪದಾರ್ಥವನ್ನೆ ಉಪಯೋಗಿಸಿ ಕೆಲಸ ಸಾಗಿಸುತ್ತಾನೆ ಅದರಲ್ಲಿರುವ ಕಶ್ಮಲವನ್ನು ಸುಟ್ಟು ತೆಗೆದು ಶುದ್ಧ ಚಿನ್ನವಾಗಿ ಮಾರ್ಪಡಿಸುತ್ತಾನೆ. ಮೇ ೧೬ ರ ಸರಕಾರಿ ಪತ್ರಕದ ದೋಷಗಳೇನೇ ಇರಲಿ, ಅದನ್ನು ಸಿದ್ಧಗೊಳಿಸಿದವರ ಪ್ರಾಮಾಣಿಕತೆಯ ಮೇಲೆ ನನ್ನ ಶಂಕೆ ಲೇಶವೂ ಇಲ್ಲ. ತಾವು ಹೊರಟು ಹೋಗಲೇ ಬೇಕಾಗುವದೆಂದು ಅವರಿಗೆ ಗೊತ್ತಾಗಿಬಿಟ್ಟಿದೆ. ಹೋಗುವಾಗ ವ್ಯವಸ್ಥಿತ ರೀತಿಯಿಂದ ಹೊರಟು ಹೋಗಬೇಕೆಂದು ಅವರು ಅಪೇಕ್ಷಿಸುತ್ತಾರೆ. ಅದಕ್ಕೋಸ್ಕರ ಸದ್ಯದ ಪರಿಸ್ಥಿತಿಯಲ್ಲಿ ತಮಗೆ ಸಾಧ್ಯವಾದಷ್ಟು ಉತ್ತಮವಾದ ಪತ್ರಕವನ್ನು ಅವರು ಸಿದ್ಧಗೊಳಿಸಿದ್ದಾರೆ. ಅಷ್ಟು ದೂರ ಇಂಗ್ಲಂಡಿನಿಂದ ನಮ್ಮನ್ನು ಮೋಸಗೊಳಿಸುವ ಸಲುವಾಗಿಯೆ ಅವರು ಬಂದಿರುವರೆಂದು ನಾನು ನಂಬಲಾರೆ.

"ಒಬ್ಬಾಕೆ ಪೋಲೀಶ ಮಹಿಳೆ ಒಂದು ಕಾಗದ ಬರೆದಿದ್ದಾಳೆ. ಅವರು, 'ಎಲ್ಲ ಯುರೋಪಿಯನರಿಗೂ ಗೋಪ್ಯ ಪರಿಪತ್ರವೊಂದು ಬಂದಿದು- ಇನ್ನು ಮುಂದೆ ಅವರಿಗೆ ಬ್ರಿಟಿಶ ಸೈನ್ಯ ಯೋಗ್ಯರಕ್ಷಣೆ ಕೊಡಲಾರದೆಂದು ಮತ್ತು ಅದರಿಂದ ಅವರೆಲ್ಲರು ಹಿಂದುಸ್ಥಾನ ಬಿಟ್ಟು ಹೊರಟ್ಟು ಹೋಗಬೇಕೆಂದು ಅದರಲ್ಲಿ ತಿಳಿಸಲಾಗಿದೆ' ಎಂಬುದಾಗಿ ಬರೆದಿದ್ದಾಳೆ. ಇದು ಸತ್ಯವಿದ್ದರೆ, ಅದು ನಮ್ಮ ಮೇಲೆ ಬಹಳ ವಿಷಾದಕರವಾದ ಆಪಾದನೆಯೇ ಸರಿ. ನಮ್ಮಗಳ ಮಧ್ಯದಲ್ಲಿ ಸಾಕಷ್ಟು ಸುರಕ್ಷಿತತೆಯಿಲ್ಲೆಂದು ಒಂದು ಇಂಗ್ಲೀಷ ಮಗುವಿಗೆ ಕೂಡ ಎನಿಸಿದರೆ ಅದು ನಮ್ಮ ಸತ್ಯಾಗ್ರಹಿ ಹೆಸರಿಗೆ ಕಲಂಕವೆಂದೆನ್ನಬೇಕು. ಈ ತಂತ್ರಗಳಿಂದ ನಾವು ಯುರೋಪಿಯನ್ನರನ್ನು ಹೊರಗಟ್ಟಲು ಸಮರ್ಥರಾದರು ಕೂಡ ಅವರ ಸ್ಥಾನದಲ್ಲಿ ಅವರಿಗಿಂತಲೂ ದುಷ್ಟವಾದುದೇನಾದರೂ ಬಂದು ಕೂಡುವದು ಖಂಡಿತ. ನಮ್ಮ "ಚಲೇಜಾವ" ಗೊತ್ತುವಳಿಯಲ್ಲಿ ದ್ವೇಷದ ಲೇಶವೂ ಇಲ್ಲ. ಇನ್ನು ಮುಂದೆ ಶೋಷಣೆಗೆ ನಾವು ಎಡೆಗೊಡುವದಿಲ್ಲೆಂದಿಷ್ಟೆ ಅದರ ಅರ್ಥ.

"ನಾವು ಹೇಡಿಗಳಾಗೋಣ ಬೇಡ. ನಮ್ಮ ಮುಂದಿರುವ ಕಾರ್ಯದಲ್ಲಿ ಅಕ್ಷ ವಿಶ್ವಾಸ ಧೈರ್ಯಗಳಿಂದ ಪ್ರವೃತ್ತರಾಗೋಣ. ವಂಚನೆಯ ಭೀತಿ ನಮ್ಮನ್ನು ಗಾಬರಿಗೊಳಿಸದಿರಲಿ. ಸತ್ಯಾಗ್ರಹಿಯನ್ನು ಯಾರೂ ವಂಚಿಸಲಾರರು. ನನ್ನ ಮನವನ್ನು ಮುತ್ತಿರುವ ಕತ್ತಲೆಯನ್ನು ಕುರಿತು ಚಿಂತಿಸಬೇಡಿರಿ. ಅದನ್ನು ಬೆಳಕಾಗಿ ಮಾರ್ಪಡಿಸೋಣ."

ನಿಯಂತ್ರಣಗಳ ಹಾವಳಿ

ಸರಕಾರದ ನಿಯಂತ್ರಣ ಇಂದಿನ ಆಡಳಿತದ ಕ್ರಮವೇ ಆಗಿಬಿಟ್ಟಿದೆ. ಆದರೇ ನಿಯಂತ್ರಣಾಧಿಕಾರಿಗಳಲ್ಲಿ ಎಷ್ಟು ಜನರಿಗೆ ಅವುಗಳಲ್ಲಡಕವಾದ ತತ್ವಗಳು ಗೊತ್ತಿವೆ? ಸಾರಾಸಾರ ವಿಚಾರವಿಲ್ಲದೆ ನಿಯಂತ್ರಣಗಳ ಉಪಯೋಗ ಮಾಡಲಾಗುತ್ತದೆ. ಮತ್ತು ಅದರಿಂದ ಅವುಗಳ ಉದ್ದೇಶವೆ ಹಾಳಾಗಿ ಹೋಗುತ್ತದೆ.

ಕೇಂದ್ರೀಕೃತ ಉದ್ಯೋಗಗಳಲ್ಲಿಯಂತೆ ಯಾವ ಉದ್ಯೋಗಗಳಲ್ಲಿ ಬಂಡವಲಿನ ಮೇಲೆ ಲಾಭ ಬರಬೇಕೆಂಬ ಉದ್ದೇಶವಿದೆಯೊ ಅಂಥ ಉದ್ಯೋಗಗಳಲ್ಲಿ ಧಾರಣೆ ನಿಯಂತ್ರಿಸುವುದರಿಂದ ಸಂಪತ್ತಿಯ ಸಂಗ್ರಹ ಮತ್ತು ಲಾಭಬಡಕತನಕ್ಕೆ ನಿಯಂತ್ರಣ ಹಾಕಿದಂತಾಗುತ್ತದೆ. ತದ್ವಿರುದ್ಧವಾಗಿ ವಿಕೇಂದ್ರೀಕೃತ ಉದ್ಯೋಗ ಧಂದೆಗಳಲ್ಲಿ ಕಲಾಕುಶಲನಿಗೆ ಮರಳಿ ಕೂಲಿಯೇ ದೊರೆಯುತ್ತದೆಯಾದ್ದರಿಂದ ಧಾರಣೆ ನಿಯಂತ್ರಣವು ಸಂಪತ್ತಿಯ ವಿನಿಯೋಗಕ್ಕೆ ಅಡಚಣೆಯನ್ನೆ ಉಂಟುಮಾಡುತ್ತದೆ. ನಮ್ಮಂಥ ಬಡದೇಶದಲ್ಲಿ ಎರಡನೆಯದು ಅಪಾಯಕಾರಕವಾದುದು ಕೇಂದ್ರೀಕೃತ ಪದ್ಧತಿ ಮತ್ತು ವಿಕೇಂದ್ರೀಕೃತ ವಿಧಾನ ಎರಡೂ ಪದ್ಧತಿಗಳಿಂದ ಉತ್ಪಾದಿತವಾಗುತಿರುವ ಬಟ್ಟೆಇಲ್ಲವೆ ಎಣ್ಣೆಯಂಥ ವಸ್ತುಗಳ ಸಂದರ್ಭಗಳಲ್ಲಿ, ಗಿರಣಿಗಳಲ್ಲಿ ಉತ್ಪಾದಿತವಾದವುಗಳ ಧಾರಣೆಗಳನ್ನು ನಿಯಂತ್ರಿಸ

—ಪುಟ ೧೦ಕ್ಕೆ

ರಿಕ್ಷಾ ಎಳೆಯುವವರು

ಗುಡ್ಡಗಳಲ್ಲಿವಾಸಿಸಿ ಅನುಭವವುಳ್ಳವರಿಗೆ ರಿಕ್ಷಾ ಎಳೆಯುವವರ ಭಾರವನ್ನು ಹಗುರು ಮಾಡುವ ಈ ಬಗೆಯ ಮಾನವಶ್ರಮ ಪದ್ಧತಿಯನ್ನೇ ಕಿತ್ತು ಹಾಕುವದಲ್ಲದಿದ್ದರೂ-ಸಮಾನ ಧ್ಯೇಯವಾಗಿರಬೇಕು.

ಹಿಂದುಸ್ಥಾನ ಸರಕಾರದ ಕೂಲಿಕಾರ ಪರಿಶೀಲನ ಸಮಿತಿಯವರು ಈಚೆಗೆ ಹೊರಡಿಸಿರುವ ವರದಿಯೊಂದುಅನೇಕವಿಷಯಗಳನ್ನು ಬಯಲಿಗೆತಂದಿದೆ ಉತ್ತರ ಹಿಂದುಸ್ಥಾನ ದಕ್ಷಿಣ ಹಿಂದುಸ್ಥಾನಗಳ ಗುಡ್ಡ ಮತ್ತು ಸಮಭೂಮಿಗಳಪ್ರಾತಿನಿಧಿಕಕೇಂದ್ರಗಳೆಂದು ಸಿಮಲಾ, ಮದ್ರಾಸ ಮತ್ತು ಕಲಕತ್ತೆಗಳನ್ನು ಸಮಿತಿಯವರು ಈ ಬಡ ಶ್ರಮಜೀವಿಗಳ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗಳ ವಿಶೇಷ ಪರಿಶೀಲನೆಗಾಗಿ ಆರಿಸಿಕೊಂಡಿದ್ದರು.

ಸಿಮಲೆಗೆ ಜನರು ಹೋಗುವ ಋತುವಿಶೇಷದಲ್ಲಿ ಅಲ್ಲಿ ೩೦೦೦ಕ್ಕೆ ಹತ್ತಿರಹತ್ತಿರವಾಗುವಷ್ಟು ರಿಕ್ಷಾವಾಲರು ಇರುತ್ತಾರೆ. ಅವರಲ್ಲಿ ಬಹಳ ಮಂದಿ ಸುತ್ತಣ ಗುಡ್ಡಗಾಡಿನ ಸಂಸ್ಥಾನಗಳಿಂದಲೂ ಕಾಂಗರಾದಿಂದಲೂ ಬಂದವರು. ಕೆಲವರು ಸುತ್ತಲ ಪಂಜಾಬಭಾಗಗಳಿಂದಲೂ ಬರುವದುಂಟು ಹತ್ತುಗಳಿಂದ, ತಿರುಗಲು ಸುತ್ತುಗಳಿಂದ ಕೂಡಿದ ಗುಡ್ಡದ ಮಾರ್ಗಗಳಲ್ಲಿ ರಿಕ್ಷಾ ಎಳೆಯುವವರ ಕೆಲಸ, ಅತಿಸೌಮ್ಯ ಶಬ್ದಗಳಲ್ಲಿ ಹೇಳುವದಿದ್ದರೂ ಬಹಳ ಪ್ರಯಾಸದ್ದೇ ಸರಿ. ಅವರಲ್ಲಿ ನೂರಕ್ಕೆ ೮೬ ಜನರು ೧೮ರಿಂದ ೩೦ರ ವರೆಗಿನ ವಯಸ್ಸಿನವರು. ವಿಚಾರಣೆ ಮಾಡಿದಾಗ ಅವರಲ್ಲಿ ನೂರಕ್ಕೆ ೬೦ ಜನರು ೫ ವರ್ಷಕ್ಕಿಂತ ಹೆಚ್ಚಿಗೆ ಕೆಲಸ ಮಾಡಿದವರಲ್ಲವೆಂದು ತಿಳಿದುಬಂತು ೧೫ ವರ್ಷ ಅದೇ ಕೆಲಸ ಮಾಡಿದವರ ಪ್ರಮಾಣ ನೂರಕ್ಕೆ ಬರಿ ೯.೭೧ ರಷ್ಟಿತ್ತು. ಖಾಸಗಿ ಮನೆಗಳಲ್ಲಿ ಕೆಲಸಕ್ಕೆ ನಿಂತು ಒಳ್ಳೆ ಆರೈಕೆ ಪಡೆದ ರಿಕ್ಷಾವಾಲರು ೧೦—೧೨ ವರ್ಷಗಳ ವರೆಗೂ ರಿಕ್ಷಾ ಎಳೆಯಲು ಸಮರ್ಥರಾಗುತ್ತಾರೆಂದು ನನ್ನ ಅನುಭವ. ಆದರೆ ಬಾಡಿಗೆಗೆ ರಿಕ್ಷಾ ಎಳೆಯುವವರು ಬರಿ ಎರಡು ಮೂರು ವರ್ಷಗಳಲ್ಲೇ ಆಯಾಸಗೊಂಡು ಬಿಡುವುದುಂಟು. ಇಷ್ಟು ಅದೀರ್ಘ ಪರಿಶ್ರಮವಾದರೂ ಅವರ ಕೆಲಸ ಕೆಲ ಋತುಗಳಿಗೆ ಮಾತ್ರ ಸೀಮಿತವಾಗಿರುವದರಿಂದ ಸಾಧ್ಯವಾಗುತ್ತದೆ. ಈ ಜನರು ಬೇಸಾಯಗಾರರು. ಆದರೆ ಭೂಮಿಗಿರುವ ಅಸಾಧ್ಯ ಮೇಲಾಟದ ಕಾರಣದಿಂದ ಅವರು ತಮ್ಮ ಅತ್ಯಲ್ಪ ಗಳಿಕೆಯನ್ನು ತುಸು ಹೆಚ್ಚಿಸಿಕೊಳ್ಳಲೆಂದು ನಗರಕ್ಕೆ ವಲಸೆ ಹೋಗುತ್ತಾರೆ ಕೆಲ ವರ್ಷ ಹಿಂದೆ, ವಿದ್ಯುತ್ ಶಕಟ, ಚಿಕ್ಕ ಟ್ರಾಮವೇ ಅಥವಾ ಇನ್ನಾವದೊಂದು ಬಗೆಯ ಯಾಂತ್ರಿಕ ಸಾಧನದ ಸಹಾಯದಿಂದ ರಿಕ್ಷಾ ಪದ್ಧತಿಯನ್ನು ಕೊನೆಗೊಳಿಸುವುದು ಸಾಧ್ಯವೇನೆಂದು ನಾವು ಕೆಲವರು ಚಿಂತಿಸುತಿದ್ದಾಗ, ನನ್ನ ಬಳಿ ಒಂದು ಶಿಷ್ಟಮಂಡಲವೇ ಬಂದು ತಮ್ಮ ಅಮೂಲ್ಯವಾದ ಗಳಿಕೆಗೆ ಹಾನಿಯನ್ನೊದಗಿಸುವ ಇಂಥ ಯೋಜನೆಯಲ್ಲಿ ನಾನು ಪಾಲುಗಾರನಾಗಬಾರದೆಂದು ಪ್ರಾರ್ಥಿಸಿಕೊಂಡಿತು. ಒಳ್ಳೆಯ ಋತುವಿನಲ್ಲಿ ಅವರಿಗೆ ತಲಾ ೧೦೦ ರೂಪಾಯಿಯಷ್ಟು ಮಾತ್ರ ಉಳಿತಾಯವಾಗುತ್ತದೆ.

ನೂರಕ್ಕೆ ೭೯ ಜನ ರಿಕ್ಷಾವಾಲರು ಸಾಲಗಾರರಾಗಿರುವರು. ನೂರಕ್ಕೆ ೫೦ ಕ್ಕಿಂತಲೂ ಹೆಚ್ಚಿಗೆ ಜನರ ಸಾಲ ಮದುವೆಯ ಕಾರಣದಿಂದಲೋ ಪಿತ್ರಾರ್ಜಿತವೋ ಆಗಿರುತ್ತದೆ.ಅವರ ತಲಾ ಸರಾಸರಿ ಸಾಲ ರೂ. ೪೩೨ ರಷ್ಟಿದೆಯೆಂಬುದನ್ನು ಕೇಳಿ ಯಾರಿಗೂ ದಂಗುಬಡಿಯದಿರದು, ಇದು ನಿಜವಾಗಿ ನಮ್ಮ ಸಾಮಾಜಿಕ ಘಟನೆಯ ದೂಷ್ಯ ಚಿತ್ರವಾಗಿದೆ. ಅದರಲ್ಲಿ ತೀವ್ರ ಸುಧಾರಣೆ ಅವಶ್ಯವಿದೆ ಈ ಸಾಲಗಳು ಹೆಚ್ಚಾಗಿ ಸಾಹುಕಾರರಿಂದ ಪಡೆದವುಗಳು. ಅವುಗಳ ಬಡ್ಡಿಯ ದರ ನೂರಕ್ಕೆ ೧೨ಯಿಂದ ೩೭ ರ ವರೆಗೂ ಇರುವದು ನಮ್ಮ ಸಮಾಜದ ಇನ್ನೊಂದು ಉದ್ವೇಗಜನಕ ಚಿತ್ರವೇ ಸರಿ.

ಶಿಫ್ಟ ಅಥವಾ ಸರದಿಯ ಪದ್ಧತಿಯಲ್ಲದೆ ಈ ಕೂಲಿಕಾರರು ದಿನಕ್ಕೆ ೨೪ ತಾಸೂ ಕೆಲಸ ಮಾಡಲು ಬದ್ಧರಾಗಿರುತ್ತಾರೆ.

ರಿಕ್ಷಾ ಎಳೆಯುವದರಿಂದ ಮಾನವ ದೇಹಪ್ರಕೃತಿಗೆ ಬಹಳ ಶ್ರಮವಾಗುತ್ತದೆ. ಕಾಲುಗಳಿಗಂತೂ ಬಹಳ ಹೆಚ್ಚು ಆಯಾಸವಾಗುತ್ತದೆ. ತಿಗಳೆ (ಒಂದು ಬಗೆಯ ಕೇಶ-ಚರ್ಮರೋಗ-Pediculosis) ರೋಗ ಎಲ್ಲರಲ್ಲಿಯೂ ಹಬ್ಬಿದ ಸಾಮಾನ್ಯ ರೋಗ. ಹಲ್ಲಿನ ಮತ್ತು ವಸಡಿಯ ಉಪದ್ರವಗಳು ಪ್ರಚಲಿತವಾಗಿವೆ. ನೂರಕ್ಕೆ ೧೨ ೫ ಜನರು ಹೃದಯದ ಅಸಮರ್ಪಕ ಕ್ರಿಯೆಯಿಂದ ಪೀಡಿತರಾಗಿದ್ದರೆ ಅವರಲ್ಲಿ ನೂರಕ್ಕೆ ೫೬.೮ ಜನರಲ್ಲಿ ಪಾಂಡುರೋಗ ಸ್ಪುಟವಾಗಿ ಒಡೆದು ಕಾಣಿಸುತ್ತದೆ. ರಕ್ತನಾಳಗಳ ಉಬ್ಬರ (Varicose Veins) ವೂ ಬಹಳ ಪ್ರಚುರವಾದುದು. ಮಳೆಮಂಜುಗಳಲ್ಲಿ ಅಡ್ಡಾಡುವದರಿಂದ ಕೆಲ ಋತುಗಳಲ್ಲಿ ರಿಕ್ಷಾವಾಲರು ಶೀತಜ್ವರ, ನ್ಯುಮೋನಿಯಾ ರೋಗದಿಂದ ಬಳಲುವರು. ಈ ರೋಗಗಳು ಅವರ ವಿಷಯದಲ್ಲಿ ಎಷ್ಟೋ ವೇಳೆ ಪ್ರಾಣಾಂತಿಕವಾಗುವದುಂಟು ನಗರಸಭೆಯಲ್ಲಿ ರಿಕ್ಷಾವಾಲರ ಯೋಗಕ್ಷೇಮ ನೋಡಲು ಒಬ್ಬ ವಿಶೇಷ ವೈದ್ಯಕೀಯ ಅಧಿಕಾರಿಯೇ ಇದ್ದನು. ಆದರೆ ಕೆಲ ವರ್ಷಗಳ ಕೆಳಗೆ ಯಾವದೇ ತೋರಿಕೆಯ ಕಾರಣವಿಲ್ಲದೆ ಆ ಸ್ಥಾನವನ್ನೆ ರದ್ದುಗೊಳಿಸಲಾಯಿತು. ಇಂದು ಅವರಿಗೆ ದೊರಕುವ ವೈದ್ಯಕೀಯ ಸವಲತ್ತುಗಳು ಸಾಲವು. ಮಹಿಳಾ ಪರಿಷತ್ತಿನ ಕೆಲ ಸದಸ್ಯರು ಸಾಧಾರಣ ರೋಗಗಳಿಗೂ ಗಾಯಗಳಿಗೂ ಆರೈಕೆಯನ್ನು ಸ್ವಯಂಪ್ರೇರಣೆಯಿಂದ ವಾರಕ್ಕೆರಡು ಸಲ ಒಮ್ಮೆಗೆ ಎರಡು ತಾಸುಗಳ ವರೆಗೆ ಕೆಲ ವರ್ಷಗಳಿಂದ ಕೊಡುತ್ತ ಬಂದಿದ್ದಾರೆ. ಈ ಸಹಾಯವನ್ನು ಬಹಳ ಕೃತಜ್ಞತೆಯಿಂದ ಅಂಗೀಕರಿಸಿಕೊಳ್ಳಲಾಗಿದೆ.

ವಸತಿ ಸೌಕರ್ಯಗಳು ಅತ್ಯಂತ ಅತೃಪ್ತಿಕರವಾಗಿವೆ. ಸ್ವಚ್ಛತೆಯ ವ್ಯವಸ್ಥೆಗಳು ಸರಿಯಾಗಿಲ್ಲ. ಈಚೆಗೆ ಕೆಲ ವಸತಿಭಾಗಗಳಲ್ಲಿ ಸ್ವಲ್ಪ ಸುಧಾರಣೆಯಾಗಿದೆ. ಆದರೆ ಇಡೀ ಪ್ರಶ್ನೆಯನ್ನು ತಳಮುಟ್ಟ ಸೋಸಿ ಶೀಘ್ರವಾಗಿ ಪರಿಹಾರ ನೀಡುವದು ಅವಶ್ಯ. ೨೨ ಜನರಿಗೆ ಒಂದು ಅಡಿಗೆಮನೆ—ಅವುಗಳಿಗೂ ಹೊಗೆನಳಿಗೆಯಿಲ್ಲ. ೩೦ ಜನರು ೬೦ ಚದರಡಿಯ ಅಥವಾ ೮ ಜನರು ೧೨'X೮' ಯ ಒಂದು ಕೋಣೆಯಲ್ಲಿ ವಾಸಿಸುತ್ತಾರೆ. ಇಂಥ ಸ್ಥಿತಿ ಹಿಂದಿನ ಸ್ಥಾನದ ಬೇಸಗೆಯ ರಾಜಧಾನಿಯೆನಿಸುವ ಪಟ್ಟಣದಲ್ಲಿ-ಏಕೆ ಎಲ್ಲಿಯೂ-ಇರಬಾರದು. ಸಂಯಾದ ಬಟ್ಟೆಗಳೂ ಮಳೆಗೆ ತೊಯ್ಯದ ಮೇಲಂಗಿಗಳೂ ಅಧಿಕಾರಿಗಳಿಂದ ಒದಗಿಸಲ್ಪಡಬೇಕು. ರಿಕ್ಷಾ ಕೂಲಿದರಗಳನ್ನು ಇನ್ನೂ ಹೆಚ್ಚಿಸಬೇಕು.

ಕುದುರೆ ಮತ್ತು ಮೋಟಾರ ವಾಹನಗಳ ಸಂಚಾರ ಅಸಾಧ್ಯವಾಗಿರುವ ಗುಡ್ಡಗಳಲ್ಲಿ ರಿಕ್ಷಾಗಳು ಅನಿವಾರ್ಯವೆಂದು ಹೇಳಬಹುದು. ಆದರೆ ಸಮಭೂಮಿಯಲ್ಲಿಯ ರಿಕ್ಷಾಗಳ ಕಥೆಯೇನು? ನಿಜವಾಗಿ ಕಾಯಿದೆ ಮಾಡಿ ಅಲ್ಲಿ ರಿಕ್ಷಾ ಸಂಚಾರವನ್ನು ನಿಲ್ಲಿಸಿಬಿಡಬೇಕಾಗಿದೆ.

ಮದ್ರಾಸಿನ ರಿಕ್ಷಾವಾಲರು ಮುಖ್ಯವಾಗಿ ಸುತ್ತಮುತ್ತಲ ಜಿಲ್ಲೆಗಳ ದಲಿತವರ್ಗಗಳ ಜನರು. ವರ್ಷವೆಲ್ಲ ತಮ್ಮ ಹಳ್ಳಿಗಳಲ್ಲಿ ಕೆಲಸ ದೊರೆಯದ್ದರಿಂದ ಅವರು ನಗರಕ್ಕೆ ಬರುತ್ತಾರೆ. ಸತ್ತಿಂದ ಚಂಗಲಪೇಟೆ ಮತ್ತು ದಕ್ಷಿಣ ಅರ್ಕಾಟ ಜಿಲ್ಲೆಗಳಿಂದ ಬಂದ ಅನೇಕ ರಿಕ್ಷಾವಾಲರು ದೇಸಾಯದ ಕೆಲಸ ಸಿಗದಿದ್ದುದರಿಂದಷ್ಟೇ ಅಲ್ಲ, ಸವರ್ಣ ಹಿಂದೂಗಳ ದಬ್ಬಾಳಿಕೆಯಿಂದಲೂ ಜಮೀನ್ದಾರರ ಧನತೃಷ್ಣೆಯಿಂದಲೂ ಪೀಡಿತರಾಗಿ ತಾವು ರಿಕ್ಷಾ ಎಳೆಯುವ ಕೆಲಸಕ್ಕೆ ಶರಣು ಬರಬೇಕಾಯಿತೆಂದು ದೂರಿಕೊಂಡರು.

ರಿಕ್ಷಾವಾಲರಲ್ಲಿ ಅಧಿಕಾಂಶ ಜನರು ೧೦ ವರ್ಷದೊಳಗೆ ಹೆಸರುಳಿದು ಹೋಗುತ್ತಾರೆ. ನೂರಕ್ಕೆ ೪ ೪ ಜನರುಮಾತ್ರ ಅಕ್ಷರಸ್ಥರು.ಅಧಿಕಾಂಶ ಜನರು ವಿವಾಹಿತರಾಗಿದ್ದರೂ ನೂರಕ್ಕೆ ೩೫ ಜನರು ಮಾತ್ರ ಮದ್ರಾಸದಲ್ಲಿ ಕುಟುಂಬಸಹಿತವಾಗಿ ವಾಸಿಸುತ್ತಾರೆ. ಅದುದರಿಂದ ಅನೀತಿ ತುಂಬಿ ಹಬ್ಬಿದೆ. ನೂರಕ್ಕೆ ೬೦ ಜನರು ಸಾಲಗಾರರಾಗಿದ್ದು ತಲಾ ಸರಾಸರಿ ಸಾಲ ೧೧೨ ರೂಪಾಯಿಯಿದೆ. ಸಾಲದ ಕಾರಣ ಮತ್ತೆ ಮದುವೆ,ಸಂಸಾರದ ಅವಶ್ಯಕತೆ ಅಥವಾ ತಂದೆ ತಾತರು ಮಾಡಿದ ಸಾಲಗಳೆ ಆಗಿವೆ ರಿಕ್ಷಾವಾಲರಲ್ಲಿಯೂ ತಮ್ಮ ತಮ್ಮ ಹಳ್ಳಿಗಳಿಂದ ಬಂದ ಸವರ್ಗೀಯ , ಸಾಹುಕಾರರಿದ್ದಾರೆ. ಸಾ ಹು ಕಾ ರ ರು ತಮಗೆ ಬರಬೇಕಾದ ಅಸಲು ಬಡ್ಡಿಗಳನ್ನು ವಸೂಲು ಮಾಡುವ ರೀತಿ ಕೌತುಕವು. ಸಣ್ಣ ಸಣ್ಣ ಮೊತ್ತಗಳು, ಹೆಚ್ಚಾಗಿ ರೂ. ೧೦ ಮಾತ್ರ ಸಾಲವಾಗಿ ಕೊಡಲ್ಪಡುವವು. ಪ್ರಾರಂಭದಲ್ಲಿ ಅಸಲು ಕೊಡುವಾಗಲೆ ತಿಂಗಳಿಗೆ ರೂಪಾಯಿಗೆ ಒಂದು ಅಥವಾ ಎರಡಾಣೆಯಂತೆ, ಅಂದರೆ ನೂರಕ್ಕೆ ವರ್ಷಕ್ಕೆ ರೂ. ೭೫ ಅಥವಾ ೧೫೦ರಂತೆ,ಒಂದುತಿಂಗಳ ಬಡ್ಡಿಯನ್ನು ಮುರಿದುಕೊಂಡೇ ಸಾಲಕೆ. ದುವರು ಅನಂತರ ಇಡಿ ಅಸಲನ್ನು ದಿನಕ್ಕೆ ೫ ಆಣೆಯಂತೆ ಚಿಕ್ಕ ಕಂತುಗಳಲ್ಲಿ ವಸೂಲು ಮಾಡುವರು. ೧೦ ರೂಪಾಯಿಯ ಸಾಲಗಾರನು ಹೀಗೆ ೩೨ ದಿನಗಳಲ್ಲಿ ಅದನ್ನು ಮುಟ್ಟಿಸುತ್ತಾನೆ. ರಿಕ್ಷಾವಾಲರ "ಚೇರಿ"ಗಳಲ್ಲಿ ಈ ಸವರ್ಗೀಯ ಸಾಹುಕಾರರು ದಿನಾಲೂ ಸಾಲ ವಸೂಲ ಮಾಡುವ ದೃಶ್ಯ ಸಾಮಾನ್ಯವಾಗಿರುತ್ತದೆ. ಈ ವಿಚಾರಣೆಯಿಂದ ನಮ್ಮ ಸಾಮೂಹಿಕ ಅಜ್ಞಾನದ ಸ್ವರೂಪ ಬಯಲಿಗೆ ಬಂದಿದೆ ನೂರಕ್ಕೆ ೧೧ ಪ್ರಸಂಗಗಳಲ್ಲಿ ಸಾಲಗಾರರಿಗೆ ತಾವು ಯಾವ ಕರಾರಿನಿಂದ ಸಾಲ ಪಡೆದೆವೆಂಬುದೇ ಗೊತ್ತಿಲ್ಲದ್ದರಿಂದ ಸಾಲ ಕೊಟ್ಟವರು ಅನಿಯಮಿತ ಅವಧಿಯ ವರೆಗೂ ಬಡ್ಡಿಯನ್ನು ಸೆಳೆದುಕೊಳ್ಳುತ್ತ ಹೋದುದು ಕಂಡುಬಂತು.

ಈ ದುರ್ದೈವಿ ಶ್ರಮಜೀವಿಗಳಿಗಾಗಿ ಯಾವ ವಿಶೇಷ ವೈದ್ಯಕೀಯ ಸೌಕರ್ಯಗಳೂ ಇಲ್ಲ. ಅಪೋಷಣೆ ಮತ್ತು ಅತಿಶ್ರಮದಿಂದ ಹುಟ್ಟುವ ಎಲ್ಲ ರೋಗಗಳಿಂದಲೂ ಅವರು ಬಳಲುತಿದ್ದಾರೆ.

ಅವರ ಬಟ್ಟೆಬರೆಗಳು ಸ್ವಚ್ಛವೂ ಇಲ್ಲ, ಪರ್ಯಾಪ್ತವೂ ಇಲ್ಲ. ಕೆಲಸದ ತಾಸುಗಳಿಗೆ ನಿಯಮವಿಲ್ಲ. ಮಾದಕ ಪೇಯಗಳ ಸೇವನೆ ಪ್ರಚುರವಾಗಿದೆ ಹೆಣ್ಣುಮಕ್ಕಳಿಗೆ ಕೂಡ ಚಟಹತ್ತಿದೆ. ಮಕ್ಕಳು ಚಿಕ್ಕಂದಿನಿಂದ ಅದರ ಅಭ್ಯಾಸದಲ್ಲೆ ಬೆಳೆದಿರುತ್ತವೆ. ಕುಡಿಯದೆ ರಿಕ್ಷಾ ಎಳೆಯುವದು ಅಸಾಧ್ಯವೆಂದೆ ಅವರ ವಾದ. ತಮಿಳು ರಿಕ್ಷಾವಾಲನ ತಿಂಗಳ ಗಳಿಕೆಯಲ್ಲಿ ಕಾಲು ಭಾಗ ತನ್ನ ಮತ್ತು ತನ್ನ ಕುಟುಂಬದ ಹೆಂಡದ ವೆಚ್ಚಕ್ಕೆ ಹೋಗುತ್ತದೆ. ತೆಲುಗು ರಿಕ್ಷಾವಾಲರು ಅವರಿಗಿಂತ ಸಂಯಮಿಗಳು. ಅವರು ರವಿವಾರ ಸಂಜೆಗಷ್ಟೇ ಕುಡಿಯುತಿರುತ್ತಾರೆ. ಆದರೆ ಅವರಲ್ಲಿ ತೀಕ್ಷ್ಣವಾದ ದೇಶೀ ಸಿಗಾರುಗಳ ಚಟ ಹೆಚ್ಚು. ಉಭಯತರಲ್ಲಿ ಅಧಿಕಾಂಶರು ಬೀಡಿ ಸೇದುತ್ತಾರೆ.

ರಿಕ್ಷಾವಾಲನ ನಿಕ್ಕಿ ಮಾಸಿಕ ಉತ್ಪನ್ನ ಸುಮಾರು ರೂ. ೨೫ ರಿಂದ ೩೦ ರ ವರೆಗಾಗಬಹುದು.

ತೆಲುಗು ರಿಕ್ಷಾವಾಲರು. ವಾಸಿಸುವ ಬಾಡಿಗೆ ಕೋಣೆಗಳಲ್ಲಿ ಗಾಳಿ ಬೆಳಕಿನ ವ್ಯವಸ್ಥೆಯಿಲ್ಲ, ನೀರು, ದೀಪಗಳೇ ಮೊದಲಾದ ಸೌಕರ್ಯಗಳಿಲ್ಲ. ಸ್ವಚ್ಛತೆಯ ವ್ಯವಸ್ಥೆಗಳು "ಅಸಮರ್ಪಕವೂ ದುರ್ಗಂಧ ಪೂರ್ಣವೂ" ಇವೆ. ರಿಕ್ಷಾವಾಲರ ವಸತಿಯ ಒಂದು ಗುಂಪಿನ ಈ ಕೆಳಗಿನ ವರ್ಣನೆ ಚಿತ್ರವತ್ತಾಗಿದೆ:—

"ಅದರಲ್ಲಿ ೫೨ ಚಿಕ್ಕ ಗುಡಿಸಲುಗಳಿವೆ. ಒಂದಕ್ಕೊಂದರ ನಡುವೆ ಬರಿ ತಾಳೆಯೋಲೆಯ ಚಾಪೆಗಳಿಂದ ಮಾಡಿದ ಅಡ್ಡಗೋಡೆ ಮಾತ್ರ ಇದೆ. ಚಪ್ಪರ ಹಳೆಯ ತವದ ತಗಡಿನದು. ಹಗಲಲ್ಲಿ, ಅದರಲ್ಲಿಯೂ ಬೇಸಗೆಯಲ್ಲಿ, ಗುಡಿಸಲೊಳಗೆ ವಿಪರೀತ ಸೆಕೆಯಿರುವದು. ಬಾಗಿಲು ಎಷ್ಟು ಚಿಕ್ಕದೆಂದರೆ ಕುಳಿತುಕೊಂಡೇ ಒಳಹೊಗಬೇಕಾಗುತ್ತದೆ. ೨೦೪ ಜನರನ್ನು ಒಳಗೊಂಡ ಈ ೫೨ ಕೋಣೆಗಳಿಗೆ ಸೇರಿ ಒಂದೇ ನೀರಿನ ನಳವುಂಟು. ಫ್ಲಶ್-ಔಟ ಪಾಯಖಾನೆಗಳು ಬರಿ ಎರಡು. "ಚೇರ" (ಕೇರಿ)ಯ ಆವಾರದಲ್ಲಿ ಒಂದು ಭಾವಿಯಿದೆ. ಅದರಿಂದ ನೀರು ಜಗ್ಗಿ ಹೆಣ್ಣುಮಕ್ಕಳು ಬಯಲಲ್ಲೇ ಮೈತೊಳೆದುಕೊಳ್ಳುತ್ತಾರೆ. ಏಕೆಂದರೆ ಹೆಂಗಸರಿಗಾಗಲಿ ಗಂಡಸರಿಗಾಗಲಿ ಬೇರೆ ಬಚ್ಚಲು ಮನೆಯಿಲ್ಲ. ದೀಪದ ವ್ಯವಸ್ಥೆ ಇಲ್ಲವೇ ಇಲ್ಲ. ಬಾಡಿಗೆ ಪ್ರತಿ ಗುಡಿಸಲಿಗೆ ತಿಂಗಳಿಗೆರಡು ರೂಪಾಯಿ."

ಒಬ್ಬಂಟಿಗ ರಿಕ್ಷಾವಾಲರಿಗೆ ಮನೆಯೇ ಇರುವದಿಲ್ಲ. ಅವರು ರಸ್ತೆಯ ಪಕ್ಕದಲ್ಲಿ ಮಲಗುತ್ತಾರೆ, ಸಾರ್ವಜನಿಕ ನಳಗಳಲ್ಲಿ ಮೀಯುತ್ತಾರೆ, ಬೀದಿಗಳಲ್ಲಿ ಅನ್ನ ಮಾರುವವರಿಂದ ಕೊಂಡು ಉಣ್ಣುತ್ತಾರೆ ಮತ್ತು ಮಳೆ ಗಾಳಿಯ ಇರುಳುಗಳಲ್ಲಿ ಮೇಲು ಸೇತುವೆಗಳಡಿಯಲ್ಲಿಯೋ ಕರುಣಾಳು ಜನರ ಬಯಲು ಜಗಲಿಗಳ ಮೇಲೆಯೋ ಮಲಗುತ್ತಾರೆ ಅಥವಾ ತಮ್ಮ ರಿಕ್ಷಾಗಳಡಿಯಲ್ಲಿ ನಡುಗುತ್ತ ನಿಂತು ತೋಯಿಸಿಕೊಳ್ಳದಿರಲು ಹೆಣಗುತ್ತಾರೆ.

ತಮಿಳು ರಿಕ್ಷಾವಾಲರು ತಮ್ಮ ಕೀಳು ಸಾಮಾಜಿಕ ದರ್ಜೆ ಮತ್ತು ಅಸ್ಪೃಶ್ಯತೆಯ ಕಲಂಕದ ಕಾರಣಗಳಿಂದ "ಚೇರಿ" ಗಳಲ್ಲಿ ವಾಸಿಸುತ್ತಾರೆ. ಅವರ ಗುಡಿಸಲುಗಳು ತಾಳೆಯೆಲೆಗಳಿಂದ ಕಟ್ಟಿದವುಗಳು. ಎರಡರಿಂದ ನಾಲ್ಕಡಿ ಎತ್ತರದ ಗೋಡೆಗಳ ಮೇಲೆ ಆಧರಿಸಿ ನಿಂತ ಅವುಗಳ ಮಾಡಗಳನ್ನು ಹಳೆಯ ಡಬ್ಬಿಗಳ ತಗಡುಗಳನ್ನು ಕತ್ತರಿಸಿ ಮಾಡಿರುತ್ತಾರೆ. ಬಾಗಿಲು ಎಷ್ಟು ತಗ್ಗು ಮತ್ತು ಅಗಲಕಿರಿದೆಂದರೆ ಒಳಗೆ ಹೋಗಬೇಕಾದರೆ ಕೈಕಾಲುಗಳನ್ನೂರಿ ಅಂಬೆಗಾಲಿಕ್ಕುತ್ತ ಹೋಗಬೇಕು ಗುಡಿಸಲ ಒಂದು ಬದಿಯಲ್ಲಿ ಅಡಿಗೆಮಾಡುತ್ತಾರೆ. ಕಿಟಿಕಿಗಳಾಗಲಿ ಬೆಳಕಿಂಡಿಗಳಾಗಲಿ ಇಲ್ಲದಿರುವದರಿಂದ ಒಳಗೆಲ್ಲ ಕತ್ತಲು ಉಸಿರುಗಟ್ಟಿಸುವ ಸ್ಥಿತಿ. ಮಾಡ ಅಷ್ಟು ತಗ್ಗಾಗಿರುವದರಿಂದ ನೆಟ್ಟಗೆ ನಿಲ್ಲುವದೇ ಕಠಿಣ. ನೆಲದಲ್ಲಿ ಹಳ್ಳ ತಿಟ್ಟು ಬಹಳ ತಗ್ಗು, ತಗ್ಗಿನ ಪ್ರದೇಶದಲ್ಲಂತೂ ಅತೀವ ತೇವು ಸ್ವಚ್ಛತಾ ವ್ಯವಸ್ಥೆಗಳು ಕರುಣಾಜನಕವಾಗಿವೆ. ಗಟಾರಗಳ ವ್ಯವಸ್ಥೆಯೆ ಇಲ್ಲ. ವಿಚಾರಣೆಯ ಸಮಯದಲ್ಲಿ ೨೦ ಗುಡಿಸಲುಗಳಲ್ಲಿ ೬೦ಜನ ವಾಸಿಸುತಿದ್ದರು ಪ್ರತಿ ಗುಡಿಸಲು ೫೦ ಚದರಡಿ ಅಳತೆಯದು. ಬಾಡಿಗೆ ತಿಂಗಳಿಗೆ ರೂ. ೦-೯-೦ ದೀಪದ ವ್ಯವಸ್ಥೆಯಿಲ್ಲ. ಒಂದು ಚಿಕ್ಕ ಗಟಾರ ಚೇರಿಯ ನಡುವೆ ಉದ್ದಕ್ಕೂ ಹಾದು ಹೋಗುತ್ತದೆ. ಅದರ ನೀರು ನಡುನಡುವೆ ತಡೆದು ಬಿದ್ದು ದುರ್ಗಂಧ ಹೊಡೆಯುತಿರುತ್ತದೆ. ೨೦ ಕುಟುಂಬಗಳಿಗೆ ಸೇರಿ ಒಂದೇ ಒಂದು ಸಾಮಾನ್ಯ ಪಾಯಖಾನೆಯುಂಟು. ಭಾವಿಯೂ ಇಲ್ಲ, ನಳವೂ ಇಲ್ಲ. ಬೇಕಾದರೆ ಹತ್ತಿರದ ಸಾರ್ವಜನಿಕ ನಳದಿಂದ ತರಬೇಕು. ಅವರು ರಿಕ್ಷಾಗಳನ್ನು ಗುಡಿಸಲು ಸಾಲುಗಳ ನಡುವಣ ಬಯಲು ಜಾಗೆಯಲ್ಲಿ ನಿಲ್ಲಿಸಬೇಕು.

ಕಲಕತ್ತೆಯಲ್ಲಿ ೧೯೪೪ ರಲ್ಲಿ ೩೦೦೦೦ ರಿಕ್ಷಾವಾಲರಿದ್ದರು. ಅವರಲ್ಲಿ ಅಧಿಕ ಜನರು ಸಂಯುಕ್ತ ಪ್ರಾಂತಗಳ ಕೆಲ ನಿರ್ದಿಷ್ಟ ಪ್ರದೇಶಗಳಿಂದ ಬಂದವರು. ಇಲ್ಲಿಯೂ ಅವರು ಹೆಚ್ಚಾಗಿ ಹಳ್ಳಿಗಳಿಂದ, ಒಕ್ಕಲತನದಿಂದ ದೊರೆಯುವ ಅಲ್ಪ ಕೌಟುಂಬಿಕ ಉತ್ಪನ್ನ ಸಾಲದ್ದಕ್ಕೆ ಅದನ್ನು ಬಾಯಿಗೂಡಿಸಲು ಬರುವರು. ತಂಬಾಕು ಸೇದುವದು ಸಾಮಾನ್ಯ ಚಟ. ಕೀಳು ಜಾತಿಯವರು ಗಾಂಜಾ ಸಹಿತ ಸೇವಿಸುತ್ತಾರೆ. ಅವರಲ್ಲಿ ಅಧಿಕಾಂಶ ಜನರು ತಮ್ಮ ಕುಟುಂಬಗಳಿಂದ ದೂರವಾಗಿರುವದರಿಂದ ಮೇಹರೋಗಗಳ ಹಬ್ಬುಗೆ ವಿಶೇಷವಾಗಿದೆ. ಋತುಮಾನಕ್ಕನುಸಾರವಾಗಿ ದೈನಿಕಉತ್ಪನ್ನ ತಲಾ ೨ ರಿಂದ ೩ ರೂ.ವರೆಗಿರುತ್ತದೆ. ೬ ರಿಂದ ೮ ತಾಸುಗಳ ವರೆಗೆ ರಿಕ್ಷಾ ಎಳೆಯುವದುಶ್ರಮವಾಹವಾದ ಕೆಲಸವಾದರೂ ಅವರ ದೃಷ್ಟಿಯಲ್ಲಿ ಲಾಭದಾಯಕವಾಗಿದೆ. ಬೇರೆಡೆಗಳಲ್ಲಿರುವ ಅವರ ವೃತ್ತಿಬಾಂಧವರಂತೆಯೆ ಅವರೂ ಅರೆಬಟ್ಟೆಯವರಾಗಿದ್ದು ಮಳೆಚಳಿಗಳಿಂದ ಮಳೆ ಚಳಿಗಾಲಗಳಲ್ಲಿ ಅಸಂರಕ್ಷಿತರಾಗಿರುತ್ತಾರೆ. ಬಿರುಗಾಲಿನಿಂದ ನಗರದ ಬಿಸಿಸುಡುವ ಡಾಂಬರು ರಸ್ತೆಗಳಲ್ಲಿ ರಿಕ್ಷಾಗಳನ್ನೆಳೆಯುವದು ಇನ್ನೊಂದು ಕಷ್ಟ. ಎಲ್ಲ ಕಡೆಗಳಲ್ಲಿರುವಂತೆ ಇಲ್ಲಿಯೂ ಅವರ ವಸತಿವ್ಯವಸ್ಥೆ ಭಯಾವಹವಾಗಿದೆ. ಈ ದುರ್ದೈವಿಗಳಿಗೆ ಹವೆಯ ಹುಚ್ಚಾಟದಿಂದ ಸಂರಕ್ಷಣೆಯಿಲ್ಲ.

ನಾಗಪುರ, ವಿಶಾಖಪಟ್ಟಣ, ಮುರಿ, ಮದುಕೈ, ಮತ್ತು ದಿಲ್ಲಿಗಳಿಂದ ಬಂದ ವರದಿಗಳೂ ಇದೇ ಕರುಣ ಕಥೆಯನ್ನು ಹೇಳುತ್ತವೆ. ಈಚೆಗೆ ನಾವು ವಾಸಿಸಿ ಅನುಭವಪಡೆದ ಮಸೂರಿಯಾದರೂ ಈ ಯಾದಿಯಲ್ಲಿ ಸೇರಲು ಯೋಗ್ಯವಾಗಿದೆ.

ವರದಿಯನ್ನು ಬರೆದವರು ಈ ರೀತಿಯಾಗಿ ಸಮಾರೋಪ ಮಾಡಿದ್ದಾರೆ-

"ರಿಕ್ಷಾವಾಲರ ಪಾಡನ್ನು ಸುಧಾರಿಸಲು ಯಾವದೇ ಪರಿಹಾರ ಯೋಜನೆಯನ್ನು ಕೈಕೊಂಡರೂ ಈ ಬಗೆಯ ಶ್ರಮ ಮಾನವ ವ್ಯಕ್ತಿತ್ವದ ಅಧಃಪಾತಕ್ಕೆ ಕಾರಣವಾಗುತ್ತದೆಂಬ ಮೂಲಭೂತ

—ಪುಟ ೧೦ಕ್ಕೆ

ಭಾಂಡಾರಗಳ ಬಗೆಗೆ

ಖಾದಿ ಪತ್ರಿಕೆಯ ಜೂನ ೩ ನೇ ತಾರೀಕಿನ ಸಂಚಿಕೆಯಲ್ಲಿ ಮೇಲಿನ ತಲೆ ಬರೆಹದಲ್ಲಿ ಲೇಖವೊಂದು ಪ್ರಸಿದ್ಧವಾಗಿದೆ. ಅದು ಮಹತ್ವದ್ದಿರುವದರಿಂದ ಪೂರ್ಣವಾಗಿ ಅದನ್ನು ಕೆಳಗೆ ಕೊಡುತ್ತೇನೆ.

"ನಮ್ಮ ಭಾಂಡಾರಗಳನ್ನು ನಡೆಸುವಲ್ಲಿ ನಾವು ತುಂಬ ಬದಲಾವಣೆ ಮಾಡಬೇಕೆಂಬುದು ನಮ್ಮ ಉದ್ದೇಶವಾಗಿದೆ. ಖಾದೀ ಮಾರಾಟ ಮಾಡಬೇಕಾದರೆ ನೂಲನ್ನು ಕೊಡಬೇಕೆಂದು ಕರಾರಿದ್ದರೂ ಮುಂಬಯಿಯ ಜನರು ಇನ್ನೂ ನೂಲಲು ಪ್ರಾರಂಭಿಸಿಲ್ಲ. ಬಟ್ಟೆಗಾಗಿ ಕೊಡುತಿರುವ ನೂಲಿನಲ್ಲಿ ಬಹ್ವಂಶವು ಕೊಂಡ ನೂಲೆ ಇರುವುದು. ಜುಲೈ ೧ ರಿಂದ ಒಂದು ಲಡಿಗೆ ಕೇವಲ ೨ ರೂಪಾಯಿಯ ಖಾದಿಯನ್ನು ಕೊಡುವೆವು. ತತ್ಪರಿಣಾಮವಾಗಿ ಖಾದಿ ಮಾರಾಟ ಕಡಮೆಯಾಗುವದು ಗಿರಣಿ ಬಟ್ಟೆಯ ಸೀದಾ ಜಾರಿಯಲ್ಲಿದ್ದುದರಿಂದ ಖಾದೀ ಮಾರಾಟ ಹೆಚ್ಚಿದುದಕ್ಕೆ ಒಂದು ಮುಖ್ಯ ಕಾರಣ. ಮೊದಲು ಗಿರಣಿ ಬಟ್ಟೆ ಧರಿಸುತಿದ್ದ ಅನೇಕರು ಈಗ ಖಾದಿಯನ್ನೆ ಕೊಳ್ಳಬೇಕಾಗಿ ಬಂದಿದೆ. ನೂಲನ್ನು ನೀವು ಸ್ವತಃ ನೂತಿರುವಿರೊ ಇಲ್ಲವೆ ನಿಮ್ಮ ಮನೆಯಲ್ಲಿಯ ಯಾರಾದರೂ ನೂತಿರುವರೊ ಎಂಬದನ್ನು ವಿಚಾರಿಸಿ ಅವರಿಂದ ಜವಾಬು ತೆಗೆದುಕೊಂಡೆ ನಾವು ಖಾದಿಯನ್ನು ಕೊಡುತಿರುವೆವು. ಆದರೆ ಅನೇಕ ಗಿರಾಕಿಗಳು ಸರಿಯಾದ ಜವಾಬು ಕೊಡಬೇಕೆಂಬ ತಮ್ಮ ಹೊಣೆಗಾರಿಕೆಯನ್ನೆ ಅರಿತಿಲ್ಲೆಂದು ವಿಷಾದಪೂರ್ವಕ ಒಪ್ಪಬೇಕಾಗುತ್ತದೆ. ಈ ಬಗೆಯ ಬೇಜವಾಬದಾರತನವು ಖಾದಿಯ ಹಿತದ ದೃಷ್ಟಿಯಿಂದ ಸರಿಯಾದುದಲ್ಲ. ಖಾದಿಯ ಉತ್ಪಾದನೆಯ ಉದ್ದೇಶವು ಹಿಂದುಸ್ಥಾನದ ಹಳ್ಳಿಗಳನ್ನು ಸ್ವಾವಲಂಬಿಯನ್ನಾಗಿ ಮಾಡುವುದೆ ಇರುವುದು. ಆದುದರಿಂದ ಉಳಿದ ಪ್ರಾಂತಗಳು ಈಗ ನಮ್ಮ ಭಾಂಡಾರಗಳಿಗೆ ಕಡಮೆ ಬಟ್ಟೆ ಕೊಡುತ್ತ ಹೋಗುವವು. ಈ ಪ್ರಮಾಣ ಹೀಗೆಯೆ ಕಡಮೆಯಾಗುತ್ತ ಹೋಗುವದು. 'ಖಾದಿ ಮಾರಾಟ' ಎಂಬ ಶಬ್ದಗಳು ನಿಜವಾಗಿಯೂ ನಮ್ಮ ಧ್ಯೇಯಕ್ಕೆ ವಿಸಂಗತವಾಗಿವೆ. ಈ ಪರಿಸ್ಥಿತಿಯಲ್ಲಿ ಭಾಂಡಾರಗಳನ್ನು ನಡೆಸುವ ಸಂಬಂಧದಲ್ಲಿಯೂ ನಾವು ಸಕಾಲಿಕ ಬದಲಾವಣೆಗಳನ್ನು ಮಾಡುವದು ಅವಶ್ಯವಾಗಿದೆ. ಜುಲೈ ೧ ನೇ ತಾರೀಕಿನಿಂದ ಮಾತುಂಗಾ ಮತ್ತು ದಾದರದಲ್ಲಿಯ ಎರಡು ಶಾಖೆಗಳನ್ನು ಮುಚ್ಚುವೆವು ಕಳೆದ ಮೂರು ತಿಂಗಳ ಮಾತುಂಗಾದಲ್ಲಿ ನಾವು ಖಾದಿಯ ಎಲ್ಲ ವಿಧಾನಗಳ ಬಗ್ಗೆ ಶಿಕ್ಷಣ ಕೊಡುತಿರುವೆವು. ದಾದರದಲ್ಲಿ ಖಾದಿಯ ಮಾರಾಟವೂ ಕೆಲಮಟ್ಟಿಗೆ ಇದ್ದಿತು. ಆದರೀಗ ಆ ಚಟುವಟಿಕೆಗಳೆಲ್ಲ ನಿಲ್ಲಲಿಕ್ಕೆ ಬೇಕು. ಗಿರಗಾವದಲ್ಲಿ ಖಾದಿ ಪ್ರಿಂಟಿಂಗ ಶಾಪಿನಲ್ಲಿ ಅಖಿಲ ಭಾರತ ಚರಕ ಸಂಘದವರು ಶಿಕ್ಷಣ ಕೇಂದ್ರವನ್ನೂ ನಡೆಸುತಿದ್ದರು. ಈ ಅಂಗಡಿಯನ್ನು ಈಗ ಖಾದೀ ಪ್ರಿಂಟಿಂಗ ಶಾಪದ ವಿಶ್ವಸ್ತರಿಗೆ ತಿರುಗಿ ಕೊಡಬೇಕಾಗುವದು. ಅವರು ಖಾದಿಯ ವಿಧಾನಗಳ ಬಗ್ಗೆ ಶಿಕ್ಷಣ ಕೊಡುವರಲ್ಲದೆ ಮಾರಾಟದ ವ್ಯವಸ್ಥೆಯನ್ನೂ ಮಾಡುವರು.

"ಕೆಲಸವನ್ನು ಕಡಮೆ ಮಾಡಿದ್ದರಿಂದ ೧೫ ಜನ ಕಾರ್ಯಕರ್ತರನ್ನು ಕೆಲಸದಿಂದ ಬಿಡುಗಡೆ ಮಾಡಬೇಕಾಗುವದು.

"ಈ ಧೋರಣವು ಜಾರಿಯಲ್ಲಿ ಬಂದಂದಿನಿಂದ ಖಾದೀ ಭಾಂಡಾರಗಳನ್ನು ನಡೆಸುವ ಕ್ರಮದಲ್ಲಿ ಬದಲಾವಣೆಯಾಗಲಿಕ್ಕೆ ಬೇಕೆಂದು ಗಾಂಧೀಜಿಯವರು ಹೇಳುತ್ತಲೆ ಬಂದಿರುವರು. ತದನುಸಾರವಾಗಿ ನಾವು ಕೆಲಕಡೆ ಕಲಿಸುವ ಮತ್ತು ನೇಯುವ ವ್ಯವಸ್ಥೆಯನ್ನು ಮಾಡಿದೆವು. ಆದರೆ ಇಂಥ ಬಾಹ್ಯ ಬದಲಾವಣೆಗಳಿಂದ ನಿಜವಾದ ಬದಲಾವಣೆಯಾದಂತಾಗದು. ನಮ್ಮ ಮನೋವೃತ್ತಿಯಲ್ಲಿಯೇ ಬದಲಾವಣೆ ಅತ್ಯವಶ್ಯವೆಂದು ನಮಗನಿಸಿತು. ಆದುದರಿಂದ ಕಾರ್ಯಕರ್ತರ ಪರೀಕ್ಷೆ ಮತ್ತು ಇಂಥ ಉಳಿದ ಸುಧಾರಣೆಗಳು ಜಾರಿಯಲ್ಲಿ ಬಂದವು.

"ಇಷ್ಟೆಲ್ಲ ಬದಲಾವಣೆಗಳನ್ನು ಮಾಡಿದ್ದರೂ ನಮ್ಮ ಉದ್ದೇಶ ಸಫಲ ಮಾಡಿಕೊಳ್ಳುವಲ್ಲಿ ನಾವು ಸಮರ್ಥರಾಗಿಲ್ಲ. ಖಾದಿಧಾರಣವು ಒಂದು ಬಗೆಯ 'ಡೌಲು' ಎಂದು ಗಿರಾಕಿಗಳು ಭಾವಿಸುವಾಗ ಖಾದೀ ಭಾಂಡಾರಗಳು ಕೇವಲ ವ್ಯವಹಾರದ ಸ್ಥಳಗಳಾಗಿದ್ದವು. ಅದರಿಂದು ಖಾದೀ ಭಾಂಡಾರಗಳು ಖಾದಿ ಧಾರಿಗಳ ಮನೋವೃತ್ತಿಯಲ್ಲಿ ಬದಲಾವಣೆ ಮಾಡಬಯಸುತ್ತವೆ. ಇನ್ನು ಮುಂದೆ ಭಾಂಡಾರಗಳು ಮಾರಾಟ ಕೇಂದ್ರಗಳಾಗಿ ಉಳಿಯಬಯಸುವದಿಲ್ಲ. ಖಾದೀ ಉತ್ಪಾದನದ ಎಲ್ಲ ವಿಧಾನಗಳ ಬಗ್ಗೆ ಶಿಕ್ಷಣ ಕೊಡುವ ಕೇಂದ್ರಗಳಾಗಬೇಕೆಂದು ಅವುಗಳ ಹಂಬಲ. ನೇಕಾರರ ಮತ್ತು ಉಳಿದ ಕಲಾಕೌಶಲರ ಆಕರ್ಷಣದ ಸ್ಥಳಗಳಾಗಿ ಪರಿಣಮಿಸಬೇಕೆಂದು ಈ ಭಾಂಡಾರಗಳ ಬಯಕೆ. ಈ ಧ್ಯೇಯ ಸಾಧನೆಗಾಗಿ ನಾವು ಅವಶ್ಯಕ ಬದಲಾವಣೆಗಳನ್ನು ಖತಿಗೊಳ್ಳದೆ ಮಾಡತಕ್ಕದ್ದು. ಹಾಗೆ ಮಾಡುತಿರುವಾಗಲೆ ಮುಂಬಯಿಯಲ್ಲಿಯ ಖಾದಿ ಧಾರಿಗಳ ಮನೋವೃತ್ತಿಯಲ್ಲಿಯೂ ಬದಲಾವಣೆಯನ್ನು ಮಾಡತಕ್ಕದ್ದು. ಆಗ ಮಾತ್ರ ಭಾಂಡಾರಗಳು ನಿಜವಾದ ಕಾರ್ಯ ಮಾಡಿದಂತಾಗುವದು. ನಮ್ಮೀ ಪ್ರಯತ್ನದಲ್ಲಿ ಮುಂಬಯಿಯಲ್ಲಿಯ ಗಿರಾಕಿಗಳು ನಮಗೆ ನಿಷ್ಠರಾಗಿ ಉಳಿಯತಕ್ಕದ್ದೆಂದು ನಾವು ಅಪೇಕ್ಷಿಸುತ್ತೇವೆ."

ಈ ಲೇಖದಲ್ಲಿ ಹೇಳಿದ ಉದ್ದೇಶದ ಯಶಸ್ಸು ಕಾರ್ಯಕರ್ತರ ವಿಶ್ವಾಸ, ಜಾಣ್ಮೆ ಮತ್ತು ಸಾಮರ್ಥ್ಯವನ್ನೆ ಅವಲಂಬಿಸುತಿದೆಂಬುದನ್ನು ವಾಚಕರು ಗಮನಿಸಬೇಕು.

ಮುಂಬಯಿ ಮೋ. ಕ. ಗಾಂಧಿ
೬-೭-೪೬

(ಹರಿಜನ ಬಂಧುವಿನಿಂದ)

ಹಿಂದೀ ಮತ್ತು ಉರ್ದುವಿನಲ್ಲಿಯ ಭೇದ

ಶ್ರೀ ರಾಮ ನರೇಶ ತ್ರಿಪಾಠಿಯವರ ಪರಿಚಯ ನನಗೆ ಸಾಕಷ್ಟಿದೆ. ಒಂದು ದಿನ ಅವರು ಮಸೂರಿಯಲ್ಲಿ ನನ್ನನ್ನು ಕಾಣಲು ಬಂದರು. ಹಿಂದುಸ್ಥಾನಿಯ ಬಗ್ಗೆ ನಾನು ನಡೆಸಿದ ಪ್ರಚಾರಕ್ಕಾಗಿ ನನ್ನನ್ನು ಅವರು ದೂರಬಹುದೆಂದು ನಾನೆಣಿಸಿ ಅದಕ್ಕಾಗಿ ಪೂರ್ಣ ತಯಾರಾಗಿದ್ದೆನು. ಆದರೆ ನನ್ನ ಅಪೇಕ್ಷೆಗೆ ಅವರು ತೀರ ವಿರುದ್ಧವಾಗಿಯೆ ವರ್ತಿಸಿದರು. ಹಿಂದೀ ಮತ್ತು ಉರ್ದುವಿನ ಯೋಗ್ಯ ಮಿಶ್ರಣದಿಂದ ವಿಶುದ್ಧ ಹಿಂದುಸ್ತಾನಿಯು ಬಳಕೆಯಲ್ಲಿ ಬರುವದೆಂದು ನನಗೆನಿಸಿದರೆ ನನ್ನೀ ಪ್ರಯತ್ನದಲ್ಲಿ ಉರ್ದುವಿನಿಂದ ಹೆಚ್ಚು ಸಹಾಯ ಪಡೆಯಬಹುದೆಂದು ಅವರು ಅಭಿಪ್ರಾಯಪಟ್ಟರು. ಆದರೆ ಸಧ್ಯದ ಹಿಂದೀ ಮತ್ತು ಉರ್ದುವಿನಲ್ಲಿ ಸಂಸ್ಕೃತ ಮತ್ತು ಅರಬ್ಬಿ ಇಲ್ಲವೆ ಪರ್ಶಿಯನ್ ಶಬ್ದಗಳ ಅಸ್ವಾಭಾವಿಕ ಶಬ್ದಗಳನ್ನು ಸೇರಿಸುವ ತಪ್ಪು ಪ್ರಯತ್ನಗಳು ನಡೆದಿವೆಂಬ ಮಾತಿನ ಮನವರಿಕೆ ನನಗಾದರೆ ಸಾಕೆಂದು ಅವರ ಆಶಯವಾಗಿತ್ತು. ಅದೇ ರೀತಿಯಾಗಿ ಮೂಲ ಉರ್ದುವಿನ ಅಂದಗೆಡಿಸುವದು ತಪ್ಪು. ಇಷ್ಟೊಂದು ಧ್ಯೇಯವಿಟ್ಟುಕೊಂಡ ಹಿಂದುಸ್ತಾನಿಯನ್ನು ಪ್ರಚಾರ ಭಾಷೆಯನ್ನಾಗಿ ಮಾಡಬಹುದಾಗಿದೆ. ಕೆಲ ನಿರ್ದಿಷ್ಟ ಉದಾಹರಣೆಗಳನ್ನು ಕೊಡಿರಿ ಅಂದರೆ ನಿಮ್ಮ ಅರ್ಥವು ನನಗೆ ಪೂರ್ಣ ಅವಗತವಾಗಬಹುದೆಂದು ನಾನು ಕೇಳಿದೆ. ಅವರು ಸ್ವಲ್ಪ ತಡೆದರು. ಕೂಡಲೆ ಅಂಥ ಉದಾಹರಣೆಗಳನ್ನು ಕೊಡಲು ಅವರಿಗೆ ಸ್ವಲ್ಪ ಕಠಿನವೆನಿಸಿತೆಂದು ತೋರುತ್ತದೆ. ಆದುದರಿಂದ ಬರೆಹದಲ್ಲಿ ಕೆಲ ಉದಾಹರಣೆಗಳನ್ನು ಕಳಿಸಿಕೊಡಬೇಕೆಂದು ನಾನವರನ್ನು ಬಿನ್ನವಿಸಿಕೊಂಡೆ. ತತ್ಪರಿಣಾಮ ಕೆಳಗಿನದಾಗಿದೆ.

"ಹಿಂದೀ ಮತ್ತು ಉರ್ದುವಿನ ರೂಪದಲ್ಲಿಯ ಭೇದವನ್ನು ಬರೆಹದಲ್ಲಿ ತೋರಿಸಿರೆಂದು ನೀವು ಕೇಳಿದ್ದಿರಿ. ಆದರೆ ಅದನ್ನು ಚಿರಾನುಭವದಿಂದ ಸ್ಪಷ್ಟವಾಗಿ ವಿವರಿಸಬಹುದೆಂದು ನನಗೆ ತೋರ್ರುತ್ತದೆ. ಹೊರಗಿನ ಉದಾಹರಣೆಗಳನ್ನೆಷ್ಟೇ ಕೊಟ್ಟರೂ ಉದ್ದೇಶಕ್ಕೆ ಉತ್ತರವಾಗಲಾರದು. ಆದರೂ ಒಂದು ಸೂಚನೆಯನ್ನು ನಾನು ಮಾಡಬಯಸುತ್ತೇನೆ. ನಿಮ್ಮ "ಹರಿಜನದಲ್ಲಿ" ಯ ನಿಮ್ಮ ಯಾವದೇ ಒಂದು ಇಂಗ್ಲೀಶ ಲೇಖದಲ್ಲಿಯ ಒಂದು ಪ್ಯಾರಾವನ್ನು ಸರಳ ಹಿಂದೀ ಮತ್ತು ಸರಳ ಉರ್ದುವಿನಲ್ಲಿ ಅನುವಾದಿಸಿರೆಂದು ಇಬ್ಬರು ತಜ್ಞರಿಗೆ ನಾವು ಕೇಳಿದರೆ ಅದರಲ್ಲಿಯ ಭೇದ ನಿಮಗೆ ಕೂಡಲೆ ಗೊತ್ತಾಗುವದು.

"ನಿಮಗೆ ಭೆಟ್ಟಿಯಾದ ದಿನ ನಾನು ಹಿಂದಿಗಿಂತ ಉರ್ದು ಹೆಚ್ಚು ಸಂಸ್ಕಾರ ಹೊಂದಿದೆಂದು ನನ್ನ ಅಭಿಪ್ರಾಯವಾಗಿದೆಂದು ಹೇಳಿದ್ದೆನು. ನನ್ನ ಮುದ್ದೆಯ ಸಮರ್ಥನೆಗಾಗಿ ನಾನೊಂದು ಉದಾಹರಣೆ ಹೇಳುತ್ತೇನೆ. ಪ್ರಸಿದ್ಧ ಲೇಖಕನ 'ಸಮಝುಮೆ ನ ಆನೇಸೆ ಘಬರಾಹಟಸೀ ಲಗನೆ ಲಗತೀ ಹೈ' ಎಂಬ ವಾಕ್ಯವನ್ನೆ ತಗೆದುಕೊಳ್ಳಿರಿ. ಉರ್ದುವಿನಲ್ಲಿ 'ಲಗತಿ' ಎಂಬ ಶಬ್ದವನ್ನು ಇಲ್ಲಿ ಉಪಯೋಗಿಸಲಿಕ್ಕಾಗದು. ಘಬರಾಹಟ ಅತೀ ಇಲ್ಲವೆ ಘಬರಾಹಟ ಪೈದಾ ಹೋತೀ ಹೈ, ಎಂಬುದು ಸರಿಯಾದ ರೂಪವಾಗುವದು. ಉರ್ದುವಿನ ಯಾವದೇ ಪ್ರಸಿದ್ಧ ಲೇಖಕನು ತಪ್ಪು ಪದಪ್ರಯೋಗ ಮಾಡಿದ ಅಪರಾಧ ಮಾಡಿಲ್ಲ. ಅವನು ಹಾಗೆ ಮಾಡಿದ್ದಾದರೆ ಅವರ ವಿರುದ್ಧ ಕಟು ಟೀಕೆಯಾಗುವದು. ಹಿಂದೀಯಲ್ಲಿ ಸುಧಾರಣೆ ಮಾಡುವ ವಿಶಿಷ್ಟ ಚಳವಳಿ ನಡೆದಿಲ್ಲ. ನಿಜವಾಗಿ ಹೇಳಬೇಕಾದರೆ ಹಿಂದಿಗೆ ಇಂದು ಅತ್ಯುತ್ತಮ ಸಹಾಯ ಮಾಡಬಯಸಿದರೆ ಕೆಲ ವಿಶಿಷ್ಟ ಉರ್ದು ಪುಸ್ತಕಗಳನ್ನು ನಾಗರಿ ಲಿಪಿಯಲ್ಲಿ ಪ್ರಸಿದ್ಧ ಮಾಡತಕ್ಕದ್ದು. ಕಳೆದ ಅನೇಕ ಶತಮಾನಗಳಿಂದ ಉರ್ದು ಭಾಷೆಯ ಸುಧಾರಣೆ ಮತ್ತು ಸಂಸ್ಕರಣೆಗಾಗಿ ಉರ್ದು ಗದ್ಯಪದ್ಯ ಲೇಖಕರು ನಡೆಸಿದ ಅವಿರತ ಪ್ರಯತ್ನದ ಲಾಭವನ್ನು ಹಿಂದೀ ಪ್ರೇಮಿಗಳು ಈ ರೀತಿ ಸಹಜವಾಗಿ ಪಡೆಯಬಹುದು. ಮತ್ತು ಇಂಥ ಪ್ರಯೋಗದಿಂದ ಹಿಂದುಸ್ತಾನಿಯು ಸ್ವಾಭಾವಿಕವಾಗಿ ಹೊರಹೊಮ್ಮುವದೆಂದು ನನ್ನ ನಂಬಿಕೆ."

ಈ ಪತ್ರ ವಿಮರ್ಶಿಸಲು ಯೋಗ್ಯವಾಗಿದೆ. ನನಗೆ ಎರಡೂ ಭಾಷೆಗಳ ಮೇಲೆ ಪ್ರೇಮ. ಆದರೆ ಯಾವುದೊಂದು ಭಾಷೆಯಲ್ಲಿಯೂ ನಾನು ತಜ್ಞನಾಗಿರುವದಿಲ್ಲ. ಹಿಂದಿಯ ಬಗ್ಗೆ ನನ್ನ ಜ್ಞಾನ ಬಹಳ ಕಡಮೆ. ಪುಸ್ತಕಗಳಿಂದ ಹಿಂದಿಯ ಅಭ್ಯಾಸ ಮಾಡುವ ಸಮಯ ನನಗೆ ದೊರೆತಿಲ್ಲ. ನನ್ನ ಹೇಳಿಕೆಯಂತೆ ಮತ್ತು ಆಶೀರ್ವಾದ ಪಡೆದು ಹಿಂದೀ ಪ್ರಚಾರಕ್ಕಾಗಿ ಕೆಲ ವರ್ಷಗಳ ಹಿಂದೆ ಮದ್ರಾಸಕ್ಕೆ ಹೋಗಿದ್ದ ನನ್ನ ಮಗ ದೇವದಾಸನಿಗೆ ನನ್ನಕಿಂತ ಬಹಳ ಚಲೊ ಹಿಂದೀ ಬರುತ್ತದೆ. ನನ್ನಕಿಂತ ಹೆಚ್ಚು ಹಿಂದೀ ಅಭ್ಯಾಸ ಮಾಡಿದ ಅನೇಕ ಜನರ ಉದಾಹರಣೆಗಳನ್ನು ಕೊಡಬಲ್ಲೆನು. ಉರ್ದು ಭಾಷೆಯ ಜ್ಞಾನವಂತೂ ಹಿಂದಿಗಿಂತ ಬಹಳ ಕಡಮೆಯಿದೆ. ಹಿಂದೀ ಲಿಪಿಯ ಪರಿಚಯ ನನಗೆ ಬಾಲ್ಯದಿಂದ ಇದೆ. ಉರ್ದುವನ್ನು ಕಲಿಯಬೇಕಾದರೆ ನನಗೆ ಪರಿಶ್ರಮ ಪಡಬೇಕಾಯಿತು ಮತ್ತು ಭಾಷೆಯ ಜ್ಞಾನವಿಲ್ಲದ್ದರಿಂದ ಓದಲು ಬಹಳ ಕಠಿನ ಹೋಗುತ್ತದೆ. ಅಲ್ಲದೆ ಸುಲಭವಾಗಿ ಉರ್ದು ಲಿಪಿಯಲ್ಲಿ ಬರೆಯಲೂ ನಾನಸಮರ್ಥ. ಭಾಷೆಯ ಪರಿಚಯ ಇಷ್ಟು ಕಡಮೆ ಇದ್ದುದರಿಂದ ನಾನು ಯಾವದನ್ನು ಹೀಗೆಯೆ ಎಂದು ಹೇಳಲಾರೆನು ಆದರೆ- ಹಿಂದೀ ಮತ್ತು ಉರ್ದು ಎರಡೂ ಭಾಷೆಗಳ ಮೇಲೆ ನನಗೆ ಸಂಪೂರ್ಣ ನಿಷ್ಪಕ್ಷಪಾತ ಪ್ರೇಮವಿದೆ. ಆದುದರಿಂದ ಪರಮಾತ್ಮನ ಕೃಪೆ ಇದ್ದರೆ ಎರಡೂ ಭಾಷೆಗಳ ತಜ್ಞರು ನನ್ನ ಪ್ರಯತ್ನವನ್ನು ಯಶಸ್ವಿ ಮಾಡುವರೆಂದು ನಾನು ಆಸಿಸುತ್ತೇನೆ. ಈ ಕಾರಣಕ್ಕಾಗಿ ಶ್ರೀ ತ್ರಿಪಾಠಿಯವರ ಪತ್ರವನ್ನು ನಾನು ಪ್ರಸಿದ್ಧಿಸಿರುವೆನು. ನನ್ನ ಪ್ರಯತ್ನದಲ್ಲಿ ಅವರು ಮತ್ತು ಉಳಿದವರು ಸಹಾಯ ಮಾಡುವ ಸ್ಫೂರ್ತಿಯನ್ನು ಪಡೆಯಲೆಂಬುದೆ ಅದರ ಉದ್ದೇಶ.

ಉರ್ದುವಿನಂತೆ ಹಿಂದಿಯ ಸಂಸ್ಕರಣಕ್ಕಾಗಿ ಪ್ರಯತ್ನಿಸಿದ್ದಿಲ್ಲೆಂದು ಹಿಂದೀ ಭಾಷೆಯ ಉಳಿದ ಪ್ರೇಮಿಗಳು ನನಗೆ ಹೇಳಿದ್ದುಂಟು. ಇವೆರಡರಲ್ಲಿ ಅನವಶ್ಯಕ ಸ್ಪರ್ಧೆಯಾಗಬಾರದು ಮೂಲತಃ ಒಂದೇ ಇವೆರಡೂ ಕೋಟ್ಯವಧಿ ಜನರುಹಿಂದುಸ್ತಾನಿಯನ್ನು ಮಾತಾಡುವರೆಂದು ಜನರು ತಿಳಿದುಕೊಂಡರೆ ಮತ್ತು ಜನಸಾಮಾನ್ಯರಿಗಾಗಿ ಭಾಷಾತಜ್ಞರು ಮತ್ತು ಅದಕ್ಕಾಗಿ ಪ್ರಯತ್ನಿಸುವದು ಕರ್ತವ್ಯವೆಂದು ಭಾವಿಸಿದ್ದಾದರೆ ಪ್ರಗತಿಯು ಭರದಿಂದ ಅಗುವದೇಬಗ್ಗೆ ನನಗೆ ಸಂದೇಹವಿಲ್ಲ.

ಪುಣೆ ಮೋ. ಕ. ಗಾಂಧಿ
೩—೭—೪೬

(ಹರಿಜನ ಬಂಧುವಿನಿಂದ)

ರಿಕ್ಷಾ ಎಳೆಯುವವರು

(೯ ನೇ ಪುಟದಿಂದ)

ವಿದ್ಯಮಾನವನ್ನು ನಾವು ಮರೆಯಬಾರದು. ಮದುರೆಯ ನಗರ ಸಭೆಯ ಕಮೀಶನರರು ನನ್ನ ಪ್ರಶ್ನಮಾಲಿಕೆಗೆ ಉತ್ತರವೀಯುತ್ತ ನಮ್ಮ ಅಂತಿಮ ಉದ್ದೇಶ. ಈ ಬಗೆಯ ವಾಹನ ಸೌಕರ್ಯವನ್ನು ರದ್ದುಗೊಳಿಸುವದೇ ಇರಬೇಕೆಂದೂ ಅದು ಮಾನವ ಅಭಿಮಾನಕ್ಕೆ ಅಪಮಾನಕಾರಕವಾದುದೆಂದೂ ಹೇಳಿದ್ದು ಉಚಿತವೇ ಆಗಿದೆ. ಹಾಗೆ ಹೇಳಿವಾಗ ಅವರು ಎಲ್ಲ ವಿವೇಕಶೀಲ ಜನರ ಭಾವನೆಗನ್ನೇ ಹೊರಗೆಡಹಿದ್ದಾರೆಂದು ಹೇಳಲಡ್ಡಿಯಿಲ್ಲ. ಈ ಹೇಳಿಕೆಯ ಪ್ರತಿಯೊಂದು ಶಬ್ದವೂ ಸತ್ಯದಿಂದ ಸಂಚಿತವಾಗಿದೆ. ಸಾರ್ವತ್ರಿಕ ಅಭಿಪ್ರಾಯದ ಸಾರವಾದ ಜಿನ್ ಮತ್ತು ಸಾಯಕಲ್ ರಿಕ್ಷಾಗಳನ್ನು ಶೀಘ್ರದಲ್ಲಿಯೇ ರದ್ದುಗೊಳಿಸುವ ಯೋಜನೆಯಾಗಬೇಕೆಂದೇ ಇದೆ. ಎಲ್ಲ ನಗರಗಳಲ್ಲಿಯೂ ಸಂಘಟಿತವಾಹನ ಸೌಕರ್ಯದ ಅಂಗವಾಗಿ ಹಗುರಾದ ಮೋಟಾರ ರಿಕ್ಷಾಗಳನ್ನು ಪ್ರಚಾರಕ್ಕೆ ತಂದರೆ ರಿಕ್ಷಾ ಎಳೆಯುವ ಕಲಂಕ ದೂರವಾಗಿ ಇಂದಿನ ರಿಕ್ಷಾವಾಲನು ನಾಳೆಯ ಮೋಟಾರ ರಿಕ್ಷಾವಾಲನಾಗಿ ರೂಪುಗೊಳ್ಳಬಲ್ಲನು"

ಕೊನೆಗೊಮ್ಮೆ ಸರಕಾರದ ಲಕ್ಷ ಈ ಕಲಂಕದ ಕಡೆ ಹೊರಳಿದ್ದು ಶುಭಲಕ್ಷಣ. ಸಾಮಾನ್ಯ ಜನತೆ ಇನ್ನೂ ಅಸಾಧ್ಯ ಔದಾಸೀನ್ಯದಲ್ಲಿ ಮುಳುಗಿದೆ. ಪಷ್ಟಪುಷ್ಟ ಯುವಕರನ್ನು ತೇಕುತ್ತಿರುವ ರಿಕ್ಷಾವಾಲರು ಗುಡ್ಡದ ಮೇಲೆ ಎಳೆಯುತ್ತ ಹೋಗುವದನ್ನು ನೋಡುವದು ದುಃಖದಾಯಕವಾದ ದೃಶ್ಯ. ಅದು ಆರ್ಥಿಕ ಸಂಕಷ್ಟಗಳಿಂದ ವಿವರವಾಗಿ ಈ ಕೆಲಸವನ್ನು ಕೈಕೊಂಡ ಪೀಡಿತ ಜನರಷ್ಟೇ ಅವರ ಮೇಲೆ ಸವಾರಿ ಮಾಡುವವರ ಕೀಳ್ಮೆಯನ್ನು ಇದು ಪ್ರದರ್ಶಿಸುತ್ತದೆ.

೨೯—೬—೪೬ ಅ. ಕಾ.

೮ ನೇ ಪುಟದಿಂದ

ಬಹುದು. ಹಣಕಾಸಿನ ಮೂಲಭೂತ ತತ್ವಗಳನ್ನು ನಾವು ಅನುಸರಿಸಿದ್ದಾದರೆ ಕೈಯಿಂದ ತಯಾರಾಗುತಿರುವ ವಸ್ತುಗಳ ಧಾರಣೆಗಳನ್ನು ನಿಯಂತ್ರಿಸದೆ ಇಷ್ಟವಾದ ಸಂಪತ್ತಿಯ ವಿನಿಯೋಗಕ್ಕೆ ತಡೆಯನ್ನುಂಟು ಮಾಡುವದರಿಂದ ಅಲಿಪ್ತರಾಗಬೇಕು.

ಸಾರಾಸಾರ ವಿಚಾರ ಮಾಡದೆ ಧಾರಣೆ ನಿಯಂತ್ರಿಸಿ ಅನೇಕ ಪ್ರಾಂತಿಕ ಸರಕಾರಗಳು ಗ್ರಾಮೋದ್ಯೋಗಗಳನ್ನು ಕೊಲ್ಲುತಿರುವುವು. ಎಣ್ಣೆಕಾಳುಗಳ, ಗಾಣದೆಣ್ಣೆಯ ಮತ್ತು ಹಿಂಡಿಯ ಧಾರಣೆಗಳನ್ನು ನಿಯಂತ್ರಿಸಿ ಅವರು ಗಾಣದ ಉದ್ಯೋಗವನ್ನೆ ಮುರುಕಳ ಸ್ಥಿತಿಗೆ ತಂದು ಮುಟ್ಟಿಸಿರುವರು. ನಮ್ಮ ಪ್ರಾತಿನಿಧಿಕ ಸರಕಾರಗಳು ನಿಯಂತ್ರಣಗಳ ಉಪಯೋಗವನ್ನು ಜಾಣತನದಿಂದ ಮಾಡಿ ಈ ದುಃಸ್ಥಿತಿಯನ್ನು ಹೋಗಲಾಡಿಸುವರೆಂದು ಅಪೇಕ್ಷಿಸುವುದು ಹೆಚ್ಚೆನಿಸುವದೊ ?

ಜೆ. ಸಿ. ಕು.

ಕರ್ನಾಟಕ

ಧಾರವಾಡ

ಧಾರವಾಡ ಕೆ. ಈ. ಬೋರ್ಡ ಮತ್ತು ಕೆ ಈ ಸೊಸಾಯಿಟಿಯ ಶಿಕ್ಷಣ ಸಂಸ್ಥೆಗಳ ಶಿಕ್ಷಕರಿಗಾಗಿ ಶಾರೀರಿಕ ಶಿಕ್ಷಣ ವರ್ಗವನ್ನು ಆ ಸಂಸ್ಥೆಯವರು ಇದೇ ೩ ನೇ ತಾರೀಕಿನಿಂದ ೧೫ ದಿನಗಳ ವರೆಗೆ ತೆರೆದಿರುವರು.

ಗದಗ--ಬೆಟಗೇರಿಯ ಪ್ರಮುಖ ವ್ಯಾಪಾರಸ್ಥರೂ ಮುನಸಿಪಾಲಿಟಿಯ ಹಿಂದಿನ ಅಧ್ಯಕ್ಷರೂ ಆಗಿದ್ದ ರಾವಬಹದ್ದೂರ ನಾಗೋಸಾ ಭವಾನಸಾ ಕಬಾಡಿಯವರು ೯ ನೇ ತಾರೀಕು ಮುಂಜಾನೆ ತಮ್ಮ ಮನೆಯಲ್ಲಿ ಹೃದಯವಿಕಾರದಿಂದ ನಿಧನ ಹೊಂದಿದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರು ಅನೇಕ ಸಾರ್ವಜನಿಕ ಸಂಸ್ಥೆಗಳಿಗೆ ಮುಕ್ತಹಸ್ತದಿಂದ ಧನ ಸಹಾಯ ಮಾಡಿದ್ದರು. ಮರಣ ಕಾಲಕ್ಕೆ ಇವರಿಗೆ ೫೫ ವರ್ಷ ವಯಸ್ಸಾಗಿತ್ತು.

ಮುಂಡರಗಿಯ ಶ್ರೀ ಅನ್ನದಾನೀಶ್ವರ ಪ್ರಸಾದ ನಿಲಯದ ಪ್ರಥಮ ವಾರ್ಷಿಕೋತ್ಸವ ಶ್ರೀಮಜ್ಜಗದ್ಗುರು ಕೊಪ್ಪಳ ಗವಿಮಠಾಧ್ಯಕ್ಷ ಶ್ರೀಮರಿ ಶಾಂತವೀರ ಮಹಾಸ್ವಾಮಿಗಳ ಅಧ್ಯಕ್ಷತೆಯಲ್ಲಿ ಜರುಗಿತು. ಶ್ರೀಗಳು ವಿದ್ಯಾಪ್ರಸಾರಕ ಸಂಘಕ್ಕೆ ೧೦೧ ರೂ. ಕಾಣಿಕೆ ಕೊಟ್ಟರು.

ಕೆಲಸ ಮಾಡುವ ಪ್ರತಿಯೊಬ್ಬ ಸರಕಾರಿ ನೌಕರದಾರರಿಗೆ ಸಿಗುವ ತುಟ್ಟಿಭತ್ತೆಯಂತೆ ತಮಗಾದರೂ ತುಟ್ಟಿಭತ್ತೆಯನ್ನು ಸರಕಾರದವರು ಕೊಡಬೇಕೆಂದೂ ಕೇವಲ ೪-೫ ರೂಪಾಯಿ ತುಟ್ಟಿಭತ್ತೆಯಿಂದ ಏನೂ ಅಗುವದಿಲ್ಲೆಂದೂ ಮುಖ್ಯ ಮಂತ್ರಿಗಳ ಕಡೆಗೆ ಪೆನಶನ್‌ದಾರರು ಬೇಡಿಕೊಳ್ಳಬೇಕೆಂದು ನರಗುಂದ ಪೇಟಾ ಪೆನಶನ್‌ದಾರ ಸಂಘದ ಅಧ್ಯಕ್ಷರು ಬಿನ್ನವಿಸುತ್ತಾರೆ.

ರೋಣದಲ್ಲಿಯ ನ್ಯೂ ಇಂಗ್ಲಿಶ್ ಶಾಲೆಗೆ ಬರುವ ೫ ಹರಿಜನ ವಿದ್ಯಾರ್ಥಿಗಳಿಗೆ ವಿ ಸಿ ಬಸರೀಗಿಡದವರು ತಮ್ಮ ಬೋರ್ಡಿಂಗಿನಲ್ಲಿ ಊಟದ ವ್ಯವಸ್ಥೆ ಮಾಡಿರುವರು. ಈಗ ಒಬ್ಬರು ಬಂದಿದ್ದು ಇನ್ನುಳಿದ ನಾಲ್ವರನ್ನು ತೆಗೆದುಕೊಳ್ಳಲಾಗುವದು.

ಮೊದಲು ಗೊತ್ತಾದಂತೆ ಧಾರವಾಡದಲ್ಲಿ ಪ್ರಸಿದ್ಧ ಹಾರ್ಮೋನಿಯಮ ವಾದನಪಟು ಶ್ರೀ ವಾಳ್ವೇಕರ ಹನುಮಂತರಾಯರ ಸತ್ಕಾರ ಸಮಾರಂಭ ಉಸ್ತಾದ ಫಯಾಜಖಾನರ ಅಧ್ಯಕ್ಷತೆಯಲ್ಲಿ ಜರುಗಿತು. ವಾಳ್ವೇಕರರ ಮಿತ್ರರು ಅವರಿಗೆ ಮಾನಪತ್ರವನ್ನರ್ಪಿಸಿದರು. ಶ್ರೀ ಸತ್ಯಜ್ಞಾನ ಗುಡಿಯವರು ವರದಿಯನ್ನು ಹೇಳುತ್ತ ನಿಧಿಗೆ ಸಹಾಯ ಮಾಡಿದವರ ಅಭಿನಂದನ ಮಾಡಿದರು. ಅನಂತರ ಫಯಾಜಖಾನರ ಮತ್ತು ವಿಲಾಯಾತ ಹುಸೇನಖಾನರ ಗಾಯನ ಮತ್ತು ಶ್ರೀ ವಾಳ್ವೇಕರರ ಹಾರ್ಮೋನಿಯಮ ವಾದನ ಮೊದಲಾದ ಕಾರ್ಯಕ್ರಮಗಳಾದವು.

ಮುಂಬಯಿ ದಕ್ಷಿಣ ಭಾಗದ ವಿದ್ಯಾಧಿಕಾರಿಗಳಾದ ಶ್ರೀ ಎ ಖಾನರಿಗೆ ಉತ್ತರಭಾಗಕ್ಕೆ ವರ್ಗವಾಗಿದೆ.

ಹುಬ್ಬಳ್ಳಿಯಲ್ಲಿ ಕರ್ನಾಟಕ ವಿಜ್ಞಾನ ಸಂಘದ ಪ್ರಾರಂಭೋತ್ಸವ ಮುಂಬಯಿ ಶಾಸನ ಸಭೆಯ ಉಪಾಧ್ಯಕ್ಷ ಶ್ರೀ ಷಣ್ಮುಖಪ್ಪ ಅಂಗಡಿಯವರ ಅಧ್ಯಕ್ಷತೆಯಲ್ಲಿ ೬ ನೇ ತಾ., ಸಾಯಂಕಾಲ ಜರುಗಿತು. ಪ್ರಿ. ಪರಮಶಿವಯ್ಯನವರು ವಿಜ್ಞಾನದ ಬಗ್ಗೆ ಭಾಷಣ ಮಾಡಿದರು.

ಉತ್ತರಕನ್ನಡ

ಸಿದ್ದಾಪುರಕ್ಕೆ ಹೊಸದಾಗಿ ಬಂದ ಅಬಕಾರಿ ಇನಸ್ಪೆಕ್ಟರರು ಕಳ್ಳತನದಿಂದ ಸರಾಯಿ ಮಾಡುತಿದ್ದ ಒಬ್ಬ ಕಳ್ಳ ವ್ಯಾಪಾರಿಯನ್ನು ಹಿಡಿದಿದ್ದಾರೆ. ಅಲ್ಲಿ ಸರಾಯಿಯ ದೊಡ್ಡ ಕೊಡ ಹಾಗು ಕೆಲವು ಸರಾಯಿ ಬಾಟ್ಲಿಗಳು ಸಿಕ್ಕಿರುವವಂತೆ.

ಗೋಕರ್ಣ ಕಾಂಗ್ರೆಸ ಕಮಿಟಿ ಸಭೆ ಸೇರಿ ಶ್ರೀ ಗಣಪತಿ ರಾಮಚಂದ್ರಭಟ್ಟಹಿರೆ ಇವರು ಅಧ್ಯಕ್ಷರಾಗಿಯೂ ನರಸಿಂಹ ಮಹಾಬಲೇಶ್ವರ ಭಟ್ಟ ಗೋಪಿಯವರು ಉಪಾಧ್ಯಕ್ಷರಾಗಿಯೂ ಶ್ರೀ ಎಂ ಎನ್ ಧಾರೇಶ್ವರ ಹಾಗು ಶ್ರೀ ಎಸ್ ಎಂ ಬರವಣಿ ಇವರು ಜೊತೆ ಕಾರ್ಯದರ್ಶಿಗಳಾಗಿಯೂ ಆರಿಸಲ್ಪಟ್ಟರು.

ವಿಜಾಪುರ

ಬಾಗಲಕೋಟೆ ಮೆಡಿಕಲ್ ಯುನಿಯನ್ನಿನವರು ಮೊಬಾಯಿಲ್ ಹೆಲ್ಥ ಯುನಿಟ್ ಎಂಬ ಸರಕಾರದ ಯೋಜನೆಯ ಮೇರೆಗೆ ಹಳ್ಳಿಗರ ಆರೋಗ್ಯ ಆಹಾರ ಕಾಯಿಲೆ ಬಗ್ಗೆ ಇರುವ ಕುಂದು ಕೊರತೆ ನಿವಾರಿಸಲು ಸಹಾಯ ನೀಡುವ ಕಾರ್ಯ ಕೈಕೊಂಡಿದ್ದಾರೆ. ಬರಗಾಲ ಪೀಡಿತ ಭಾಗದಲ್ಲಿ ಈ ಕಾರ್ಯ ಕೈಕೊಳ್ಳಲಾಗುವದು.

ಕಮತಗಿಯ ಶ್ರೀ ಹುಚ್ಚಪ್ಪಯ್ಯನವರು ೮ನೇ ತಾರೀಕ ರಾತ್ರಿ ೧೨ ಗಂಟೆಗೆ ಲಿಂಗೈಕ್ಯರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರು ಬಹಳ ಬಲಿಷ್ಠರಿದ್ದರು. ಒಂದು ದೋಣಿಯ ಬೂಚು ತೆಗೆದು ಭಾವಿಯೊಳಗಿನ ನೀರು ಜಗ್ಗಿ ಅದನ್ನು ತುಂಬಿಸಿದ್ದರು. ಇವರ ಮರಣಕ್ಕಾಗಿ ಭಕ್ತಜನ ಮರಗುತಿರುವರು.

ಮುದ್ದೇಬಿಹಾಳ ತಾಲೂಕ ಇಂಗಳಗೇರಿಯಲ್ಲಿ ೪-೫ ವರುಷಗಳಿಂದ ಎರಡು ಬಣಗಳಿದ್ದು ಎರಡೂ ಬಣಗಳಲ್ಲಿ ಬಡೆದಾಟ ವಿಕೋಪಕ್ಕೆ ಹೋಗಿ ಕೊಲೆಯಾಗುವ ಸಂಭವವೂ ಇತ್ತು. ಇದನ್ನು ತಪ್ಪಿಸಲು ಕಾಂಗ್ರೆಸ ಕಾರ್ಯಕರ್ತರು ಮತ್ತು ಮಾಮಲೇದಾರ ಮೊದಲಾದ ಅಧಿಕಾರಿಗಳು ಅಲ್ಲಿಗೆ ಹೋಗಿ ಅವರ ಮನವಲಿಸಿ ಹಣಮಂತದೇವರ ಮುಂದೆ ಪ್ರತಿಜ್ಞೆ ತೆಗದುಕೊಳ್ಳಲಿಕ್ಕೆ ಹಚ್ಚಿದರು. ಮಾಮಲೇದಾರ ಶ್ರೀ ನಾಯಕರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಶ್ರೀ ಸಜ್ಜನ ವಕೀಲರು ಭಾಷಣ ಮಾಡಿದರು.

ಗುಳೇದಗುಡ್ಡದಲ್ಲಿಯ ವ್ಯಾಪಾರಿಗಳಾದ ಶ್ರೀ ಶಂಕರಲಾಲ ಇವರ ಅಂಗಡಿಯಲ್ಲಿ ೧೮೭೯೫ ರೂಪಾಯಿಗಳಷ್ಟು ಬೆಲೆಯ ನೂಲನ್ನು ಶ್ರೀ ಭೋಸಲೆ ಡೆ. ಸುಪರಿಂಟೆಂಡೆಂಟ ಲಂಚ ನಿವಾರಕ ಯುನಿಟ್ ಇವರು ಜಪ್ತ ಮಾಡಿರುವರು. ೨೫ ಚೀಲ ನೂಲು ಸ್ಟೇಶನ್ನಿನ ಮೇಲೆಯೇ ಸಿಕ್ಕಿರುವದು. ಇದರ ಒಡೆಯರಾರೆಂಬುದು ಇನ್ನೂ ಗೊತ್ತಾಗಿಲ್ಲ.

ಬದಾಮಿ ತಾಲೂಕ ಮುತ್ತಲಗೇರಿಯಲ್ಲಿ ಮತ್ತು ಗಲಗಲಿಯಲ್ಲಿ ಅನ್ನಛತ್ರ ಪ್ರಾರಂಭವಾಗಿವೆ. ಕಲಕತ್ತೆಯ ಗೆಳೆಯರ ಗುಂಪಿನ ದಳದ ಡಾ. ನಾಯಿಟರು ವಿಜಾಪುರ ಜಿಲ್ಹೆಯಲ್ಲಿ ಸಂಚರಿಸಿ ಅನ್ನಛತ್ರಗಳನ್ನು ನೋಡಿ ಸಂತೋಷ ಪ್ರದರ್ಶಿಸಿದರು. ಬಡ ಜನರಲ್ಲಿ ಹಂಚುವದಕ್ಕಾಗಿ ಜೀವಸತ್ವಗಳ ೧೨ ಲಕ್ಷ ಗುಳಿಗೆಗಳನ್ನು ಕಳಿಸಿ ಕೊಡುವದಾಗಿ ಆಶ್ವಾಸನ ಕೊಟ್ಟರು

ಬರಗಾಲ ಕೆಲಸದಲ್ಲಿ ದುಡಿಯುವವರಿಗೆ ಅಗ್ಗದರದಿಂದ ಮೆಣಸಿನಕಾಯಿಯನ್ನು ಪೂರೈಸಬೇಕೆಂದು ಪರಿಹಾರ ಸಮಿತಿಯವರು ನಿರ್ಧರಿಸಿದ್ದಾರೆ.

ಬಳ್ಳಾರಿ

ಉರುವಕೊಂಡದ ಶ್ರೀ ಕರಿಬಸವ ರಾಜೇಂದ್ರ ಸ್ವಾಮಿಗಳು ಚೇಳ್ಳೂರಿಕೆಗೆ ಬಂದಾಗ ಜನರು ಅಪೂರ್ವ ಉತ್ಸಾಹದಿಂದ ಅವರನ್ನು ಸ್ವಾಗತಿಸಿ ೧೦೦೧ ರೂ ಕಾಣಿಕೆ ಸಲ್ಲಿಸಿದರು. ಅದನ್ನು ದಾಸೋಹಕ್ಕಾಗಿ ಉಪಯೋಗಿಸಬೇಕೆಂದು ಸ್ವಾಮಿಗಳು ಅಪ್ಪಣೆ ಕೊಡಿಸಿದರು. ಶ್ರೀಗಳು ಏಕೀಕರಣದ ಬಗ್ಗೆ ಭಾಷಣ ಮಾಡಿದರು.

ಮದ್ರಾಸ ಸರಕಾರದ ಹರಿಜನೋದ್ಧಾರ ಹಾಗು ಪ್ರಕಟನಾ ಶಾಖೆಯ ಮಂತ್ರಿಗಳಾದ ಶ್ರೀ ವಿ ಕೂರ್ಮಯ್ಯನವರು ಬಳ್ಳಾರಿಗೆ ಬಂದು ಅಲ್ಲಿನ ಪತ್ರಿಕೋದ್ಯೋಗಿಗಳು, ಅಧಿಕಾರಿಗಳು ಮತ್ತು ಹರಿಜನರೊಡನೆ ಮಾತುಕತೆ ನಡೆಸಿದರಲ್ಲದೆ ಹರಿಜನಕೇರಿಯನ್ನೂ ಹಾಸ್ಟೆಲ್ಲನ್ನೂ ಸಂದರ್ಶಿಸಿದರು. ಕಾಮಲಾಪುರಕ್ಕೂ ಅವರು ಭೆಟ್ಟಿ ಕೊಟ್ಟರು.

ಬೆಳಗಾವಿ

ಬೆಳವಡಿಯಲ್ಲಿ ಬರಗಾಲ ಕೆಲಸ ಪ್ರಾರಂಭವಾಗಿದ್ದು ಸುಮಾರು ೨೦೦೦ ಜನ ಅಲ್ಲಿ ಕೆಲಸ ಮಾಡುತಿರುವರು. ಅವರಿಗೆ ಕಳೆದ ೧೫ ದಿನಗಳಿಂದ ಕೂಲಿ ಸಿಕ್ಕಿರುವುದಿಲ್ಲ. ಇದರಿಂದ ಬಹಳ ತೊಂದರೆಯಾಗಿದೆ. ಪ್ರತಿ ಮಂಗಳವಾರ ಸಂತೆಯಿದ್ದು ಅಂದು ಕೂಲಿಕಾರರ ಕೂಲಿ ಸಿಕ್ಕುವಂತೆ ನೋಡಿಕೊಳ್ಳಬೇಕೆಂದು ಕೂಲಿಕಾರರು ಕೇಳಿಕೊಳ್ಳುತ್ತಾರೆ.

ಅಥಣಿ ಗೋಕಾಕ ಹಾಯಸ್ಕೂಲಗಳಿಂದ ಮ್ಯಾಟ್ರಿಕಿನಲ್ಲಿ ಗಣಿತ ವಿಷಯದಲ್ಲಿ ಹೆಚ್ಚು ಗುಣ ಪಡೆದು ಉತ್ತೀರ್ಣರಾದ ಅಥಣಿ ಹಾಯಸ್ಕೂಲಿನ ವಿದ್ಯಾರ್ಥಿ ಜಿ ಎ ಕುಲಕರ್ಣಿ ಇವನಿಗೆ ನಾರಾಯಣರಾವ ಕುಲಕರ್ಣಿ ಪಾರಿತೋಷಕ ದೊರೆತಿದೆ. ಇವನಿಗೆ ಗಣಿತದಲ್ಲಿ ೧೬೫ ಗುಣಗಳು ಬಿದ್ದಿವೆ.

ಗೋಕಾವಿಯ ಜವಳಿ ವ್ಯಾಪಾರಿಗಳಾದ ಶ್ರೀ ಪರಮಶೆಟ್ಟಿ ಕಾಡಪ್ಪಾ ಪಾಟೀಲ ಇವರಿಗೆ ನಿಯಂತ್ರಿತ ದರಕ್ಕಿಂತ ಹೆಚ್ಚಿನ ಬೆಲೆಗೆ ೨॥ ವಾರ ಅರಿವೆಯನ್ನು ಮಾರಿದ ಅಪಾದನೆಗಾಗಿ ಭಾ. ಸಂ. ಕಾಯದೆಯನ್ವಯ ೧೦೦ ದಂಡ ಇಲ್ಲವೆ ೨ ತಿಂಗಳ ಸಶ್ರಮ ಶಿಕ್ಷೆ ವಿಧಿಸಲಾಯಿತು.

ಕನ್ನಡ ಸಂಸ್ಥಾನ

ಮೈಸೂರು ಸಂಸ್ಥಾನದ ಶಿರಾರಾ ತಾಲೂಕಿನಲ್ಲಿ ಪಂಡಿತ ಹೃದಯನಾಥ ಕುಂಜರುರವರು ಸಂಚಾರ ಮಾಡಿ ಜನತೆಯ ಪರಿಸ್ಥಿತಿ ಭೀಕರವಾಗಿದೆಂದೂ ಹಳ್ಳಿಗಳಲ್ಲಿ ಸೀದಾ ಪ್ರಮಾಣ ಬಹಳ ಕಡಮೆ ಹಾಗು ಅವ್ಯವಸ್ಥೆಯುದಿರುವದೆಂದೂ ತಿಳಿಸಿ ಈ ವಿಚಾರವನ್ನು ದಿವಾಣರಿಗೂ ಹೇಳುವುದಾಗಿ ತಿಳಿಸಿದರು.

ಸ್ವಾತಂತ್ರ್ಯ ಸಹಾಯಕ ಸಂಘದವರು ತಮ್ಮ ಸಂಘಕ್ಕೆ ಸೇರಿರುವ ಗ್ರಾಮಗಳ ಹೊಲಗಳಲ್ಲಿ ಬಾವಿಗಳನ್ನು ಅಗಿಸಿ ವಿದ್ಯುತ್ ಪಂಪುಗಳನ್ನು ಹಾಕಿಸಿ ರೈತರಿಗೆ ನೀರು ಒದಗಿಸಿ ಕೊಡಲು ಏರ್ಪಾಡು ಮಾಡಿ ಅದಕ್ಕೆ ತಗಲುವ ೬೦೦೦ ರೂ. ವೆಚ್ಚವನ್ನು ಸರಕಾರದವರು ಧನಸಹಾಯವೆಂದು ಒದಗಿಸಬೇಕೆಂದು ಕೇಳಿಕೊಳ್ಳುವ ನಿರ್ಣಯ ಸಂಘದ ಸಭೆಯಲ್ಲಿ ಅಂಗೀಕೃತವಾಯಿತು.

ದಾವಣಗೇರಿಯಲ್ಲಿ ಬೇಗನೆ ಪ್ರಾರಂಭವಾಗಲಿರುವ ವೀರಶೈವ ಮಹಿಳಾ ವಸತಿಗೃಹಕ್ಕಾಗಿ ಅಲ್ಲಿಯ ಪ್ರಮುಖ ವ್ಯಾಪಾರಸ್ಥರಾದ ಶ್ರೀ ಮೋಶೀ ವೀರಪ್ಪನವರು ೨೦೦೦೦ ರೂಪಾಯಿಗಳ ದೇಣಿಗೆ ಕೊಡಲೊಪ್ಪಿದ್ದಾರೆ.

ಹಿಂದುಸ್ತಾನ

ಮುಂಬಯಿ

ಮಹಾರಾಷ್ಟ್ರ ಏಕೀಕರಣ ಪರಿಷತ್ತು ಜುಲೈ ೨೮ಕ್ಕೆ ಮುಂಬಯಿಯಲ್ಲಿ ಕೂಡುವದು. ಇದಕ್ಕೆ ಶ್ರೀ ಶಂಕರರಾವ ದೇವ ಇವರು ಅಧ್ಯಕ್ಷರಾಗಲು ಒಪ್ಪಿರುವರು. ಶ್ರೀ ಎಸ್ ಕೆ ಪಾಟೀಲರು ಸ್ವಾಗತಾಧ್ಯಕ್ಷರಾಗಿರುವರು.

ಮುಂಬಯಿ ಶಾಸನ ಸಭೆ ೧೫ ಕ್ಕೆ ಪುಣೆಯಲ್ಲಿ ಪ್ರಾರಂಭವಾಗುವದು. ೨೦ ಕ್ಕೆ ಘಟನಾ ಸಮಿತಿ ಚುನಾವಣೆ ನಡೆಯುವದು. ಈ ಘಟನಾ ಸಮಿತಿಯಲ್ಲಿ ೨೧ ಸ್ಥಳಗಳಿದ್ದು ೧೯ ಸಾಮಾನ್ಯ ಹಾಗೂ ೨ ಮುಸಲ್ಮಾನ ಸ್ಥಳಗಳಿವೆ. ೨೪ ಕ್ಕೆ ಪರಿಣಾಮ ಸಾರಲಾಗುವದು.

ಹಿಂದುಸ್ತಾನದಲ್ಲಿಯ ಎಲ್ಲ ಹನ್ನೊಂದು ಪ್ರಾಂತಗಳ ಶಿಕ್ಷಣ ಮಂತ್ರಿಗಳ ಪರಿಷತ್ತನ್ನು ಮುಂಬಯಿ ಶಿಕ್ಷಣ ಮಂತ್ರಿಗಳಾದ ಶ್ರೀ ಬಿ ಜಿ ಖೇರರು ಪುಣೆಯಲ್ಲಿ ಜುಲೈ ೩೦—೩೧ ಕ್ಕೆ ಕರೆದಿದ್ದಾರೆ. ಎಲ್ಲ ಪ್ರಾಂತಗಳಿಗೂ ಸಮವಾದ ಒಂದು ಕಾರ್ಯಕ್ರಮವನ್ನು ಸಿದ್ಧಪಡಿಸುವದೇ ಈ ಪರಿಷತ್ತಿನ ಉದ್ದೇಶವಾಗಿದೆ. ಮಹಾತ್ಮಾ ಗಾಂಧಿಯವರು ಈ ಪರಿಷತ್ತಿನಲ್ಲಿ ಭಾಷಣ ಮಾಡಲಿರುವರು. ಅದೇ ಕಾಲಕ್ಕೆ ಔದ್ಯೋಗಿಕ ಮಂತ್ರಿಗಳ ಪರಿಷತ್ತು ಕೂಡಲಿದ್ದು ಗಾಂಧಿಜಿಯವರು ಅದರಲ್ಲಿಯೂ ಭಾಷಣ ಮಾಡಲಿರುವರು.

ಅಖಿಲ ಭಾರತ ಮುಸ್ಲಿಂ ಲೀಗದ ಕೌನ್ಸಿಲ್ಲಿನ ಸಭೆಯನ್ನು ಇದೇ ತಾ॥ ೨೮–೨೯ಕ್ಕೆ ಮುಂಬೈಯಲ್ಲಿ ಕರೆಯಲಾಗಿದೆ. ಮೆ. ೧೬–೨೫ ನೇ ತಾರೀಕು ಗಳಲ್ಲಿ ಬ್ರಿಟಿಶ ಮಂತ್ರಿತ್ರಯರು ಘೋಷಿಸಿದ ಯೋಜನೆಯನ್ನು ಲೀಗು ಸ್ವೀಕರಿಸಿದ ನಂತರ ಇತ್ತೀಚೆಗೆ ಹೊಸ ಘಟನೆಗಳು ಸಂಭವಿಸಿವೆ. ಇವೆಲ್ಲವನ್ನು ಪರಿಶೀಲಿಸಿ ಲೀಗ ಕೌನ್ಸಿಲ್ಲಿನವರು ತಮ್ಮ ಧೋರಣವನ್ನು ನಿರ್ಧರಿಸುವದಕ್ಕಾಗಿ ಈ ಸಭೆಯನ್ನು ಕರೆದಿದ್ದಾರೆ.

ಅಹಮದಾಬಾದದಲ್ಲಿ ರಥಯಾತ್ರೆಯಲ್ಲಿದ್ದ ಅಧಿಕಾರಿಗಳು ಮತ್ತು ಹಿಂದುಗಳು ದಾರಿಯಲ್ಲಿ ಹೋಗುತ್ತಿದ್ದ ಮುಸಲ್ಮಾನರನ್ನು ಹೊಡೆದದ್ದರಿಂದ ಗಲಭೆ ಪ್ರಾರಂಭವಾಯಿತೆಂದೂ ೨೪ ತಾಸಿನ ಕರ್ಫ್ಯೂ ಹುಕುಮು ನಿಷೇಧಾರ್ಹವಿದೆಂದೂ ಮುಂತಾಗಿ ಅ. ಭಾ. ಲೀಗ ಕಾರ್ಯ ಸಮಿತಿ ಸದಸ್ಯ ಶ್ರೀ ಚುಂದ್ರಿಗಾರರು ಪ್ರಕಟನೆ ಹೊರಡಿಸಿದ್ದಾರೆ.

ಡಾ. ಅಂಬೇಡಕರರ ದಲಿತ ವರ್ಗದ ಮಹಾಮಂಡಲದ ಸದಸ್ಯರು ಮತ್ತು ಅವರ ಅನುಯಾಯಿಗಳು ತಮ್ಮ ಮಹಾಮಂಡಳದ ಅಸ್ತಿತ್ವವನ್ನೇ ಬ್ರಿಟಿಶ್ ಶಿಷ್ಟರು ಅಲ್ಲಗಳೆದು ಮಾಡಿದ ಅನ್ಯಾಯದ ಪರಿಮಾರ್ಜನೆಗಾಗಿ ಅಹಿಂಸಾತ್ಮಕ ಸತ್ಯಾಗ್ರಹ ಹೂಡುವದಾಗಿ ನಿರ್ಧರಿಸಿದ್ದಾರೆ. ಇದೇ ೧೫ ಕ್ಕೆ ಪುಣೆಯಲ್ಲಿ ಕೂಡುವ ಶಾಸನ ಸಭೆಯ ಎದುರಿಗೆ ಈ ಸತ್ಯಾಗ್ರಹ ಪ್ರಾರಂಭವಾಗಲಿದೆ.

ಮಹಾತ್ಮಾ ಗಾಂಧಿಯವರು ೮ ನೇ ತಾರೀಕು ಸಾಯಂಪ್ರಾರ್ಥನೆಯ ಕಾಲಕ್ಕೆ ಮಾತಾಡುತ್ತ ವರ್ಲಿ ಚಾಳಗಳನ್ನು ಸುಧಾರಿಸಬೇಕೆಂದು ಬಿನ್ನವಿಸಿಕೊಂಡರು.

ಮದ್ರಾಸ ಶಾಸನ ಸಭೆಯ ಕಾಂಗ್ರೆಸ ಪಕ್ಷದ ಮುಖ್ಯ ಪ್ರತೋದರೂ ಅಂಧ್ರ ಹರಿಜನ ಸೇವಾ ಸಂಘದ ಕಾರ್ಯದರ್ಶಿಗಳೂ ಆದ ಶ್ರೀ. ಬಿ. ಎಸ್ ಮೂರ್ತಿಯವರು ಮುಂಬಯಿಗೆ ಬಂದು ಘಟನಾ ಸಮಿತಿಯಲ್ಲಿ ಅಸ್ಪೃಶ್ಯರಿಗೆ ಯೋಗ್ಯ ಪ್ರಾತಿನಿಧ್ಯ ಕೊಡಬೇಕೆಂಬದರ ಬಗ್ಗೆ ಕಾಂಗ್ರೆಸ ವರಿಷ್ಠರನ್ನು ಒತ್ತಾಯ ಪಡಿಸುತಿರುವರು.

ಮುಂಬಯಿ ಸರಕಾರದ ಒಕ್ಕಲತನ ಮಂತ್ರಿಗಳಾದ ಶ್ರೀ ಎಂ ಪಿ ಪಾಟೀಲರು ಸೊಲ್ಲಾಪುರಕ್ಕೆ ಬಂದು ನಿರ್ಜಲ ಕೃಷಿಕೇಂದ್ರ ಮುಂತಾದ್ದನ್ನು ಸಂದರ್ಶಿಸಿಕೊಂಡು ಹೋದರು.

ಮದ್ರಾಸ

ಕಾಶ್ಮೀರದಲ್ಲಿ ಪಂ. ಜವಾಹರಲಾಲರ ಬಂಧನದ ನಿಷೇಧಾರ್ಥ ಅಪ್ಪಣೆಯಿಲ್ಲದೆ ಮೆರವಣಿಗೆ ಹೊರಡಿಸಿದ್ದರೆಂದು ಮದ್ರಾಸ ಪ್ರಾಂತಿಕ ಟ್ರೇಡ ಯೂನಿಯನ್ ಕಾಂಗ್ರೆಸ ಕಾರ್ಯದರ್ಶಿ ಪಿ. ಬಾಲಚಂದ್ರ ಮೆನೆನ್ ಮೊದಲಾದ ೨೪ ಜನ ಕಾಮ್ಯುನಿಸ್ಟರ ಮೇಲೆ ಹಾಕಿದ ಖಟ್ಲೆಯನ್ನು ಹಿಂತೆಗೆದುಕೊಳ್ಳಲು ಮದ್ರಾಸ ಸರಕಾರ ವಿಧಿಸಿದೆ.

ಮದ್ರಾಸದ ಬಕಿಂಗ್ಹಾಂಮ ಮತ್ತು ಕರ್ನಾಟಿಕ ಗಿರಣಿ ಕೆಲಸಗಾರರ ಸಂಪು ಪ್ರಾರಂಭವಾಗಿ ೫ ವಾರಗಳಾಗಿದ್ದು ಇನ್ನೂ ವ್ಯಾಜ್ಯ ಬಗೆಹರಿದಿಲ್ಲ. ಗಿರಣಿಗಳ ಹತ್ತಿರ ಕ್ರಮಗೆಟ್ಟು ವರ್ತಿಸಿದನೆಂಬ ಆರೋಪದಿಂದ ಶಿಕ್ಷೆಗೆ ಗುರಿಯಾಗಿದ್ದ ಓರ್ವ ಕೂಲಿಕಾರನ ಉಳಿದ ಶಿಕ್ಷಾವಿಧಿಯನ್ನು ಸರಕಾರ ಸೂಟಬಿಟ್ಟಿದೆ ಇದೇ ಆರೋಪಕ್ಕಾಗಿ ವಿಧಿಸಲಾಗಿದ್ದ ದಂಡವನ್ನೂ ರದ್ದುಪಡಿಸಿದ್ದಾರೆ.

ಪಾಯ್ಕರಾ ಹೈಡ್ರೊ ಇಲೆಕ್ಟ್ರಿಕ್ ಯೋಜನೆಗಾಗಿ ಮದ್ರಾಸ ಸರಕಾರದವರು ೨೫೫೨೯೦೦ ರೂಪಾಯಿಗಳನ್ನು ಮಂಜೂರ ಮಾಡಿರುವರು. ಹತ್ತು ವರ್ಷಗಳ ನಂತರ ಇದು ೪೧೩೭೯೦೦೦ ರೂ. ಆಗುವದು ಪಾಯ್ಕರಾ ನದಿಗೆ ಹಾಕುವ ಒಡ್ಡಿನಿಂದ ೨ ಅಬ್ಜ ಘನಫೂಟು ನೀರು ಸಂಗ್ರಹಿಸಲ್ಪಡುವದು. ದಕ್ಷಿಣ ಭಾಗದಲ್ಲಿಯ ನೀರಿನ ಕೊರತೆಯನ್ನು ಹೋಗಲಾಡಿಸುವದಕ್ಕಾಗಿ ಆದಷ್ಟು ಬೇಗ ಈ ಯೋಜನೆಯನ್ನು ಕಾರ್ಯರೂಪದಲ್ಲಿ ತರಲಿರುವರು.

ಸಿಂಧ

ಸಿಂಧ ಸರಕಾರಪಕ್ಷದ ಖಾ. ಬ ಘಜ ಮೊಹಮ್ಮದಖಾನ ಲಘಾರಿಯವರು ಆ ಪಕ್ಷಕ್ಕೆ ರಾಜೀನಾಮೆ ಕೊಟ್ಟು ಸಯ್ಯದ ಪಕ್ಷವನ್ನು ಸೇರಿದ್ದಾರೆ ಅದೇ ರೀತಿ ಸರದಾರ ಮಹಮ್ಮದಖಾನ ಖೋಸೋರವರೂ ಸರಕಾರ ಪಕ್ಷಕ್ಕೆ ರಾಜೀನಾಮೆ ಕೊಟ್ಟಿರುವರು. ಇದರಿಂದ ಸರಕಾರ ಪಕ್ಷವು ಗಡಗಡಿಸಹತ್ತಿದೆ.

ಸಿಂಧ ಶಾಸನ ಸಭೆಯ ವಿರೋಧ ಪಕ್ಷದ ಧುರೀಣರಾದ ಜಿ. ಎಂ. ಸಯ್ಯದ ಇವರು ಗವರ್ನರರಿಗೆ ಪತ್ರ ಬರೆದು ಹಿದಾಯತುಲ್ಲಾ ಮಂತ್ರಿಮಂಡಳದ ಮೇಲೆ ಶಾಸನಸಭೆಯ ಸದಸ್ಯರ ವಿಶ್ವಾಸವಿಲ್ಲದಂತಾಗಿರುವದರಿಂದ ಅವರು ರಾಜೀನಾಮೆ ಕೊಡಬೇಕೆಂದೂ ಇಲ್ಲವೆ ಅವಿಶ್ವಾಸ ಗೊತ್ತುವಳಿ ಮಂಡಿಸುವ ಅವಕಾಶ ವಿರೋಧಿ ಪಕ್ಷದವರಿಗೆ ಕಲ್ಪಿಸಿಕೊಡಬೇಕೆಂದೂ ಕೇಳಿಕೊಂಡಿರುವರು.

ಸಿಂಧದ ಧಕ್ಕೆಯ ಸುಮಾರು ೧೦೦೦ ಕೆಲಸಗಾರರ ಸಂಪು ನಡೆದು ೭ ದಿನಗಳಾದವು. ಸಂಧಾನದ ಬಗ್ಗೆ ನಡೆದ ಮಾತುಕತೆಗಳೆಲ್ಲ ವಿಫಲವಾಗಿವೆ. ಹೊರಡಲಿರುವ ಹಡಗಗಳಿಗೆ ಈ ಸಂಪಿನಿಂದ ಅಡ್ಡಿಯಾಗಿದೆ.

ಸಿಂಧವು ತನ್ನಲ್ಲಿದ್ದ ಹೆಚ್ಚಿನ ಅಕ್ಕಿಯನ್ನು ಮುಂಬಯಿಗೆ ಕಳಿಸಿ ಅಲ್ಲಿಂದ ತನಗೆ ಬೇಕಾಗಿದ್ದ ಹತ್ತಿಬಟ್ಟೆಯನ್ನು ತರಿಸಿಕೊಳ್ಳಬೇಕೆಂದು ಬಗೆದು ಕೇಂದ್ರ ಸರಕಾರದ ಆಹಾರ ಖಾತೆಯ ಅಪ್ಪಣೆ ಕೋರಿತ್ತು. ಹಾಗೆ ಮಾಡಲು ಬರುವದಿಲ್ಲೆಂದು ಕೇಂದ್ರ ಸರಕಾರದವರು ಸಿಂಧ ಸರಕಾರಕ್ಕೆ ತಿಳಿಸಿದ್ದಾರೆ.

ಹೂರರು ಕರಾಚಿ ಮೇಲನ್ನುರುಳಿಸಲು ಕಳೆದ ವಾರ ಪ್ರಯತ್ನ ಮಾಡಿದ್ದರಿಂದ ಪೋಲೀಸರು ಸಿಂಧ ರೇಲ್ವೆಗಳಲ್ಲೆಲ್ಲ ಕಾವಲು ಮಾಡುತಿರುವರು.

ಪಂಜಾಬ

ಬ್ರಿಟಿಶ್ ಮಂತ್ರಿಗಳ ಯೋಜನೆಯನ್ನು ವಿರೋಧಿಸಲು ಸೀಖರು ಹೂಡಲಿರುವ ಹೋರಾಟದಲ್ಲಿ ತಾವು ಸರ್ವ ತ್ಯಾಗ ಮಾಡಲು ಸಿದ್ಧರಿರುವೆವೆಂಬ ಪ್ರತಿಜ್ಞಾ ಪತ್ರಿಕೆಗೆ ಎಲ್ಲ ಜಿಲ್ಲಾ ಅಕಾಲಿ ಜಥಾಗಳ ಅಧ್ಯಕ್ಷ ಹಾಗು ಕಾರ್ಯದರ್ಶಿಗಳು ಸೇರಿ ೧೦೦ ಜನರು ತಮ್ಮ ನೆತ್ತರದಿಂದ ರುಜು ಹಾಕಿದರು.

ಕೆಲ ದಿನಗಳ ಹಿಂದೆ ಲಾಹೋರದಲ್ಲಿ ಅತ್ಯುಷ್ಣದಿಂದ ೩೦ ಜನ ಮರಣ ಹೊಂದಿದ್ದರಷ್ಟೆ. ಈಗ ಮತ್ತೆ ಬಿಸಿಲು ಹೆಚ್ಚಾಗಿದ್ದು ೭ ನೇ ತಾರೀಕು ಮೂರು ಜನ ಮರಣ ಹೊಂದಿದರು. ಮೂರು ಜನರು ಎಚ್ಚರ ತಪ್ಪಿ ಬಿದ್ದರು. ಅವರನ್ನು ಅಸ್ಪತ್ರೆಯಲ್ಲಿ ಹಾಕಲಾಯಿತು. ೧೫ ಟಾಂಗಾದ ಕುದುರೆಗಳೂ ಮೂರ್ಛೆ ಹೋಗಿ ಬಿದ್ದು ಮರಣ ಹೊಂದಿದವು. ಹವೆಯಲ್ಲಿ ಇನ್ನೂ ತಂಪು ಹುಟ್ಟಿಲ್ಲ.

ಬಂಗಾಲ--ಆಸಾಮ

ಶಿಕ್ಷಣದ ವಿಷಯದಲ್ಲಿರುವ ಕೇಂದ್ರ ಸಲಹೆ ಸಮಿತಿಯ ಸೂಚನೆಗಳ ಮೇರೆಗೆ ಆಸಾಮದಲ್ಲಿ ಒತ್ತಾಯದ ಮೂಲ ಶಿಕ್ಷಣ ಪ್ರಾರಂಭಿಸಬೇಕೆಂದು ಶ್ರೀ ಗೋಪೀನಾಥ ಬಾರ್ಡೋಲಾಯ ಇವರ ಅಧ್ಯಕ್ಷತೆಯಲ್ಲಿ ಸೇರಿದ್ದ ಸಭೆಯೊಂದರಲ್ಲಿ ನಿರ್ಧರಿಸಲಾಯಿತು.

ಡಾಕಾದಲ್ಲಿ ೬ ನೇ ತಾರೀಕು ಒಬ್ಬ ಸ್ತ್ರೀಯನ್ನು ಇರಿದು ಕೊಲ್ಲಲಾಯಿತು. ಇಬ್ಬರನ್ನು ಈ ಬಗ್ಗೆ ಬಂಧಿಸಲಾಗಿದೆ. ಈ ದಂಗೆ ಸಂಭವಿಸಿದ ನವಾಬಗಂಜ ಪ್ರದೇಶಕ್ಕೆ ಸಾಮೂಹಿಕ ದಂಡ ಹೇರಲಿದ್ದಾರೆಂದು ತಿಳಿಯುತ್ತದೆ.

ಬಂಗಾಲ ಶಾಸನಸಭೆಯ ಯುರೋಪಿಯನ್ ಪಕ್ಷದವರು ಘಟನಾ ಸಮಿತಿ ಚುನಾವಣೆಯಲ್ಲಿ ಮತದಾನ ಮಾಡಬಾರದೆಂದು ನಿರ್ಧರಿಸಿದ್ದಾರೆ.

ಜಮಶೇದಪುರದಲ್ಲಿ ಉದರರೋಗದ ಹಾವಳಿ ಮಿತಿಮೀರಿದೆ. ಮಧ್ಯ ವಯಸ್ಸಿನ ಸ್ತ್ರೀ ಪುರುಷರೇ ಈ ಬೇನೆಗೆ ಅಹುತಿಯಾಗುತಿರುತ್ತಾರೆ. ಸಮ್ಮಿಶ್ರ ಸಾಸಿವೆ ಎಣ್ಣೆಯನ್ನುಪಯೋಗಿಸುವದೆ ಈ ಬೇನೆಗೆ ಕಾರಣವೆಂದು ಹೇಳಲಾಗುತ್ತದೆ.

ಬಿಹಾರ

ಬಿಹಾರ ಪ್ರಾಂತದಲ್ಲಿ ಜಮೀನದಾರ ಮತ್ತು ರೈತರ ನಡುವೆ ತಂಟೆ ಪ್ರಾರಂಭವಾಗಿದ್ದು ಜಮೀನದಾರರ ಒಡೆತನದ ಭೂಮಿಯನ್ನು ರೈತರು ಒತ್ತಾಯದಿಂದ ಸಾಗುವಳಿ ಮಾಡುತಿದ್ದಾರೆಂದು ಸುದ್ದಿ ಬಂದಿದೆ. ಈ ತಂಟೆಯಲ್ಲಿ ಕಿಸಾನ ಸಭಾ, ಕಾಂಗ್ರೆಸ ಸಾಮ್ಯವಾದಿ ಪಕ್ಷ ಮತ್ತು ರ್‍ಯಾಡಿಕಲ್ ಡೆಮಕ್ರೆಟಿಕ ಪಕ್ಷಗಳ ಕೈವಾಡವಿದೆಂದು ತಿಳಿಯುತ್ತದೆ.

ಬಿಹಾರ ಸರಕಾರದವರು ಪೋಲೀಸ ಸಿಪಾಯರ ಸಂಬಳವನ್ನು ೨೦ ರೂ. ಗಳಿಂದ ೨೫ ರೂ. ಗಳಿಗೆ ಏರಿಸುವರೆಂದೂ ಅವರ ಹೆಚ್ಚಿನ ಗ್ರೇಡ ೩೫ ಎಂದು ಗೊತ್ತುಪಡಿಸುವರೆಂದೂ ತಿಳಿಯುತ್ತದೆ. ಭತ್ತೆ ಮುಂತಾದ್ದೆಲ್ಲ ಕೂಡಿದರೆ ಪೋಲೀಸರ ಪ್ರಾರಂಭದ ಸಂಬಳ ೪೬ ರೂಪಾಯಿ ಆಗುವದು.

೧೯೪೨ ರ ಚಳವಳಿಗೆ ಸಂಬಂಧಿಸಿದ ೧೨೪ ಕೈದಿಗಳನ್ನು ಬಿಹಾರ ಸರಕಾರದವರು ಮುಕ್ತ ಮಾಡಿರುವರು. ಇವರನ್ನು ರಾಜಕೀಯ ಕೈದಿಗಳೆಂದು ಪರಿಗಣಿಸಿರಲಿಲ್ಲ. ಇನ್ನೂ ೨೦೦ ಇಂಥ ಕೈದಿಗಳು ಶಿಕ್ಷೆಯನ್ನನುಭವಿಸುತಿರುವರು.

ಖೊಟ್ಟಿ ಕರನ್ಸಿ ನೋಟುಗಳು, ಹೆಚ್ಚಾಗಿ ಶತುರಗಳು ಸಿದ್ಧಪಡಿಸಿದವು, ಬಿಹಾರದಲ್ಲಿ ಹೆಚ್ಚು ಪ್ರಮಾಣದಲ್ಲಿ ಹೊರಬರಹತ್ತಿವೆ. ರೇಲ್ವೆ ಉತ್ಪನ್ನದಲ್ಲಿಯೆ ಇವು ಹೆಚ್ಚು ಪ್ರಮಾಣದಲ್ಲಿ ಸಿಕ್ಕಹತ್ತಿವೆ.

ಹೊಸದಿಲ್ಲಿ

ದಿಲ್ಲಿ ಕಮ್ಯುನಿಸ್ಟ ಪಕ್ಷದ ಕಾರ್ಯದರ್ಶಿ ಶ್ರೀ ಎಂ. ಫರೂಕಿಯವರಿಗೆ ಭಾರತ ಸಂರಕ್ಷಣ ಕಾಯದೆಯನ್ವಯ ೬ ತಿಂಗಳ ಸಶ್ರಮ ಶಿಕ್ಷೆ ವಿಧಿಸಲಾಯಿತು. ವಿಜಯೋತ್ಸವ ಸಮಾರಂಭ ಬಹಿಷ್ಕರಿಸಬೇಕೆಂದು ಜಾಹೀರ ಸಭೆಯಲ್ಲಿ ಭಾಷಣ ಮಾಡಿದರೆಂಬ ಆರೋಪ ಇವರ ಮೇಲೆ ಇದ್ದಿತು.

ದಿಲ್ಲಿ ಜವಳಿ ಗಿರಣಿಗಳ ೧೪ ಸಾವಿರ ಕೆಲಸಗಾರರು ೮ನೇ ತಾರೀಕಿನಿಂದ ಸಂಪು ಪ್ರಾರಂಭಿಸಿದ್ದಾರೆ. ಸಂಬಳ ಮತ್ತು ತುಟ್ಟಿ ಭತ್ತೆಯ ಪ್ರಶ್ನೆಗಳನ್ನು ಮತ್ತು ಒಂದು ತಿಂಗಳ ಬೋನಸನ್ನು ಕೊಡಬೇಕೆಂಬ ತಮ್ಮ ಬೇಡಿಕೆಯನ್ನು ಮಧ್ಯಸ್ತಿಕೆಗೆ ಒಪ್ಪಿಸಲು ನಿರಾಕರಿಸಿದ್ದರಿಂದ ಸಂಪು ಪ್ರಾರಂಭವಾಗಿದೆ.

ರೇಲ್ವೆ ಕೆಲಸಗಾರರು ಮತ್ತು ರೇಲ್ವೆ ಬೋರ್ಡ ಇವರಲ್ಲಿಯ ವ್ಯಾಜ್ಯವನ್ನು ವಿಚಾರಿಸುವ ನ್ಯಾಯಮಂಡಳದ ಕೊನೆಯ ತಾರೀಕು ನವಂಬರ ೩೦ ಇದೆ. ಕೆಲಸಗಾರರ ಪರವಾಗಿ ಶ್ರೀ ಹುಮಾಯುನ ಕಬೀರ ಮತ್ತು ರೇಲ್ವೆ ಬೋರ್ಡಿನ ಪರವಾಗಿ ಸರಹದ್ದ ರೇಲ್ವೆಯ ಚಿನವಾನಿ ಇವರು ಪ್ರತಿನಿಧಿಗಳಾಗಿರುವರು.

ಹೊರಗಿನಿಂದ ತರಿಸಿದ ಗೋದಿ ಮೆಕ್ಕಿ ಜೋಳ ಮತ್ತು ಇತರ ಸಣ್ಣ ಧಾನ್ಯಗಳನ್ನು ಬಿತ್ತುವದಕ್ಕಾಗಿ ಉಪಯೋಗಿಸಬೇಡಿರೆಂದು ಒಕ್ಕಲತನ ಸಂಶೋಧನ ಖಾತೆಯವರು ಪ್ರಕಟಿಸಿದ್ದಾರೆ. ಏಕೆಂದರೆ ಆ ಕಾಳುಗಳೆಲ್ಲ ಹುಳಹತ್ತಿದ್ದಿರುವುದರಿಂದ ಬಿತ್ತಲು ಅನರ್ಹವಾಗಿವೆ.

ಕರ್ನಾಟಕ ಏಕೀಕರಣ

(೬ ನೇ ಪುಟದಿಂದ)

ಪ್ರಶ್ನೆಯ ತೀರ್ಮಾನ, ಕರ್ನಾಟಕಕ್ಕೆ ಯಾವುದು ರಾಜಧಾನಿಯಾಗಬೇಕೆಂಬ ವಿಚಾರಗಳಲ್ಲಿ ವರದಿ ಸಿದ್ಧಗೊಳಿಸುವದು, ಕರ್ನಾಟಕಕ್ಕಾಗಿ ಬಾನುಲಿ ಕೇಂದ್ರವನ್ನು ಬೇಗನೆ ಸ್ಥಾಪಿಸಲು, ಕೇಂದ್ರ ಸರಕಾರದ ಖಾತೆಗಳಲ್ಲಿ ಕನ್ನಡಕ್ಕೆ ತಕ್ಕ ಮನ್ನಣೆಯಿಲ್ಲದಿರುವದನ್ನು ನಿವಾರಿಸಲು, ಈ ಮೊದಲು ಹೇಳಿದ ರೇಲ್ವೆಗಳನ್ನು ಹಾಕಿಸಲು, ಮತ್ತು ಮದ್ರಾಸ ಸದರ್ನ ಮರಾಠಾ ರೇಲ್ವೆಯ ಹೆಸರು ಬದಲಿಸಿ ಕರ್ನಾಟಕ ಅಂಧ್ರ ರೇಲ್ವೆಯೆಂಬ ಹೆಸರಿಡಲು ಕೇಂದ್ರ ಸರಕಾರವನ್ನು ಒತ್ತಾಯಗೊಳಿಸುವದು ಈ ಸಂದರ್ಭದಲ್ಲಿ ಮಾಡಲಾಗಿರುವ ಇತರ ಸೂಚನೆಗಳು.

ಕೊನೆಯದಾಗಿ ಕೇಂದ್ರ ಸರಕಾರ ಮತ್ತು ಕರ್ನಾಟಕ ಸಮಸ್ಯೆಯ ವಿಷಯ ಬೆಳಸುತ್ತ ಏಕೀಕರಣ ಸಂಘದ ಪುಸ್ತಿಕೆಯಲ್ಲಿ, ಮುಂಬಯಿ, ಮದ್ರಾಸ, ಕೊಡಗು ಶಾಸನ ಸಭೆಗಳಲ್ಲಾದಂತೆ ಕೇಂದ್ರ ಶಾಸನ ಸಭೆಯಲ್ಲಿಯೂ ಕರ್ನಾಟಕ ಏಕೀಕರಣ ಗೊತ್ತುವಳಿ ಪಾಸಾಗುವಂತೆ ಪ್ರಯತ್ನಿಸಬೇಕು, ಗುಂತಕಲ್-ಬಳ್ಳಾರಿ-ಕಾರವಾರ ಬ್ರಾಡಗೇಜ ರೇಲ್ವೆ ಯೋಜನೆಯನ್ನು ಬೇಗನೆ ಕಾರ್ಯಕ್ಕಿಳಿಸುವಂತೆ ಒತ್ತಾಯಗೊಳಿಸಬೇಕು, ಮೊದಲಾದ ಹಲ ಸೂಚನೆಗಳು ಮಾಡಲ್ಪಟ್ಟಿವೆ.

ದಕ್ಷಿಣ ಕನ್ನಡ

ಮಂಗಳೂರು ಪ್ರಾದೇಶಿಕ ಹಿಂದೀ ಪ್ರಚಾರ ಸಮಿತಿಯ ಅಧಿವೇಶನ ೩೦—೬—೪೬ ಕ್ಕೆ ಶ್ರೀ ಯು. ಶ್ರೀನಿವಾಸ ಮಲ್ಯರ ಅಧ್ಯಕ್ಷತೆಯಲ್ಲಿ ಜರಗಿತು. ಸಂಘಟಕರಾದ ಶ್ರೀ ರಾಮಕೃಷ್ಣ ನಾವಡರು ಸಭೆಯ ಮುಂದಿಟ್ಟ ಕಾರ್ಯ ವಿವರಣೆ ನಿಯಮಾವಲಿಗಳನ್ನು ಮಂಜೂರ ಮಾಡಿದ್ದಲ್ಲದೆ, ಶ್ರೀ ವೆಂಕಟೇಶ ಪ್ರಭು, ಕಾರ್ಕಳ (ಅಧ್ಯಕ್ಷ) ಶ್ರೀ ಕಲ್ಯಾಣಿ ಡಿ ಶೆಟ್ಟಿ ಮತ್ತು ಯು ಕೇಶವರಾವ (ಉಪಾಧ್ಯಕ್ಷರು) ಶ್ರೀ ಎಸ್. ಪಿ. ಬಿ. ರೆಬೆಲೊ (ಕೋಶಾಧ್ಯಕ್ಷ) ಕೆ. ಆರ್ ನಂಜುಂಡರಾವ ಮತ್ತು ಶ್ರೀ ಎ. ಆರ್ ನಾವಡ (ಕಾರ್ಯದರ್ಶಿಗಳು) ಇವರನ್ನೊಳಗೊಂಡ ೧೨ ಜನರ ಕಾರ್ಯ ಸಮಿತಿ ರಚಿಸಲ್ಪಟ್ಟಿತು.

ಕೆಲ ತಿಂಗಳುಗಳ ಹಿಂದೆ ಉಡುಪಿಯಲ್ಲಿ ಒಂದು ಕಾಲೇಜು ಸ್ಥಾಪಿಸುವ ಸಲುವಾಗಿ ಹಣ ಸಂಗ್ರಹಿಸಲು ನೇಮಕವಾಗಿದ್ದ ಸಮಿತಿಯವರು ಈ ವರೆಗೆ ಸುಮಾರು ೨೦ ಸಾವಿರ ರೂಪಾಯಿ ಸಂಗ್ರಹಿಸಿದ್ದರು. ಅಂಥ ಕಾಲೇಜು ಸ್ಥಾಪಿಸಲು ಕನಿಷ್ಠ ೧೦ ಲಕ್ಷ ರೂಪಾಯಿ ಬೇಕಾಗಬಹುದೆಂದು ಈಗ ತಿಳಿದುಬಂದಿದ್ದು ಅಷ್ಟು ಹಣ ಕೂಡಿಸುವದು ಸಾಧ್ಯವಿಲ್ಲವೆಂದು ಮಿಸನೂಲಿ ಸಮಿತಿಯವರು ತಾ. ೨೬ ಕ್ಕೆ ಡಾ. ಮಾಧವ ಪೈ ಯವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಆ ಯೋಜನೆಯನ್ನೆ ಬಿಟ್ಟುಕೊಡಲು ನಿರ್ಣಯ ಮಾಡಿದರು. ಸಂಗ್ರಹವಾದ ಹಣವನ್ನು ಸಹಾಯಕರಿಗೆ ತಿರುಗಿ ಕೊಡಬೇಕೆಂದು ಗೊತ್ತಾಯಿತು.

ಆಹಾರ ಕಾರ್ಯದರ್ಶಿಗಳನ್ನು ನೇಮಿಸಲಾಗುವದು

ಮೈಸೂರು ವಿಧಾಯಕ ಸಭೆಯಲ್ಲಿ ಸರಕಾರದ ಹೇಳಿಕೆ

ಸರಕಾರದ ಮೇಲೆ ತೀಕ್ಷ್ಣ ಟೀಕೆ --- ಆಯವ್ಯಯ ಅಧಿವೇಶನದ ಕೊನೆ

ಮೈಸೂರು ಪ್ರಜಾ ಪ್ರತಿನಿಧಿ ಸಭೆಯಂತೆ ನ್ಯಾಯ ವಿಧಾಯಕ ಸಭೆಯ ಆಯವ್ಯಯ ಅಧಿವೇಶನವಾದರೂ ಆಹಾರ ಚರ್ಚೆಯೊಂದಿಗೆ ತಾ. ೬ ಶನಿವಾರಕ್ಕೆ ಮುಕ್ತಾಯಗೊಂಡಿತು.

ಆಹಾರ ಚರ್ಚೆಯನ್ನಾರಂಭಿಸಿದ ಆಹಾರ ಮಂತ್ರಿ ನಸರುಲ್ಲಾ ಶರೀಫರು ಯಥಾಪ್ರಕಾರ ಆಹಾರ ಕೊರತೆಯ ಹೊಣೆಯನ್ನು ಮಳೆರಾಯನ ಸೆರಗಿಗೆ ಕಟ್ಟಿ ಅಂಕಿ ಸಂಖ್ಯೆಗಳ ಬಲದಿಂದ ಸರಕಾರದ ನಿರಪರಾಧಿತ್ವವನ್ನು ಸಿದ್ಧಗೊಳಿಸಲು ಪ್ರಯತ್ನಿಸಿದರು. ಖುಷ್ಕಿಫಸಲು ಮಳೆಯ ಅಭಾವದಿಂದ ಸುತರಾಂ ಹಾಳಾಗಿ ಹೋಯಿತೆಂದೂ ಸಂಸ್ಥಾನದ ೭೦ ಲಕ್ಷ ಪ್ರಜೆಗಳಿಗೆ ವರ್ಷಕ್ಕೆ ೩೧.೪ ಲಕ್ಷ ಪಲ್ಲ ಅಕ್ಕಿ ೫೫ ಲಕ್ಷ ಪಲ್ಲ ರಾಗಿ ಮತ್ತು ೩ ಲಕ್ಷ ಪಲ್ಲ ಗೋದಿ ಬೇಕೆಂದೂ ಸಾಮಾನ್ಯವಾಗಿ ವರ್ಷಕ್ಕೆ ಮೈಸೂರಲ್ಲಿ ೫-೬ ಲಕ್ಷ ಪಲ್ಲ ಧಾನ್ಯ ಕೊರತೆ ಬೀಳುತ್ತದೆಯೆಂದೂ ಅವರು ಹೇಳಿದರು. ಸರಕಾರದವರು ಕೈಕಟ್ಟಿ ಆಶೆ ಹಚ್ಚಿಕೊಂಡು ತೆಪ್ಪಗೆ ಕುಳಿತಿಲ್ಲ. ಸಾಧ್ಯವಾದ ಎಲ್ಲ ಪ್ರಯತ್ನಗಳನ್ನು ನಡೆಸಿರುವರು. ದಿವಾಣರ ವಾಶಿಂಗಟನ್ ಯಾತ್ರೆಯ ಫಲವಾಗಿ ಸಾಮಾನ್ಯವಾಗಿ ಮೈಸೂರಿಗೆ ದೊರೆಯುತ್ತಿರುವದಲ್ಲದೆ ೩೦೦೦೦ ಟನ್ ಧಾನ್ಯ ಹೆಚ್ಚಿಗೆ ಒದಗಿಸಲು ಹಿಂದುಸ್ತಾನ ಸರಕಾರ ಒಪ್ಪಿದ್ದು ಅದರಲ್ಲಿ ೨೦೦೦೦ ಟನ್ ಈಗಾಗಲೆ ಕೈಸೇರಿದೆ. ಇತ್ಯಾದಿಯಾಗಿ ಶರೀಫರು ತಿಳಿಯಪಡಿಸಿದರು.

ಸರಕಾರದ ಯೋಜನೆ. ಕುಸಿದು ಬಿದ್ದಿದೆ

ಕಾಂಗ್ರೆಸ್ ಪಕ್ಷದ ನಾಯಕ ಶ್ರೀ ಕೆ. ಚಂಗಲರಾಯರೆಡ್ಡಿ, ಸ್ವತಂತ್ರ ಶ್ರೀ ಎಲ್ ಎಸ್ ವೆಂಕಾಜೀರಾವ ಮೊದಲಾದವರು ಸರಕಾರದ ಆಹಾರ ಧಾನ್ಯ ಸಂಗ್ರಹ ವಿತರಣ ಧೋರಣೆಗಳನ್ನು ಕಠೋರವಾಗಿ ಟೀಕಿಸಿದರು. ಯುದ್ಧಾರಂಭದಲ್ಲೇ ಆಹಾರ ಕೊರತೆಯ ಸೂಚನೆಗಳು ಕಾಣಬರುತಿದ್ದವೆಂದೂ ಆಗಲೆ ಎಚ್ಚತ್ತು ದಕ್ಷತೆ ವಹಿಸಿದ್ದರೆ ಇಂದು ಕಣ್ಣುಕಣ್ಣು ಬಿಡುವ ಪರಿಸ್ಥಿತಿ ಬರುತಿದ್ದಿಲ್ಲವೆಂದೂ ಶ್ರೀ ರೆಡ್ಡಿಯವರು ಹೇಳಿದರು. ಬ್ರಿಟಿಶ ಪತ್ರಿಕೋದ್ಯೋಗಿ ಶ್ರೀ ಎಚ್. ಎನ್. ಬ್ರೈಲ್ಸಫೋರ್ಡರು ಮೈಸೂರು ಆಹಾರ ಪರಿಸ್ಥಿತಿಯ ಭಯಾನಕತೆಯನ್ನು ಕುರಿತು ಬರೆದ ಲೇಖದ ಅಂಶಗಳನ್ನೋದಿ ಹೇಳಿ ಗ್ರಾಮಾಂತರಗಳಲ್ಲಿ ಸರಕಾರದ ಆಹಾರವಿತರಣ ಯೋಜನೆ ಪೂರ್ಣ ಕುಸಿದು ಬಿದ್ದಿದೆಯೆಂದು ಅವರು ಬರೆದುದು ಅತಿಶಯೋಕ್ತಿಯಲ್ಲೆಂದು ಶ್ರೀ ರೆಡ್ಡಿಯವರು ತೋರಿಸಿ ಕೊಟ್ಟರು ಆಹಾರ ಪರಿಸ್ಥಿತಿಯನ್ನು ರಾಜಕೀಯ ಪ್ರಶ್ನೆಯಾಗಿ ಮಾಡಲು ಕಾಂಗ್ರೆಸ್ಸಿಗೆ ಇಚ್ಛೆಯಿಲ್ಲವಾದರೂ ಜನತೆಯಿಂದ ದೂರವಾದ ಸರಕಾರಕ್ಕೆ ಆಹಾರ ಪರಿಸ್ಥಿತಿಯನ್ನು ಯಶಸ್ವಿಯಾಗಿ ಎದುರಿಸುವದು ಸಾಧ್ಯವೇ ಇಲ್ಲವೆಂದು ಅವರು ಸಾರಿದರು. ಶ್ರೀ ವೆಂಕಾಜಿರಾಯರಾದರೂ ಜನ ಬೆಂಬಲ ಪಡೆಯುವದರ ಅವಶ್ಯಕತೆಯನ್ನು ಸರಕಾರಕ್ಕೆ ಒತ್ತಿ ಹೇಳಿ ಉದಾಹರಣೆಗಾಗಿ ಕಾಂಗ್ರೆಸ್ಸಿನವರು ನಡೆಸುತಿರುವ ಪುಕ್ಕಟೆ ಭೋಜನಾಲಯಗಳು ಸರಕಾರಿ ಭೋಜನಾಲಯಗಳಿಗಿಂತ ಸುವ್ಯವಸ್ಥಿತವಾಗಿರುವದನ್ನುಲ್ಲೇಖಿಸಿದ್ದಲ್ಲದೆ ಹಳ್ಳಿಗಾಡಿನ ಆಹಾರ ಹಂಚಿಕೆಯಲ್ಲಿರುವ ಅವ್ಯವಸ್ಥೆ ಅಸಾಮರ್ಥ್ಯಗಳನ್ನು ವಿವರಿಸಿದರು. ಆಯು. ಜಿ. ಪಿ. ಯವರಾದ ಸುಂದರರಾಯರೂ ಆರೋಗ್ಯ ಮಂತ್ರಿ ಡಾ. ರಾಯನ್ನರೂ ಉತ್ತರ ಕೊಟ್ಟ ನಂತರ ಆಹಾರ ಮಂತ್ರಿ ಶರೀಫರು ಉಪಸಂಹಾರ ಭಾಷಣದಲ್ಲಿ ಆಹಾರ ಖಾತೆಯ ಪುನರ್ವ್ಯವಸ್ಥೆಯ ಭರವಸೆಯಿತ್ತು ಪ್ರತ್ಯೇಕ ಆಹಾರ ಕಾರ್ಯದರ್ಶಿಗಳೊಬ್ಬರನ್ನೂ ಹಂಚಿಕೆಯಲ್ಲಿರುವ ಲೋಪದೋಷಗಳನ್ನು ಪರಿಹರಿಸಲು ವಿಶೇಷಾಧಿಕಾರಿಯೊಬ್ಬರನ್ನೂ ನೇಮಿಸಲಾಗುವದೆಂಬುದನ್ನು ಹೊರಗೆಡಹಿದರು.

ಲೆಕ್ಕಪತ್ರಗಳ ಅವ್ಯವಸ್ಥೆ

ಜುಲೈ ೨ಕ್ಕೆ ವಿಧಾಯಕ ಸಭೆಯಲ್ಲಿ ಆಯವ್ಯಯ ಬೇಡಿಕೆಗಳ ಚರ್ಚೆಯ ಕೊನೆಯ ದಿನವಾಗಿತ್ತು. ಆ ದಿನ ಸರಕಾರಿ ಲೆಕ್ಕಪತ್ರ ಸಮಿತಿಯ ವರದಿಯ ಚರ್ಚೆ ಮತ್ತು ಹಿಂದಿನ ವರ್ಷದ ಹೆಚ್ಚಿನ ವೆಚ್ಚಗಳ ಬೇಡಿಕೆಯ ಚರ್ಚೆ ನಡೆದವು. ಸರಕಾರಿ ಲೆಕ್ಕಪತ್ರಗಳ ಸರಿಯಾದ ಪರಿಶೀಲನೆ (ಆಡಿಟ) ಆಗುತ್ತ ಇಲ್ಲವೆಂದೂ ಮುಖ್ಯವಾಗಿ ಆಹಾರಖಾತೆಯ ಲೆಕ್ಕವನ್ನೆ ಮೇಲ್ಕಂಡ ಸಮಿತಿ ಪರಿಶೀಲಿಸಿಲ್ಲವೆಂದೂ ಇದರಿಂದ ಹಣ ಅಪವ್ಯಯವಾಗುತಿದೆಯೆಂದೂ ಪ್ರತ್ಯೇಕ ಆಡಿಟಖಾತೆಯೆ ಬೇಕೆಂದೂ ಅನೇಕ ಸದಸ್ಯರು ಕಟುವಾಗಿ ಟೀಕಿಸಿದರು. ಉತ್ತರದಲ್ಲಿ ಸರಕಾರದ ಪರವಾಗಿ ಹಣಕಾಸಿನ ಕಾರ್ಯದರ್ಶಿ ರಾಘವೇಂದ್ರ ರಾಯರು ಕೆಲ ಲೋಪ ದೋಷಗಳಿರುವದನ್ನೊಪ್ಪಿಕೊಂಡು ಮುಂದೆ ಹಾಗಾಗುವದಿಲ್ಲೆಂದು ಭರವಸೆಯಿತ್ತರು. ಕಂದಾಯ ಮಂತ್ರಿ ಶ್ರೀ ಪುಲ್ಲಾರೆಡ್ಡಿಯವರು ಮರುದಿನ ಪ್ರಶ್ನೋತ್ತರ ಕಾಲದಲ್ಲಿ ಲಂಚಗುಳಿತನವನ್ನು ತಡೆಯುವ ಸಲುವಾಗಿ "ಎಫಿಶಿಯನ್ಸಿ ಆಡಿಟ" ಬಗ್ಗೆ ವಿಶೇಷಾಧಿಕಾರಿಯನ್ನು ನೇಮಿಸುವದಾಗಿ ತಿಳಿಸಿದರು.

ಗೊತ್ತುವಳಿಗಳು

ಬೇಡಿಕೆಗಳ ಮೇಲೆ ಮತದಾನವಾದ ನಂತರ ಹಲವು ನಿರ್ಣಯಗಳ ಬಗ್ಗೆ ಚರ್ಚೆಯಾಯಿತು. ಶ್ರೀ ಟಿ. ಹನುಮಯ್ಯನವರು ಹರಿಜನರಿಗೆ ವಸತಿ ಮತ್ತು ನೀರಿನ ಸೌಕರ್ಯವೊದಗಿಸಲು ೧೦ ಲಕ್ಷ ರೂಪಾಯಿ ಒದಗಿಸಬೇಕೆಂದು ಗೊತ್ತುವಳಿ ತಂದುದಕ್ಕೆ ಸಾರ್ವತ್ರಿಕ ಬೆಂಬಲ ದೊರೆತರೂ ಹಣಕಾಸಿನ ಕಾರ್ಯದರ್ಶಿಗಳು ಹಣದ ಕೊರತೆಯನ್ನು ಮುಂದೊಡ್ಡಿ ಅದರಿಂದ ತಪ್ಪಿಸಿಕೊಳ್ಳಲೆತ್ನಿಸಿದರು.

ಮೈಸೂರ ನಾಗರಿಕರಿಗೆ ಸರಕಾರದ ಏಕಪಾಕ್ಷಿಕ ಅಧಿಕಾರ ಚಾಲನೆಯಿಂದ ರಕ್ಷಣೆ ಕೊಡಲು ಬ್ರಿಟಿಶ ಹಿಂದುಸ್ತಾನದಲ್ಲಿದ್ದಂತೆ ಮೈಸೂರ ಹಾಯಕೋರ್ಟಿಗೂ "ಹೆಬಿಯಸ್ ಕಾರ್ಪಸ್" ಅರ್ಜಿಗಳನ್ನು ವಿಚಾರಿಸುವ ಅಧಿಕಾರ ವೀಯಬೇಕೆಂದು ಶ್ರೀ ಕೆ. ಹೇಜೀರಪ್ಪನವರು ತಂದ ಗೊತ್ತುವಳಿಯ ಮೇಲೆ ದೀರ್ಘ ಚರ್ಚೆ ನಡೆದು ಅದು ವಿರೋಧವಿಲ್ಲದೆ ಅಂಗೀಕೃತವಾಯಿತು. ಈಸೂರು ಶ್ರವಣಬೆಳಗುಳ ಕೈದಿಗಳ ಬಿಡುಗಡೆ, ಸಂಸ್ಥಾನದಲ್ಲಿರುವ ಗಡಿಪಾರು ಮೊದಲಾದ ಆಜ್ಞೆಗಳ ಉಪಸಂಹಾರಗಳನ್ನು ಕೋರುವ ಗೊತ್ತುವಳಿಗಳು ಸರಕಾರದ ಸಹಾನುಭೂತಿಪರ ಉತ್ತರವನ್ನು ಲಕ್ಷಿಸಿ ಹಿಂತೆಗೆದುಕೊಳ್ಳಲಾಯಿತು.

ಪರಿಶೋಧನಾಧಿಕಾರಿಯ ನೇಮಕ

ಕಂದಾಯ ಮಂತ್ರಿಗಳು ವಿಧಾಯಕ ಸಭೆಯಲ್ಲಿ ತಿಳಿಸಿದಂತೆ ಎಫಿಶಿಯನ್ಸಿ ಆಡಿಟದ ನಿರ್ದೇಶಕರಾಗಿ ಹಿಂದಿನ ಮಂತ್ರಿಗಳೂ ಈಗ ಆರ್ಥಿಕ ಸಮ್ಮೇಲನದ ಕಾರ್ಯದರ್ಶಿಗಳೂ ಆಗಿರುವ ಶ್ರೀ ಅಪ್ಪಾಜಿಗೌಡರನ್ನು ನೇಮಿಸಲಾಗಿದೆ. (ಸಂಬಳ ೧೫೦೦—೧೮೦೦) ಆರ್ಥಿಕ ಸಮ್ಮೇಲನ ಕಾರ್ಯದರ್ಶಿ ಸ್ಥಾನಕ್ಕೆ ಶ್ರೀ ಎನ್ ಮಾಧವರಾಯರನ್ನು ನೇಮಿಸಿದೆ.



ಮುಂಬಯಿ ಶೇರ ಪೇಟೆ

ಜುಲೈ ೧೦

ಟಾಟಾ ಉಕ್ಕಿನ ಪಾಲುಗಳಿಗೂ ಮುಂಬಯಿ ಡಾಯಿಂಗ ಪಾಲುಗಳಿಗೂ ಪುನಃ ಈ ವಾರ ಉಬ್ಬರ ಬಂದಿತು. ಕಳೆದ ವರದಿಯ ಸಮಯಕ್ಕೆ ೩೨೧೫—೦-೦ ರಲ್ಲಿದ್ದ ಟಾಟಾ ಡೆಫರ್ಡ ಪಾಲು ಇದೀಗ ೩೨೭೦-೦-೦ ಕ್ಕೇರಿದೆ. ಡಾಯಿಂಗು ೨೬೩೦-೦-೦ ರಿಂದ ಒಂದೊಂದೇ ಹಾರುಹಾರುತ್ತ ೨೭೪೦-೦-೦ಕ್ಕೆ ಮುಟ್ಟಿದ್ದು ವಿಶೇಷವೇ. ಟಾಟಾ ಡೆಫರ್ಡ ಪಾಲುಗಳು ಒಂದು ಸಿಟ್ಟಿನಲ್ಲಿ ೩೩೯೦-೦-೦ ರ ವರೆಗೂ ಹೋಗಿದ್ದವು. ನೂಲಿನ ದರ ಹೆಚ್ಚಿಸಿದ್ದನ್ನು ಜಾಹೀರುಪಡಿಸಿದ ಕಾರಣದಿಂದ ಜವಳಿ ಗಿರಣಿ ಪಾಲುಗಳು ಮುನ್ನುಗ್ಗಲು ಕಾರಣವಾಯಿತು. ಕೋಹಿನೂರು ೯೩೯ ರಲ್ಲಿದ್ದುದು ೯೫೭-೦-೦ ಕ್ಕೆ ಸ್ವದೇಶಿ ೮೩೪-೦—೦ ರಿಂದ ೪೪೮-೮-೦ ಕ್ಕೆ ಗೋಕಾಕ ೩೯೦—೦-೦ ರಿಂದ ೪೧೦-೦-೦ ಕ್ಕೆ ನೆಗೆದವು. ಸೆಂಚೂರಿ ೧೧೦೫-೦-೦ ರಲ್ಲಿ ಯಥಾಸ್ಥಿತಿ. ಸೆಂಟ್ರಲ್ ಇಂಡಿಯಾ ೪೬೮-೦-೦ ರಿಂದ ೪೯೧-೦-೦ ಕ್ಕೇರಿ ೪೮೯-೦-೦ ಕ್ಕಿಳಿಯಿತು. ಬೇಲಾಪುರ ಸಕ್ಕರೆ ಕಳೆದ ವಾರಾಂತ್ಯದಲ್ಲಿ ೩೩೫-೮-೦ ರ ವರೆಗೆ ಹೋದರೂ ೩೩೩-೮-೦ ಕ್ಕೆ ಮರಳಿದೆ. ಅಸೋಸಿಯೆಟೆಡ್ ಸಿಮೆಂಟ್ಸ ೨೬೧-೮-೦ ಸುತ್ತ ಯಥಾಸ್ಥಿತಿ. ಒಟ್ಟಿನ ಮೇಲೆ ಟಾಟಾ ಹಾಗು ಜವಳಿ ಪಾಲುಗಳಿಗೆ ಹೆಚ್ಚಿನ ಬೆಂಬಲವಿದೆ. ಬ್ಯಾಂಕ ಪಾಲುಗಳಲ್ಲಿ ಇಂಪೀರಿಯಲ ಎಫ್ ಸಿ. ಟಾಟಾ ಪಾಲುಗಳಿಗಿಂತಲೂ ಒಂದು ಹೆಜ್ಜೆ ಮುಂದೆಯೆ ಇದೆ. ಅದು ೩೨೫೦-೦-೦ ಕ್ಕೇರಿ ಕಳೆದ ವರದಿಯ ಸಮಯಕ್ಕಿಂತ ೧೦೦-೦-೦ ರೂಪಾಯಿ ಹೆಚ್ಚಿಗೆ ಗಳಿಸಿದೆ. ಸೆಂಟ್ರಲ್ ಬ್ಯಾಂಕಿಗೆ ಅಷ್ಟು ಬೆಂಬಲವಿಲ್ಲದೆ ಅದು ೧೪೬-೪-೦ ವರೆಗೆ ಹೋಗಿ ೧೪೫—೮—೦ ಕ್ಕಿಳಿಯಿತು. ರಿಝರ್ವ ಬ್ಯಾಂಕಾದರೂ ೧೭೬-೮-೦ ರ ಸುತ್ತ ಹೊಯ್ದಾಡುತಿದೆ.

ಸರಕಾರಿ ಸಾಲ ಪತ್ರಗಳಲ್ಲಿ ಜಿ. ಪಿ. ನೋಟು ೧೦೫-೭-೬ ಕ್ಕೇರಿ ೧೦೫-೭-೦ ರಲ್ಲಿ ಉತ್ತಮ ಸ್ಥಿತಿಯಲ್ಲಿ ಇದೆ. ೩॥ ದರದ (೧೯೪೭-೫೦) ಸಾಲ ಪತ್ರ ೧೦೨-೧೧-೦ ರಲ್ಲಿ ಯಥಾಸ್ಥಿತಿ.

ಚಿನ್ನ-ಬೆಳ್ಳಿ

ಚಿನಿವಾರ ಕಟ್ಟೆಯಲ್ಲಿ ಮಾತ್ರ ಈ ವಾರ ಬೆಲೆಗಳ ಅಧೋಗತಿ ಅಸಾಧಾರಣವಾಗಿತ್ತು. ಕೆಲ ವಾರಗಳ ಹಿಂದೆ ೧೧೮-೦-೦ ರ ವರೆಗೂ ಹೋಗಿದ್ದ ಚಿನ್ನದ ಬೆಲೆ ಇದೀಗ ೮೯—೧೦—೦ ಕೆ ಬಂದು ಬಿಟ್ಟಿದೆ. ಬೆಳ್ಳಿಯಾದರೊ ೧೫೮-೧೨-೦ ಕ್ಕಿಳಿದು ಹೋಯಿತು. ಹಿಂದುಸ್ತಾನದಲ್ಲಿ ದೊರಕಬಹುದಾದ ಲಾಭಕ್ಕೆ ಆಸೆಪಟ್ಟು ಅನೇಕ ದೇಶಗಳು ಮಾರತೊಡಗಿದುದರಿಂದ ಈ ಸ್ಥಿತಿಯೊದಗಿತು.

ಮೆಕ್ಸಿಕೋ ದೇಶದವರು ಅಗ್ಗವಾಗಿ ಚಿನ್ನ ಮಾರಲು ಸಿದ್ಧರಾದುದರಿಂದ ಅದರ ಪ್ರಯೋಜನ ಹಿಂದೀ ವ್ಯಾಪಾರಿಗಳಿಗೆ ದೊರೆಯುವ ಭರವಸೆಯಿಲ್ಲದಿದ್ದರೂ ಬೆಲೆಗಳು ಪಾತಾಳಕ್ಕಿಳಿದವು. ಯಾರೂ ಕೊಳ್ಳುವ ಎದೆಯುಳ್ಳವರಾಗಿಲ್ಲ ಸಾವರೀನ ೬೧-೮ ೦.

ಅರಳೆ

ಈ ವಾರ ಅರಳೆ ಧಾರಣೆ ತಕ್ಕಮಟ್ಟಿನ ಸುಧಾರಣೆ ತೋರಿಸಿತು. ಅಮೇರಿಕನ್ ಅರಳೆಯ ಬೆಲೆ ಹೆಚ್ಚಾಗಿರುವದರಿಂದಲೂ ಈ ವರ್ಷ ಹತ್ತಿ ಬಿತ್ತಿದ ಕ್ಷೇತ್ರದ ವಿಸ್ತಾರ ಕಳೆದ ವರ್ಷಕ್ಕಿಂತ ಕಡಿಮೆಯಾಗಿರುವದರಿಂದಲೂ ಬೆಲೆಗಳು ಏರಲು ಕಾರಣವುಂಟು. ಆದರೆ ಈ ವಿಷಯದಲ್ಲಿ ಸರಕಾರದ ಧೋರಣೆಯನ್ನೂ ಬಹಿರಂಗವಾಗಿಲ್ಲದ್ದರಿಂದಲೂ ಗಿರಣಿಗಳು ಇಳಿಮುಖ ಬೆಲೆಯ ಪ್ರಯೋಜನ ಪಡೆದುಕೊಳ್ಳುವವೆಂಬ ನಂಬಿಕೆಯಿಲ್ಲಾದ್ದರಿಂದಲೂ ಕೊಳ್ಳುವವರ ಧೈರ್ಯ ಕುಗ್ಗಿದೆ. ಜುಲೈ ವಾಯಿದೆ ೪೬೯-೪-೦ ರ ವರೆಗೂ ಹೋಗಿ ೪೬೬-೧೨-೦ ಕ್ಕೆ ಬಂದಿತು. ಸೆಪ್ಟೆಂಬರ ವಾಯಿದೆ ೪೭೬-೧೨-೦

ಎಣ್ಣೆಕಾಳು

ಶೇಂಗಾ	೧೨೩—೦—೦
ಅಗಸಿ	೨೪—೫—೦
ಅಗಸಿ ಎಣ್ಣೆ	೧೭—೭—೦

ಶಿವಮೊಗ್ಗೆ

ಜುಲೈ ೯

ದೇಶಾವರ ನಂ೧ ಮಣ೧ಕ್ಕೆ		೨೫॥ ರಿಂದ		೨೮॥	
,,	,, ೨	೨೩	,,	೨೫	
,,	,, ೩	,, ೨೦	,,	೨೩	
ಬೆಟ್ಟೆ		,, ೧೪	,,	೧೬	
ಪಂತಿ		,, ೧೫॥	,,	೧೭॥	
ಮೆಣಸು ,,		,, ೧೯	,,	೨೦	

ಬೆಟ್ಟೆ ಜಾತಿಗೆ ಒಳ್ಳೆ ಬೇಡಿಕೆಯುಂಟು.

ಸಾಂಗಲಿ ಪೇಟೆ

ಬೆಲ್ಲ ಬಂಗಾಲಿ ಮಣ ರೂ.		೧೪—೧೬
ಮೆಣಸಿನಕಾಯಿ ಹೇರು	,,	೧೮೦—೧೯೫
ಶೇಂಗಾ ಖಂಡಿ	,,	೧೦೫—೧೦೭
ದೇಶಿ ತಂಬಾಕು ಹೇರು		೧೦೦-೨೦೦
ತಂಬಾಕ ಪಂಧರಪುರಿ	”	೧೫೦—೨೫೦
ತಂಬಾಕು ಅಕೋಳ (ಹೇರು)		೨೨೫—೩೭೫

ಹುಬ್ಬಳ್ಳಿ ಪೇಟೆ

ಜಯವಂತ ಹತ್ತಿ	ನಂ. ೧	೩೦೫-೩೦೦
,,	ನಂ. ೨	೨೯೫-೩೦೦
,,	ನಂ. ೩	೨೮೫-೨೯೦
ಜಿನ		೨೨೫-೨೪೦
ಸಾಜಿನ		೨೦೫-೨೨೦
ಡಬಲರೋಲರ		೨೦೫-೨೩೦

ಥಿಯೊಡರ ಶೂಲ್ಸ್ವರ ನಾಯಕತ್ವದಲ್ಲಿ ಹಿಂದುಸ್ತಾನದ ಆಹಾರ ಪರಿಸ್ಥಿತಿಯ ಪರಿಶೀಲನೆಗಾಗಿ ಬಂದಿರುವ ಅಮೇರಿಕನ್ ಶಿಷ್ಟಮಂಡಲದವರು ತಾ. ೮ ಕ್ಕೆ ಬೆಂಗಳೂರು ಮತ್ತು ಕೋಲಾರ ಜಿಲ್ಲೆಯಲ್ಲಿ ೧೫೦ ಮೈಲು ಸಂಚಾರ ಮಾಡಿ ಪರಿಸ್ಥಿತಿಯನ್ನು ಅಭ್ಯಸಿಸಿದರು.

ಮೈಸೂರು ಶ್ರೀಕೃಷ್ಣರಾಜೇಂದ್ರ ಅರಳೆ ಗಿರಣಿಯಲ್ಲಿ ಮೇಸ್ತ್ರಿಯೊಬ್ಬನು ಕೂಲಿಕಾರನನ್ನು ಹೊಡೆದ ಸಂಬಂಧದಲ್ಲಿ ತಾ. ೫ ಕ್ಕೆ ಸಂಪು ಪ್ರಾರಂಭವಾಗಿದೆ.

ತಾ. ೨೪-೬-೪೬ ನೇ ತಾರೀಕಿನ ಸಂಚಿಕೆಯ ೧೩ ನೇ ಪುಟದಲ್ಲಿ ಪ್ರಸಿದ್ಧವಾದ ಮುಂಬಯಿ ಮುಖ್ಯ ಮಂತ್ರಿ ಶ್ರೀ ಬಿ ಜಿ ಖೇರರ ಸಂಚಾರ ಸುದ್ದಿಯ ಕೊನೆಯಲ್ಲಿ 'ಕಲೆಕ್ಟರರಲ್ಲಿ ಚಹಾಪಾನ ತೀರಿಸಿಕೊಂಡು' ಎಂದಿದ್ದುದನ್ನು ಶ್ರೀ ಕೆಂಭಾವಿಯವರಲ್ಲಿ ಚಹಾಪಾನ ತೀರಿಸಿಕೊಂಡು ಎಂದು ತಿದ್ದಿಕೊಂಡು ಓದಬೇಕಾಗಿ ಬೇಡಿಕೆ. (ಸಂ. ಕ.)

ಈ ವಾರದ ಕತೆ

ಹಳೆಯ ಪುಸ್ತಕ

(ಮೂಲ ಲೇಖಕರು: ಶ್ರೀ ಸಜನೀಕಾಂತ ದಾಸ್ ಬಿ ಎ ಅನುವಾದಕರು: ಶ್ರೀ ಎ. ವಿ ಆರ್. ರಾವ್)

[ಸಜನೀಕಾಂತ ದಾಸರು ತರುಣ ಬಂಗಾಲೀ ಲೇಖಕರು. "ಶನಿಬಾರೇರ್ ಛಿಟೇ" ಎಂಬ ಪತ್ರಿಕೆಯ ಸಂಪಾದಕರಾಗಿರುತ್ತಾರೆ. ವಿಮರ್ಶೆಯಲ್ಲಿ ಎತ್ತಿದ ಕೈ. ರವೀಂದ್ರರ ಸಾಹಿತ್ಯವು ಸಹ ಕೆಲವು ದೇಳೆ ಇವರ ತೀವ್ರ ವಿಮರ್ಶೆಗೆ ಸಿಕ್ಕುತ್ತಿದೆಂದ ಮೇಲೆ ಇತರ ಕೃತಿಗಳ ಗತಿಯೇನು? ಲೇಖನಿಯು ಖಡ್ಗಕ್ಕಿಂತ ಹರಿತ. ಸಾಹಿತ್ಯದಲ್ಲಿ ಕಂಡು ಬರುವ ತಪ್ಪುಗಳನ್ನು ದಾಕ್ಷಿಣ್ಯವಿಲ್ಲದೆ ಬಹುಲಿಗೆಳೆಯುವ ಸ್ವಭಾವ. ಹಾಸ್ಯಭರಿತ ಅನೇಕ ಸಣ್ಣ ಕತೆಗಳನ್ನು ಬರೆದಿರುತ್ತಾರೆ. ಪ್ರಸ್ತುತ ಕತೆಯ ವಸ್ತುವು ಇವರ 'ಪುರಾತನ ಬೊಯಿ' (ಹಳೇ ಪುಸ್ತಕ) ಎಂಬ ಕಥೆಯಿಂದ ತೆಗೆದುಕೊಂಡದ್ದು.]

ಸುರೇಂದ್ರ ವಿನೋದ ಚೌಧುರಿಯಂತಹವನನ್ನು ಈ ಭೂಮಿಯ ಮೇಲೆ ಸೃಷ್ಟಿಸಿದ್ದಕ್ಕಾಗಿ ಬ್ರಹ್ಮನಿಗೆ ಯಾವ ವಿಧವಾದ ಪಶ್ಚಾತ್ತಾಪಕ್ಕೂ ಎಡೆಯಿರಲಿಲ್ಲ. ಚೌಧುರಿಯಿಂದ ಯಾವಾಗಲೂ ಯಾರಿಗೂ ಯಾವ ವಿಧವಾದ ಉಪಕಾರವೂ ಇಲ್ಲವೆಂದು ಹೇಳುವವರು ಅವನಿಂದ ಅಪಕಾರವಾಗಿದೆ ಎಂದು ಮಾತ್ರ ಖಂಡಿತವಾಗಿ ಹೇಳಲಾರರು. ಹಿರಿಯರು ಸಂಪಾದಿಸಿ ಬಿಟ್ಟು ಹೋಗಿದ್ದ ಆಸ್ತಿಯನ್ನು ವೃದ್ಧಿಗೊಳಿಸಲು ಅವನು ಯಾವ ರೀತಿ ಉದಾಸೀನನಾಗಿರುತ್ತಿದ್ದನೋ ಅದರಂತೆ ಮಿತವ್ಯಯದಿಂದ ಜೀವನವನ್ನು ಸಾಗಿಸಲು ಅಷ್ಟೇ ಎಚ್ಚರಿಕೆಯಿಂದ ಇರುತ್ತಿದ್ದನು. ತಂಬಾಕನ್ನು ಯಾವ ವಿಧದಲ್ಲಿಯೂ ಉಪಯೋಗಿಸದ ಬಂಗಾಲಿಗಳಲ್ಲಿ ಇವನೂ ಒಬ್ಬ. ಸಿನಿಮಾ, ನಾಟಕಗಳೆಂದರೆ ಇವನಿಗೆ ಸೇರದು. ಮಂದಿರಗಳಿಗೂ ಇವನು ಹೋಗುತ್ತಿರಲಿಲ್ಲ. ಚಿತ್ರಗುಪ್ತರ ಲೆಕ್ಕದಲ್ಲಿ ಇವನ ಹೆಸರು ಪುಣ್ಯಶಾಲಿಗಳ ಪಟ್ಟಿಯಲ್ಲಿಯೇ ಬರೆದಿರಲಿಕ್ಕೆ ಸಾಕು. ಏಕೆಂದರೆ ಪಾಪಿಗಳ ಪಟ್ಟಿಯಲ್ಲಿ ಬರೆದಿರಲಿಕ್ಕೆ ಕಾರಣಗಳು ಸ್ವಲ್ಪ.

ಚೌಧುರಿಗೆ ಸಾಹಿತ್ಯದಲ್ಲಿ ಸ್ವಲ್ಪ ಅಭಿರುಚಿಯುಂಟು. ಇವನ ಕವಿತೆ, ಕತೆಗಳು ಮಾಸಪತ್ರಿಕೆಗಳಲ್ಲಿ ಆಗಾಗ್ಗೆ ಪ್ರಕಟವಾಗುತ್ತಿರುತ್ತವೆ. ಪತ್ರಿಕಾ ಸಂಪಾದಕರುಗಳಿಂದ ಇವನಿಗೆ ಲೇಖನಗಳನ್ನು ಬೇಡಿ ಆಗಾಗ್ಗೆ ಪತ್ರಗಳು ಬರುತ್ತಿರುತ್ತವೆ. ಇವನ ಕೃತಿಗಳು ತೀರಾ ಉತ್ತಮ ತರಗತಿಯವೆಂದು ಹೇಳಲು ಬಾರದಿದ್ದರೂ ಕೀಳೆಂದು ಅಲ್ಲಗಳೆಯುವಂತಹವುಗಳೇನೂ ಅಲ್ಲ. ಚೌಧುರಿಯು 'ಗೀತಾಂಜಲಿ'ಯಂತಹ ಪದ್ಯ ಕಾವ್ಯವನ್ನಾಗಲೀ 'ಪಾಥೇರ್ ದಾಬಿ'ಯಂತಹ ಕಾದಂಬರಿಯನ್ನಾಗಲೀ ಬರೆಯಲಾರನೆಂಬುದು ನಿಜವಾದರೂ ಇವನ ಕೃತಿಗಳಲ್ಲಿ ಒಂದು ವಿಧವಾದ ಮಾಧುರ್ಯವುಂಟು. ಚೌಧುರಿಯ ಸಾಹಿತ್ಯವು ಸಂಪ್ರದಾಯಬದ್ಧವಾದ ಬಿಗಿಯಿಂದ ಕೂಡಿದ್ದಲ್ಲ. ಕೇವಲ ಮನೋರಂಜನ ಸಾಹಿತ್ಯ. ಕವಿತೆಗಳು ಪ್ರಾಸಾಲಂಕಾರಗಳಿಂದ ಕೂಡಿದ ಗೀತಗಳಲ್ಲ; ಹೃದಯದ ಇಂಚರ ನಿನಾದ. ಶಾರದೆಯ ವೀಣೆಯಿಂದ ಹೊರಡುವ ಸ್ವರವು ಮನಮೋಹಕವಾದುದೆಂಬುದು ನಿಜವೇ ಸರಿ. ಆದರೆ ಕೋಗಿಲೆಯ ಕಂಠದಿಂದ ಹೊರಡುವ ಗಾನವು ಆನಂದದಾಯಕವಲ್ಲವೆಂದು ಹೇಳಲು ಸಾಧ್ಯವೆ? ಒಂದರೊಡನೊಂದನ್ನು ಹೋಲಿಸಲು ಸಾಧ್ಯವೇ? ಈ ಮೇಲ್ಕಂಡ ಎರಡಕ್ಕೂ ತಮ್ಮದೇ ಆದ ಒಂದೊಂದು ವೈಶಿಷ್ಟ್ಯವಿದೆ. ಒಟ್ಟಿನಲ್ಲಿ ಚೌಧುರಿಯು ರವೀಂದ್ರ, ಬಂಕಿಂಚಂದ್ರ, ಶರಚ್ಚಂದ್ರರ ಸಾಲಿನಲ್ಲಿ ಕೂಡತಕ್ಕಂತಹ ಲೇಖಕನಲ್ಲವಾದರೂ 'ಸಾಹಿತಿ' ಎಂಬ ಶಬ್ದಕ್ಕೆ ಕಳಂಕಪ್ರಾಯನಲ್ಲವೆಂಬುದು ನಿಜ.

ಚೌಧುರಿಗೆ ಪ್ರಪಂಚದಲ್ಲಿ ಆಪ್ತರು ಯಾರೂ ಇಲ್ಲವೆಂದೇ ಹೇಳಬೇಕು. ವಯಸ್ಸು ಸುಮಾರು ನಲವತ್ತು-ನಲವತ್ತೈದು ವರ್ಷಗಳಾಗಿದ್ದರೂ ಅವಿವಾಹಿತನಾಗಿಯೇ ಜೀವನವನ್ನು ನಡೆಸುತ್ತಿರುತ್ತಾನೆ. ಅವನು ಅವಿವಾಹಿತನಾಗಿರುವದಕ್ಕೆ ಕಾರಣ ಮಾತ್ರ ಅನೇಕರಿಗೆ ತಿಳಿಯದು. ಯಾರೂ ತಿಳಿದುಕೊಳ್ಳುವ ಗೋಜಿಗೂ ಹೋಗುವದಿಲ್ಲ. ಅವನ ಅನೇಕ ದಿನಗಳ ನಂಬಿಕೆಗೆ ಒಳಪಟ್ಟ ಆಳು ಕಾಲೀಚರಣನಿಗೆ ಮಾತ್ರ ಗೊತ್ತು. ಎಂದೋ ಒಂದು ದಿನ ಈ ವಿಚಾರವಾಗಿ ಕಾಲೀಚರಣನೊಡನೆ ಒಂದೆರಡು ಮಾತುಗಳನ್ನು ಆಡಿದ್ದನಂತೆ. ಅದರ ಸಾರಾಂಶ ಇಷ್ಟು: ಚೌಧುರಿಯು ತನ್ನ ಯೌವನದಲ್ಲಿ ಇಂದುಬಾಲಾ ಎಂಬೊಬ್ಬ ಹುಡುಗಿಯನ್ನು ವಿಶೇಷವಾಗಿ ಪ್ರೀತಿಸುತ್ತಿದ್ದನಂತೆ. ಇಂದು ಸಹ ಇವನನ್ನು ಅದೇ ರೀತಿಯಾಗಿ ಪ್ರೀತಿಸುತ್ತಿದ್ದಳಂತೆ. ಈ ಪರಸ್ಪರ ಪ್ರೇಮವು ವಿವಾಹದಲ್ಲಿ ರೂಪುಗೊಳ್ಳುವ ಮೊದಲೇ ಇಂದು ಮಾರಿಕಾ ಬೇನೆಗೆ ತುತ್ತಾಗಿ ಮೃತಪಟ್ಟಳಂತೆ. ಪ್ರೇಮದಲ್ಲಿ ಕ್ರೂರ ವಿಧಿಯಿಂದ ಈ ರೀತಿ ವಂಚಿತನಾದ ಚೌಧುರಿ ಇಂದುಬಾಲಾಳ ಪವಿತ್ರ ಪ್ರೇಮದ ನೆನಪಿಗಾಗಿ ತನ್ನ ಉಳಿದ ಆಯುಷ್ಯವನ್ನು ಅವಿವಾಹಿತನಾಗಿಯೇ ಕಳೆಯಬೇಕೆಂದು ನಿಶ್ಚಯಿಸಿದನಂತೆ.

ಚೌಧುರಿಯ ಸಂಸಾರವೆಂದರೆ ಇಬ್ಬರೇ. ಚೌಧುರಿ ಮತ್ತು ಕಾಲೀಚರಣ. ಕಾಲೀಚರಣನು ಚೌಧುರಿಯ ಮಂತ್ರಿ, ಕಾರ್ಯದರ್ಶಿ, ಅಡಿಗೆಯವನು, ಆಳು. ಒಟ್ಟಿನಲ್ಲಿ ಚೌಧುರಿಯ ಜೀವನ ನೌಕೆಯ ನಾವಿಕ. ಚೌಧುರಿಯ ದೈನಿಕ ಕಾರ್ಯಕ್ರಮದಲ್ಲಿ ಯಾವಾಗಲೂ ಯಾವ ವಿಧವಾದ ಬದಲಾವಣೆಯೂ ಆಗುವದಿಲ್ಲ. ಬೆಳಿಗ್ಗೆ ಎದ್ದ ತಕ್ಷಣ ಮುಖಮಾರ್ಜನೆ, ಸ್ನಾನ. ನಂತರ ಕಾಲೀಚರಣನು ಚಹ ತಯಾರಿಸಿ ತರುತ್ತಾನೆ. ಚಹ ಕುಡಿಯುತ್ತಾ ಕಾಲೀಚರಣನೊಡನೆ ಸುಮಾರು ಅರ್ಧ ಗಂಟೆಯ ವರೆಗೆ ಹರಟೆ. ಈ ಸಮಯದಲ್ಲಿ ತನ್ನ ತಲೆಯೊಳಗಿನ ಜ್ಞಾನವನ್ನೆಲ್ಲ ಅವನ ತಲೆಯೊಳಗೆ ತುಂಬಲು ಪ್ರಯತ್ನಿಸುತ್ತಾನೆ- ಕೆಲವು ವಿಷಯಗಳನ್ನಂತೂ ಪದೇ ಪದೇ ಹೇಳುತ್ತಿರುತ್ತಾನೆ. ಹಾಗೆ ಹೇಳುವದರ ಇನ್ನೊಂದು ವೈಶಿಷ್ಟ್ಯವೆಂದರೆ ಪ್ರತಿ ಸಾರಿ ಹೇಳುವಾಗಲೂ ಮೊದಲೇ ಬಾರಿ ಹೇಳುವಾಗ ಯಾವ ಉತ್ಸಾಹವಿರುತ್ತದೋ ಅದೇ ಉತ್ಸಾಹದಿಂದ ಹೇಳುತ್ತಾನೆ. ಫಲಿತಾಂಶವೆಂದರೆ ಚೌಧುರಿಯ ಈ ಉಪನ್ಯಾಸವನ್ನೆಲ್ಲ ಕಾಲೀಚರಣನು ಸಹ ಅಕ್ಷರಶಃ ಹೇಳಲು ಸಮರ್ಥನಾಗಿರುತ್ತಾನೆ. ಆದರೆ ಅದರಲ್ಲಿ ಅಡಗಿರುವ ಧ್ಯೇಯವನ್ನು ತಿಳಿದುಕೊಳ್ಳುವಷ್ಟು ಬುದ್ಧಿಸಂಸ್ಕೃತಿ ಮಾತ್ರ ಅವನಿಗಿಲ್ಲ. ಚೌಧುರಿ ಬಾಬುವಿನ ಉಪನ್ಯಾಸವು ಕಳೆ ಏರುವದರೊಳಗಾಗಿ ಕಾಲೀಚರಣನು ಅಡಿಗೆ ಮಾಡಲು ಹೊತ್ತಾಯಿತೆಂದು ಓಡುತ್ತಾನೆ. ಚೌಧುರಿಯು ಅಸಮಾಧಾನದಿಂದ ತಲೆ ಝಾಡಿಸುತ್ತಾ ಕಾಲೀಚರಣನ ಅಜ್ಞಾನಕ್ಕೆ ಮರುಗುತ್ತಾ ಪೇಟೆಗೆ ಹೋಗುತ್ತಾನೆ. ಮಧ್ಯಾನ್ಹ ಹನ್ನೆರಡು-ಒಂದು ಗಂಟೆಯ ಸುಮಾರಿಗೆ ತಾನು ಪೇಟೆಯಲ್ಲಿ ಕೊಂಡು ಬಂದ ಹಳೇ ಪುಸ್ತಕಗಳ ಹೊರೆಯೊಂದನ್ನು ಹೊತ್ತುಕೊಂಡು ಹಿಂತಿರುಗಿ ಬರುತ್ತಾನೆ. ಅಷ್ಟು ಹೊತ್ತಿಗೆ ಕಾಲೀಚರಣ ಅಡಿಗೆ ಮಾಡಿಟ್ಟು ಯಜಮಾನನಿಗಾಗಿ ಕಾದು ಕಾದು ಬೇಸತ್ತು ನಿದ್ದೆ ಹೋಗಿರುತ್ತಾನೆ. ಚೌಧುರಿಯು ಬಂದ ಶಬ್ದವನ್ನು ಕೇಳಿ ಗಡಿಬಿಡಿಯಿಂದ ಎದ್ದು ಊಟಕ್ಕೆ ಅಣಿ ಮಾಡುತ್ತಾನೆ. ಊಟವಾದ ನಂತರ ಚೌಧುರಿ ಬಾಬು ಒಂದು ಸಣ್ಣ ನಿದ್ರೆ ತೆಗೆದು ಏಳುವಷ್ಟರಲ್ಲಿ ಮಧ್ಯಾನ್ಹ ನಾಲ್ಕು ಗಂಟೆಯಾಗಿರುತ್ತದೆ. ಪುನಃ ಚಹ ಕುಡಿದು ಪೇಟೆಗೆ ಹೊರಡುತ್ತಾನೆ, ಹಳೇ ಪುಸ್ತಕಗಳ ಬೇಟೆಗೆ.

ಹಳೇ ಪುಸ್ತಕಗಳನ್ನು ಕೊಳ್ಳುವ ಈ ಹುಚ್ಚು ಚೌಧುರಿಗೆ ಅದೆಷ್ಟು ದಿನಗಳಿಂದ ಹಿಡಿದಿದೆ ಎಂಬುದು ಅವನಲ್ಲಿರುವ ಪುಸ್ತಕಗಳ ಸಂಖ್ಯೆಯಿಂದ ಊಹಿಸುವದು ಕಷ್ಟ. ಚೌಧುರಿಯ ಮನೆಯಲ್ಲಿರುವ ಪುಸ್ತಕಗಳೊಂದು ಅಪೂರ್ವ ಸಂಗ್ರಹ. ಎಲ್ಲವೂ ತಮ್ಮ ಬಾಲ್ಯ ಯೌವನಗಳಲ್ಲಿ ಅನೇಕ ಒಡೆಯರಿಗೆ ತಮ್ಮ ಸೇವೆ ಸಲ್ಲಿಸಿ ಅಸಂಖ್ಯಾತ ಅಪಘಾತಗಳಿಗೊಳಗಾಗಿ, ಜೀವನದಲ್ಲಿ ಬೇಸತ್ತು ಜೀರ್ಣವಾಗಿ ತಮ್ಮ ವಾರ್ಧಕ್ಯವನ್ನು ಶಾಂತಿಯಿಂದ ಚೌಧುರಿಯು ಕನ್ನಡಿ ಹಾಕಿದ ಕಪಾಟುಗಳಲ್ಲಿ ಇತರ ಸ್ನೇಹಿತರ ಜತೆಯಲ್ಲಿ ಕಳೆಯುತ್ತಿವೆ. ಪ್ರತಿಯೊಂದು ಪುಸ್ತಕದ ಇತಿಹಾಸವೂ ಅದರಷ್ಟೇ ದೊಡ್ಡದಾದ ಮತ್ತೊಂದು ಪುಸ್ತಕವನ್ನು ಬರೆಯುವಷ್ಟಾಗುತ್ತದೆ. ಸಾಹಿತ್ಯ, ವಿಜ್ಞಾನ, ಇತಿಹಾಸ, ವೇದಾಂತ, ರಾಜಕೀಯ ಸಂಬಂಧವಾದ ಅಸಂಖ್ಯಾತ ಪುಸ್ತಕಗಳು ಈ ಸಂಗ್ರಹದಲ್ಲಿವೆ. ಕೆಲವಕ್ಕೆಯೋ ಆದಿಯೇ ಇಲ್ಲ, ಮತ್ತೆ ಕೆಲವಕ್ಕೆ ಅಂತ್ಯವಿಲ್ಲ; ಕೆಲವು ಪುಸ್ತಕಗಳ ಮಧ್ಯೆ ಪತ್ತಾರು ಪುಟಗಳು ಇಲ್ಲವಾಗಿರುತ್ತವೆ. ಪುಸ್ತಕಗಳ ಆಕೃತಿಯಲ್ಲೂ ಅಷ್ಟೇ ಅನೇಕ ವೈವಿಧ್ಯಗಳು. ಅಂತೂ ಆ ಪುಸ್ತಕ ಸಂಗ್ರಹವನ್ನು ಒಂದೂ ದೇಶಕ್ಕೆ ಹೋಲಿಸಬಹುದು. ಅನೇಕ ಜಾತಿ, ರೂಪು, ವರ್ಣ, ಭಾಷೆ, ಸಂಸ್ಕೃತಿ ಗುಣ ಮತ್ತು ಸ್ವಭಾವ. ಒಟ್ಟಿನಲ್ಲಿ ಅದನ್ನು 'ಪುಸ್ತಕ ಭಾಂಢಾರ' ಎನ್ನುವದಕ್ಕಿಂತ 'ವಿವಿಧ ಪುಸ್ತಕ ಸಂಗ್ರಹಾಲಯ'ವೆಂದರೆ ಚೆನ್ನಾಗಿ ಒಪ್ಪುತ್ತಿತ್ತು.

ಚೌಧುರಿ ಬಾಬು ತಾನು ಸಂಗ್ರಹಿಸುವ ಈ ಪುಸ್ತಕಗಳನ್ನೆಲ್ಲ ಓದಿದ್ದಾನೆಯೇ? ಎಂಬ ಪ್ರಶ್ನೆಗೆ ಉತ್ತರ ಹೇಳುವದು ಕಷ್ಟ. ಬಹುಶಃ ಎಲ್ಲವನ್ನೂ ಓದಿರಲಾರನೆಂಬ ಉತ್ತರವೇ ಸಾಧ್ಯ. ಅಂದ ಮೇಲೆ ಇಷ್ಟೊಂದು ಪುಸ್ತಕಗಳನ್ನು ಸಂಗ್ರಹಿಸುವದರ ಅರ್ಥವೇನು? ಎಂಬ ಪ್ರಶ್ನೆಗೆ ಉತ್ತರ ಹೇಳಲು ಯಾರಿಗೂ ಸಾಧ್ಯವಿಲ್ಲ. ಬಹುಶಃ ಕಾಲೀಚರಣನಿಗೂ ಈ ಗೂಢವನ್ನು ಭೇದಿಸಲು ಸಾಧ್ಯವಿಲ್ಲೆಂದು ತೋರುತ್ತದೆ. ಚೌಧುರಿಯೇ ಸ್ವತಃ ಇದಕ್ಕೆ ತಕ್ಕ ಸಮಾಧಾನ ಹೇಳಲು ಸಮರ್ಥನೋ ಇಲ್ಲವೋ ಎಂಬುದೂ ಸಂಶಯ. ಪ್ರಪಂಚದಲ್ಲಿ ಅನೇಕರು ಅನೇಕ ವಿಧವಾದ ಕಾರ್ಯಗಳಲ್ಲಿ ನಿರತರಾಗಿರುತ್ತಾರೆ. ಇವುಗಳಲ್ಲಿ ಕೆಲವು ಪೂರ್ವಜನ್ಮದ ಸಂಸ್ಕಾರವಾಸನೆಯಿಂದ ಕೂಡಿದಂತಹವುಗಳು; ಕೆಲವನ್ನು ಕೇವಲ ಅಭ್ಯಾಸಬಲದಿಂದ ಮಾಡುತ್ತಾರೆ; ಕೆಲವನ್ನಂತೂ ಯಾವ ಗುರಿಯೂ ಇಲ್ಲದೆ ಆತ್ಮಸಂತೋಷಕ್ಕಾಗಿಯೇ ಮಾಡುತ್ತಾರೆ. ಚೌಧುರಿಯ ಪುಸ್ತಕಗಳನ್ನು ಸಂಗ್ರಹಿಸುವ ಈ ಹುಚ್ಚು ಈ ಕಡೆಯ ಜಾತಿಗೆ ಸೇರಿದುದೆಂದು ಹೇಳಬಹುದು.


ಚೌಧುರಿಯನ್ನು ಹಳೇ ಪುಸ್ತಕ ವ್ಯಾಪಾರಿಗಳು ಬಹಳ ಪ್ರೀತಿಸುತ್ತಾರೆ. ಇವನೊಬ್ಬನೇ ಅವರ ನಂಬಿಕೆಯಾದ ಗಿರಾಕಿ. ಇತರರು ಕೊಡುವ ಬೆಲೆಗಿಂತಲೂ ಚೌಧುರಿಯು ಕೊಡುವ ಬೆಲೆಯು ಒಂದಾಣೆ ಹೆಚ್ಚೇ, ಮತ್ತು ಸಾಲದ ವ್ಯಾಪಾರವೇ ಇಲ್ಲ. ಇವನು ಅಂಗಡಿಗೆ ಬಂದರೆ ಚಹ ಕೊಟ್ಟು ಆದರಿಸುವ ಕೆಲವು ವ್ಯಾಪಾರಿಗಳೂ ಇದ್ದಾರೆ. ಯಾವ ಪುಸ್ತಕವೇ ಅಂಗಡಿಗೆ ಹೊಸತಾಗಿ ಬರಲಿ ಮೊದಲು ಚೌಧುರಿಗೆ ತೋರಿಸುತ್ತಾರೆ. ಅವನು ಕೊಂಡುಕೊಳ್ಳದೆ ಬಿಟ್ಟಲ್ಲಿ, ಅದು ಬೇರೆಯವರಿಗೆ ದೊರೆಯಲು ಸಾಧ್ಯ.

ಚೌಧುರಿಯು ಪುಸ್ತಕಗಳನ್ನು ಕೊಳ್ಳುವದರಲ್ಲಿ ಇನ್ನೊಂದು ವೈಶಿಷ್ಟ್ಯ ಉಂಟು. ಹೊದಿಕೆಯನ್ನು ಹಾಕಿ ಸಿದ್ಧಪಡಿಸುವದು. ಪುಸ್ತಕದಲ್ಲಿ ಯಾವದಾದರೊಂದು ಚೀಟಿ ಹಳೇಪತ್ರ, ಇಲ್ಲವೆ ಮತ್ತೆ ಯಾವದಾದರೊಂದು ಕಾಗದ ಸಿಕ್ಕಿದಲ್ಲಿ ಅದನ್ನು ಮೊದಲಿನಿಂದ ಕೊನೆಯ ವರೆಗೆ ಓದಿ ಜೋಪಾನವಾಗಿಡುವದು. ಇದು 'ಮೊದಲನೇ ಹಂತ. ಎರಡನೆಯ ಹಂತವೆಂದರೆ ಆ ದಿನ ಕೊಂಡ ಪುಸ್ತಕಗಳ ಹೆಸರು, ಗ್ರಂಥಕರ್ತನ ಹೆಸರು, ಮೂಲಕ್ರಯ, ತಾನು ಕೊಟ್ಟ ಬೆಲೆ, ಹಿಂದಿನ ಮಾಲಕರು ಯಾರಾದರೂ ಇದ್ದರೆ ಅವರ ಹೆಸರು ಮೊದಲಾದವುಗಳನ್ನೆಲ್ಲಾ ಒಂದು ಪುಸ್ತಕದಲ್ಲಿ ಟಿಪ್ಪಣಿಮಾಡಿ ಪುಸ್ತಕಗಳನ್ನು ಕಪಾಟುಗಳಲ್ಲಿ ಸೇರಿಸುವದು. ನಂತರ ಪುಸ್ತಕಗಳಲ್ಲಿ ದೊರಕಿದ ಅವಶೇಷಗಳ ಟಿಪ್ಪಣಿ. ದೊರೆತ ಕಾಗದವು ಪೋಸ್ಟಕಾರ್ಡೇ, ಲಕ್ಕೋಟೆಯೇ, ಬರಿಯ ಕಾಗದದ ತುಣುಕೇ-ಯಾರು ಯಾರಿಗೆ ಯಾವ ಯಾವ ಸಂದರ್ಭದಲ್ಲಿ ಏತಕ್ಕಾಗಿ ಬರೆದರು ಮೊದಲಾದ ವಿಷಯಗಳನ್ನೆಲ್ಲಾ ಸಂಗ್ರಹಿಸಿ ಬೇರೊಂದು ಪುಸ್ತಕದಲ್ಲಿ ಟಿಪ್ಪಣಿ ಮಾಡಿ, ಎಂದಿನಂತೆ ಕಾಗದಗಳನ್ನು ಭದ್ರವಾಗಿಟ್ಟು, ನಂತರವೇ ರಾತ್ರಿಯ ಊಟ. ಕಾಲೀಚರಣನು ಸ್ವಲ್ಪ ಓದುಬರಹ ಬಲ್ಲವನಾಗಿದ್ದರೂ ನಂಬಿಗೆಯ ಸೇವಕನಾಗಿದ್ದರೂ ಚೌಧುರಿಯು ಅವನ ಸಹಾಯವನ್ನು ಈ ಕೆಲಸಗಳಿಗಾಗಿ ಕೋರುತ್ತಿರಲಿಲ್ಲ. ಈ ಮಹತ್ವದ ಕೆಲಸಗಳನ್ನು ಅವನು ಯಶಸ್ವಿಯಾಗಿ ನಿರ್ವಹಿಸುವನೆಂಬ ನಂಬಿಗೆ ಚೌಧುರಿಗೆ ಇಲ್ಲ. ಸಾಧಾರಣವಾಗಿ ಸೇವಕನ ವಿಷಯದಲ್ಲಿ ಪ್ರತಿಯೊಬ್ಬ ಯಜಮಾನನಿಗೂ ಇರುವಂತಹುದೇ. ಚೌಧುರಿಯ ಈ ಕಾರ್ಯಕ್ರಮವು ಕೆಲವು ವೇಳೆ ಮಧ್ಯರಾತ್ರಿಯು ಮೀರಿದರೂ ಮುಗಿಯುತ್ತಿರಲಿಲ್ಲ. ಇದರಿಂದ ಕಾಲೀಚರಣನಿಗೆ ಮೊದಮೊದಲು ತೊಂದರೆಯಾಗುತ್ತಿದ್ದರೂ ಈಚೆಗೆ ಅವನಿಗೆ ಅಭ್ಯಾಸವಾಗಿಬಿಟ್ಟಿತ್ತು. ಸಮಾಧಿಯಿಂದ ಬಹಿರ್ಮುಖನಾದ ಯೋಗಿಯಂತೆ ಚೌಧುರಿಯು ತನ್ನ ಕೆಲಸ ಮುಗಿದನಂತರ ಕೋಣೆಯಿಂದ ಹೊರಗೆ ಬರುತ್ತಾನೆ. ಕಾಲೀಚರಣನು ಊಟಕ್ಕೆ ಅಣಿಮಾಡಿಟ್ಟಿರುತ್ತಾನೆ. ಊಟವಾದ ನಂತರ ನಿದ್ರೆ, ಈ ರೀತಿಯಾದ ಯಂತ್ರಮಯವಾದ ಜೀವನವನ್ನು ಯಾವ ವಿಧವಾದ ವಿಕಾರಗಳನ್ನು ತೋರಿಸದೆ ನಡೆಸಿಕೊಂಡು ಬರುತ್ತಿದ್ದಾನೆ. ಜೀವನದಲ್ಲಿ ಬೇಸರವನ್ನಾಗಲೀ ಆನಂದವನ್ನಾಗಲೀ ದುಃಖವನ್ನಾಗಲೀ ಎಂದೂ ತೋರ್ಪಡಿಸಲಿಲ್ಲ.

ಆ ದಿನ ಕಾಲೀಚರಣನು ನೆರೆಹಳ್ಳಿಯಲ್ಲಿ ಬೇನೆಬಿದ್ದಿರುವ ತನ್ನ ಚಿಕ್ಕಮ್ಮನೊಬ್ಬಳನ್ನು ನೋಡಲು ಹಿಂದಿನ ರಾತ್ರಿಯೇ ಚೌಧುರಿಯಿಂದ ಅಪ್ಪಣೆ ಪಡೆದು ಬೆಳಗಿನಲ್ಲಿಯೇ ಎದ್ದು ಹೊರಟು ಹೋಗಿದ್ದ. ಚೌಧುರಿಯು ಹಾಸಿಗೆಯಿಂದ ಎದ್ದವನೇ ನೇರವಾಗಿ ಅಡಿಗೆಮನೆಗೆ ನಡೆದ ಬೂದಿಯಿಂದ ತುಂಬಿದ ಒಲೆ, ಅಸ್ತವ್ಯಸ್ತವಾಗಿ ಬಿದ್ದಿದ್ದ ಪಾತ್ರೆಗಳು, ತರಕಾರೀ ಚೂರುಗಳು, ಕಸ ಇವುಗಳಲ್ಲದೇ ಬೇರೇನೂ ಕಾಣಲಿಲ್ಲ. 'ಕಾಲೀಚರಣ' 'ಕಾಲೀಚರಣ' ಎಂದು ಎರಡು ಮೂರು ಬಾರಿ ಕೂಗಿದ. ಕೂಡಲೇ ಕಾಲೀಚರಣನು ನೆರೆಹಳ್ಳಿಗೆ ಹೊರಟು ಹೋಗಿರುವ ಸಂಗತಿ ಜ್ಞಾಪಕಕ್ಕೆ ಬಂದು ವ್ಯಥಿತನಾದ. ಅತೀವ ಕಷ್ಟದಿಂದ ಚಹ ತಯಾರಿಸಿಕೊಂಡು ಕುಡಿದ. ಚಹಪಾನವು ಎಂದಿನಂತೆ ಆನಂದದಾಯಕವಾಗಿರಲಿಲ್ಲ. ಕಾರಣ ಹರಟೆಗಾಗಿ ಕಾಲೀಚರಣನು ಇರಲಿಲ್ಲ. ಅಭ್ಯಾಸಬಲದಿಂದ ಚಹವನ್ನು ಹೀರಿ ಬಂದು ಹಾಸಿಗೆಯ ಮೇಲೆ ಬಿದ್ದುಕೊಂಡ. ತಲೆಯಲ್ಲಿ ಅನೇಕ ವಿಚಾರಗಳು ತುಂಬಿ ಕುಳುಕಾಡುತ್ತಿದ್ದವು. ತಾನು ಸರ್ವತಂತ್ರ ಸ್ವತಂತ್ರನೆಂದೂ ತನಗೆ ಯಾವ ವಿಧವಾದ ಜವಾಬ್ದಾರಿಯೂ ಇಲ್ಲವೆಂದೂ ತಿಳಿದಿದ್ದ ಚೌಧುರಿಗೆ ಇಂದು ತಾನು ಇತರರ ಸಹಾಯವಿಲ್ಲದೆ ಪ್ರಪಂಚದಲ್ಲಿ ಬಾಳಲಾರೆನೆಂಬ ಅರಿವಾಯಿತು. ಎಷ್ಟು ಹೊತ್ತು ಆ ರೀತಿಯಾಗಿ ಬಿದ್ದಿದ್ದನೋ ತಿಳಿಯದು. ಸುಮಾರು ಮೂರು ಗಂಟೆಯ ಹೊತ್ತಿಗೆ ಹಸಿವಾದಂತೆ ತೋರಲಾಗಿ ಹಾಸಿಗೆಯಿಂದ ಎದ್ದ. ಪುನಃ ಅಡಿಗೆಮನೆಗೆ ಹೋಗಿ ಅಡಿಗೆ ಮಾಡಿಕೊಳ್ಳಲು ಪ್ರಯತ್ನಪಟ್ಟು ವಿಫಲನಾದ. ತನ್ನ ಜೀವನದಲ್ಲಿ ಕಾಲೀಚರಣನ ಪಾತ್ರವೆಂತಹದೆಂಬುದರ ನಿಜವಾದ ತಿಳಿವಳಿಕೆ ಅಂದು ಚೌಧುರಿಗಾಯಿತು. ನಿಸ್ಸಹಾಯನಾಗಿ ಮನೆಯಿಂದ ಹೊರಬಿದ್ದು ಹೋಟೆಲೊಂದರಲ್ಲಿ ತನ್ನ ಊಟವನ್ನು ತೀರಿಸಿಕೊಂಡ. ಅಲ್ಲಿ ಹಸಿವನ್ನಡಗಿಸಿಕೊಂಡ. ಮನಸ್ಸೇನೊ ಕಲಕಿ ಹೋಗಿತ್ತು.

ಸುಮಾರು ಐದು ಘಂಟೆಯ ಸಮಯಕ್ಕೆ ಚೌಧುರಿಯ ಕಾಲುಗಳು ಅಭ್ಯಾಸ ಬಲದಿಂದ ಹಳೇ ಪುಸ್ತಕಗಳ ಅಂಗಡಿಗಳ ಕಡೆಗೆ ನಡೆಯತೊಡಗಿದವು. ಮೈಮೇಲೇನೂ ಎಚ್ಚರಿಕೆ ಇರಲಿಲ್ಲ 'ಬಾಬೂಜೀ' 'ಬಾಬೂಜೀ' ಎಂಬ ಕರೆಯೊಂದು ಅವನ ಕರ್ಣರಂಧ್ರವನ್ನು ಪ್ರವೇಶಿಸಿ ಅವನ ಸಮಾಧಿಭಂಗ ಮಾಡಿತು. ಹಳೇ ಪುಸ್ತಕಗಳ ವ್ಯಾಪಾರಿಯೊಬ್ಬನು ದೀಗ ಹಾಕಿದ ತನ್ನ ಅಂಗಡಿಯ ಬಳಿ ನಿಂತು ಕೂಗಿದ ಕರೆ ಅದು. ವ್ಯಾಪಾರಿಯು ಇನ್ನೂ ಅಂಗಡಿಯನ್ನು ತೆರೆದಿರಲಿಲ್ಲ ತೆರೆಯುವದರಲ್ಲಿದ್ದ ಅಷ್ಟರಲ್ಲಿಯೆ ಚೌಧುರಿಯನ್ನು ಕಂಡು ಅದೇ ದಿನವೇ ತನ್ನ ಬಳಿಗೆ ಬಂದಿದ್ದ ಒಂದು ಪುಸ್ತಕವನ್ನು ತೋರಿಸಲು ಕೂಗಿದ. ಚೌಧುರಿಯು ವ್ಯಾಪಾರಿಯ ಬಳಿಗೆ ಹೋದ. ಅವನು ನೀಡಿದ ಪುಸ್ತಕವನ್ನು ಕೈಯಲ್ಲಿ ತೆಗೆದುಕೊಂಡು ನೋಡಿದ. 'ಫ್ರ್ಯಾಂಕ್ ಹ್ಯಾರಿಸ್' (Frank Harris) ನಿಂದ ಬರೆಯಲ್ಪಟ್ಟಿದ್ದ 'ಲೈಫ್ ಎಂಡ್ ಲವ್, (Life and love) ಎಂಬ ಗ್ರಂಥದ ಮೂರನೆಯ ಭಾಗದ ಪ್ರತಿಯದು. ಅತ್ಯಂತ ಆದರದಿಂದ ಚೌಧುರಿಯು ಪುಸ್ತಕದ

-ಪುಟ ೧೬ಕ್ಕೆ



ಜ್ಯೋತಿಷಿ:-ಕೃಷ್ಣಶಾಸ್ತ್ರಿ ಘಡೆ, ಭವಿಷ್ಯಕಥನ ಕಾರ್ಯಾಲಯ, ಖಡೇಬಜಾರ ಬೆಳಗಾವಿ

ಜುಲೈ ತಾ. ೧೫ ರಿಂದ ೨೧ ರ ವರೆಗೆ

ಮೇಷ

ಪ್ರಕೃತಿ ಮತ್ತು ಸ್ತ್ರೀಸುಖ ಉತ್ತಮ. ಕೌಟುಂಬಿಕ ಉತ್ಕರ್ಷದ ಕೆಲ ಸಂಗತಿಗಳು ಸಂಭವಿಸುವವು. ಆದರೆ ಅವರ ಮುಂದಿನ ವ್ಯವಸ್ಥೆಯ ಬಗ್ಗೆ ನಿಮ್ಮಲ್ಲಿ ಬಹಳ ಮತಭೇದವುಂಟಾಗುವುದು. ಉದ್ಯೋಗದಲ್ಲಿ ಪ್ರಗತಿ ಮತ್ತು ಲಾಭ ಸಾಧಾರಣವೆ. ಆದರೆ ಪ್ರತಿಷ್ಠೆ ಬಹಳ ಹೆಚ್ಚು. ಮಿತ್ರತ್ವದಲ್ಲಿ ಕಿಂಚಿತ್ ವಿರೋಧ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉಭಯ ಪಕ್ಷಗಳಲ್ಲಿ ಸಮಾನ ಸ್ಥಿತಿ. ಅಲ್ಪ ಸ್ವಲ್ಪ ಅವಚಿತ ಧನ ಲಾಭ ಮನೆತನದ ಪ್ರತಿಷ್ಠೆ ಹೆಚ್ಚುವಂಥ ಕೆಲವೊಂದು ಮಹತ್ಕೃತ್ಯ. ಪ್ರವಾಸಕ್ಕಿಂತ ಭೆಟ್ಟಿ ಮತ್ತು ಪತ್ರವ್ಯವಹಾರ ಹೆಚ್ಚು ಅನುಕೂಲ. ಅಶ್ವಿನಿಯ ೪ನೆ ಮತ್ತು ಭರಣಿಯ ಮೊದಲನೆ ೩ ಚರಣಗಳಿಗೆ ತೊಂದರೆ ಕಡಮೆ. ತಾ. ೧೫,೧೬, ೧೭, ೧೮ ಅನುಕೂಲ.

ವೃಷಭ

ಎಲ್ಲರ ಪ್ರಕೃತಿಯು ಉತ್ತಮ. ಆದರೆ ಒಬ್ಬರಿಗೊಬ್ಬರ ಬಗ್ಗೆ ಮನಸ್ಸಿನಲ್ಲಿ ವಿಕೃತಿ ಹೆಚ್ಚುವುದು ಮತ್ತು ಹೆಚ್ಚು ಬೆಳೆಯಲು ಆಪ್ತರ ಮತ್ತು ನೆರೆಯವರ ಕೈವಾಡ ನಡೆಯುವದು. ಉದ್ಯೋಗದಲ್ಲಿ ಉತ್ತಮ ಪ್ರಗತಿ ಮತ್ತು ತುಂಬ ಲಾಭ. ಆದರೆ ಪ್ರತಿಷ್ಠೆಯ ಬಗ್ಗೆ ಲೋಕಮತ ಪ್ರತಿಕೂಲ. ಮಿತ್ರ ಸುಖ ಅನುಕೂಲ ಮೊದಲಿನ ಶತ್ರುಗಳೊಡನೆ ಸ್ನೇಹ ಇಲ್ಲವೆ ಆಪ್ತ ಸಂಬಂಧ ಕೂಡಿ ಬರುವದು. ಆಸ್ತಿಯಲ್ಲಿ ಸುಧಾರಣೆಯ ಕೆಲಸಗಳು. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಬಹಳ ಯಶಸ್ಸು. ದೂರಿನ ಮತ್ತು ಸುಖಕರ ಪ್ರವಾಸ. ಭೆಟ್ಟಿಗಿಂತ ಪತ್ರವ್ಯವಹಾರ ಅನುಕೂಲ. ಕೃತ್ತಿಕೆಯ ೪ನೆ ಮತ್ತು ರೋಹಿಣಿಯ ಮೊದಲನೆ ೩ ಚರಣಗಳಿಗೆ ತೊಂದರೆಯಿಂದಲೆ ಯಶಸ್ಸು. ತಾ. ೧೫, ೧೬, ೧೯, ೨೦ ಅನುಕೂಲ.

ಮಿಥುನ

ಪ್ರಕೃತಿ ಮತ್ತು ಸ್ತ್ರೀಸುಖ ಉತ್ತಮ. ಪ್ರಾಪಂಚಿಕ ಉತ್ಕರ್ಷಕ್ಕೆ ಉಚಿತವಾದ ಸಂಗತಿಗಳು. ಆದರೆ ನಿಮ್ಮಲ್ಲಿ ಕಲಹವೂ ಜೋರಿನಲ್ಲಿ ಉದ್ಯೋಗದಲ್ಲಿ ಪ್ರಗತಿ ಕಡಮೆಯೆ. ಆದರೆ ಪ್ರತಿಷ್ಠೆ ಮತ್ತು ಲಾಭ ತುಂಬ. ಸಮೀಪದ ಆಪ್ತರಲ್ಲಿ ಕೆಲ ಶುಭ ಪ್ರಸಂಗಗಳು. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಪೂರ್ಣ ಅನುಕೂಲತೆ. ಮಿತ್ರ ಸುಖ ಉತ್ತಮ. ಕೆಲ ಹೊಸ ವಸ್ತುಗಳ ಸಂಗ್ರಹ. ಪ್ರವಾಸಕ್ಕಿಂತ ಭೆಟ್ಟಿ ಮತ್ತು ಪತ್ರವ್ಯವಹಾರ ಹೆಚ್ಚು ಅನುಕೂಲ. ಮೃಗಾದ ೪ನೆ ಮತ್ತು ಆರಿದ್ರಾದ ಮೊದಲನೆ ೩ ಚರಣಗಳಿಗೆ ತೊಂದರೆಯಿಂದಲೆ ಯಶಸ್ಸು. ತಾ. ೧೭, ೧೮, ೧೯, ೨೦ ಅನುಕೂಲ.

ಕರ್ಕ

ಪ್ರಕೃತಿ ಮತ್ತು ಸ್ತ್ರೀಸುಖ ಉತ್ತಮ. ಆದರೆ ಉಳಿದ ಪ್ರಾಪಂಚಿಕ ವಿಷಯಗಳಲ್ಲಿ ನಿರರ್ಥಕ ತೊಂದರೆ ಮತ್ತು ಗೊಂದಲದ ಪ್ರಸಂಗ ಬಹಳ. ಪ್ರತಿಯೊಂದು ಕೆಲಸದಲ್ಲಿ ಅಲ್ಪಾಯಾಸದಿಂದ ಯಶಸ್ಸು. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಬಹಳ ಉತ್ತಮ ಆದರೆ ವೆಚ್ಚ ಪ್ರಮಾಣಮೀರಿ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉಭಯ ಪಕ್ಷಗಳಲ್ಲಿ ಸಮಾನ ಸ್ಥಿತಿ. ಪ್ರವಾಸಾದಿ ಕೆಲಸ ಸುಖಕರ. ಪುಷ್ಯದ ೪ನೆ ಮತ್ತು ಆಶ್ಲೇಷಾದ ಮೊದಲನೆ ೩ ಚರಣಗಳಿಗೆ ತೊಂದರೆ ಕಡಮೆ. ತಾ ೧೫, ೧೬, ೨೦, ೨೧ ಅನುಕೂಲ.

ಸಿಂಹ

ಪ್ರಕೃತಿ ಉತ್ತಮ. ಆದರೆ ಪ್ರಾಪಂಚಿಕ ಸುಖದಲ್ಲಿ ಮೇಲಿಂದ ಮೇಲೆ ಹೆಂಡತಿಯೊಡನೆ ಆಗುವ ಮತಭೇದದಿಂದ ದೊಡ್ಡ ಮನೋಭಂಗ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಉತ್ತಮ. ಕಿಂಚಿತ್ ತೊಂದರೆಯಿಂದ ಮತ್ತು ವೇಳೆಯಿಂದ ಆದರೆ ತುಂಬ ಲಾಭ. ಬಹಳ ಜೋರದ ವೆಚ್ಚಕ್ಕಾಗಿ ಚಿರಡಿಗೇಳುವ ಅಂಜಿಕೆ. ಆಪ್ತರಿಂದ ನಿರರ್ಥಕ ಛಲನೆ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಮಿತ್ರ ಇಲ್ಲವೆ ಸಹಾಯಕರ್ತರ ಹಲಗರ್ಜಿತನದಿಂದ ಇಲ್ಲವೆ ಫಿತೂರಿಯಿಂದ ಅಪಯಶಸ್ಸಿನ ಅಂಜಿಕೆ. ಇಲ್ಲವೆ ದೈವೀ ಆರಾಧನೆಯ ಕೃತ್ಯಗಳು. ಪ್ರವಾಸ ಮತ್ತು ಭೆಟ್ಟಿ ಪತ್ರವ್ಯವಹಾರಕ್ಕಿಂತ ಅನುಕೂಲ. ಮಘಾದ ೪ನೇ ಮತ್ತು ಪೂರ್ವಾದ ಮೊದಲನೆ ೩ ಚರಣಗಳಿಗೆ ತೊಂದರೆ ಕಡಮೆ. ತಾ. ೧೭, ೧೮, ೨೧ ಅನುಕೂಲ.

ಕನ್ಯಾ

ಪ್ರಕೃತಿ ಉತ್ತಮ. ಸ್ತ್ರೀಸುಖ ಅನುಕೂಲ ಆದರೆ ಉಳಿದ ವಿಷಯಗಳಲ್ಲಿ ಹೆಂಡತಿಗೂಡ ಮತ್ತು ಅವರ ಬಂಧುವರ್ಗದವರಗೂಡ ಮೇಲಿಂದ ಮೇಲೆ ವಿರೋಧ ವೆಚ್ಚ ಹೆಚ್ಚು. ಆದರೆ ಅದರಲ್ಲಿಯ ಹೇತು ಅಸಾಧ್ಯ. ಉದ್ಯೋಗದಲ್ಲಿ ಪ್ರಗತಿ ಹಿನ್ನೆಟ್ಟುವ ಭೀತಿ. ಆದರೆ ಪ್ರತಿಷ್ಠೆ ಮತ್ತು ಲಾಭ ಒಟ್ಟಾರೆ ಅನುಕೂಲ. ಯಾವದೊಂದು ಸರಕಾರೀ ಬೋಜಾ ಮೇಲೆ ಬರುವ ಅಂಜಿಕೆ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ವೆಚ್ಚ ಮತ್ತು ತೊಂದರೆ ಬಹಳ ಆದರೆ ಕೊನೆಗೆ ಅನುಕೂಲತೆ ಮಿತ್ರಸುಖ ಅನುಕೂಲ. ಪ್ರವಾಸಕ್ಕಿಂತ ಭೆಟ್ಟಿ ಮತ್ತು ಪತ್ರವ್ಯವಹಾರ ಹೆಚ್ಚು ತೊಂದರೆಯದು. ಉತ್ತರಾದ ೪ನೆ ಮತ್ತು ಹಸ್ತಾದ ಮೊದಲನೆ ೩ ಚರಣಗಳಿಗೆ ತೊಂದರೆ ಹೆಚ್ಚು. ತಾ. ೧೫, ೧೬, ೨೦ ಅನುಕೂಲ.

ತುಲಾ

ಪ್ರಕೃತಿ ಉತ್ತಮ. ಸ್ತ್ರೀ ಸುಖ ಅನುಕೂಲ. ಆದರೆ ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸಮಾಧಾನ ಕಡಿಮೆಯೆ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಬಹಳ ಉತ್ತಮ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉಭಯ ಪಕ್ಷಗಳಲ್ಲಿ ಸಮಾನ ಸ್ಥಿತಿ. ಇಲ್ಲವೆ ಒಡಂಬಡಿಕೆಯ ಸಂಭವ. ಕೆಲ ಪುಣ್ಯ ಕೃತ್ಯಗಳು. ಸ್ವಪ್ನ ಬಹಳ ಭಾವೀಸೂಚಕ. ಪ್ರವಾಸಾದಿ ಕೆಲಸ ಹಿತದ್ದು. ಚಿತ್ರಾದ ೪ ನೆ ಮತ್ತು ಸ್ವಾತಿಯ ಮೊದಲನೆ ೩ ಚರಣಗಳಿಗೆ ತೊಂದರೆಯಿಂದಲೆ ಯಶಸ್ಸು. ತಾ, ೧೬, ೧೭, ೧೮ ಅನುಕೂಲ.

ವೃಶ್ಚಿಕ

ಪ್ರಕೃತಿ ಉತ್ತಮ. ರತಿಸುಖ ಅನುಕೂಲ. ಆದರೆ ಉಳಿದ ವಿಷಯಗಳಲ್ಲಿ ಹೆಂಡತಿಗೂಡ ಬಹಳ ಮತಭೇದ ಮಕ್ಕಳಲ್ಲಿ ಸ್ವಲ್ಪ ಶುಭ ಮತ್ತು ಉನ್ನತಿಯ ಸಂಗತಿಗಳು. ಉದ್ಯೋಗದಲ್ಲಿ ಇಲ್ಲವೆ ನೋಕರಿಯಲ್ಲಿ ಆಶ್ರಯದಾತರ ಇಲ್ಲವೆ ವರಿಷ್ಠರು ಸಿಟ್ಟಾಗುವ ಸಂಭವ. ಆದರೆ ಪ್ರಗತಿ ಲಾಭ ಮತ್ತು ಅಪಾರ ಪ್ರತಿಷ್ಠೆಯೂ ಉತ್ತಮವೆ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ವಿಜಯ. ಮಿತ್ರ ಸುಖ ಉತ್ತಮ. ದೂರಿನ ಮತ್ತು ಸುಖಕರ ಪ್ರವಾಸ ಭೆಟ್ಟಿಗಿಂತ ಪತ್ರವ್ಯವಹಾರ ಹೆಚ್ಚು ಅನುಕೂಲ. ಅನುರಾಧೆಯ ೪ ನೆ ಮತ್ತು ಜ್ಯೇಷ್ಠಾದ ೧ ನೆ ೩ ನೇ ಚರಣಗಳಿಗೆ ತೊಂದರೆ ಕಡಿಮೆ ತಾ. ೧೫, ೧೬, ೧೯, ೨೦ ಅನುಕೂಲ.

ಧನು

ಪ್ರಕೃತಿ ಉತ್ತಮ. ಆದರೆ ಹೆಂಡತಿಗೆ ಅಲ್ಪ ಸ್ವಲ್ಪ ಕಾಯಿಲೆಯಾಗುವ ಅಂಜಿಕೆ. ವಿಷಯಗಳಲ್ಲಿ ಪ್ರಾಪಂಚಿಕ ಸುಖ ಬಹಳ ಉತ್ತಮ. ಉದ್ಯೋಗದಲ್ಲಿ ಪ್ರಗತಿ ಬಹಳ ಹೆಚ್ಚು. ಲಾಭ ತುಂಬ. ಆದರೆ ಪ್ರತಿಷ್ಠೆ ಬಹಳ ಕಡಿಮೆ ಮಿತ್ರಸುಖ ಉತ್ತಮ ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಶತ್ರುಗಳ ಪರಾಭವ ಮತ್ತು ಸ್ವತಃಕ್ಕೆ ಸಿಕ್ಕುವ ಯಶಸ್ಸಿನ ಬೆಲೆಯ ಮಾನದಿಂದ ಕಡಿಮೆ ಪ್ರವಾಸ ಉತ್ತಮ. ಪತ್ರವ್ಯವಹಾರ ತೊಂದರೆಯದು ಆದರೆ ಭೆಟ್ಟಿಯ ಕೆಲಸ ಬಹಳ ವಿಚಾರವಿನಿಮಯದ ನಂತರ ಮನಸಿನಂತೆ. ಮೂಲಾದ ೪ ನೆ ಮತ್ತು ಪೂರ್ವಾಷಾಢಾದ ಮೊದಲನೆ ೩ ಚರಣಗಳಿಗೆ ತೊಂದರೆ ಕಡಿಮೆ. ತಾ. ೧೫, ೧೬, ೧೭. ೧೮ ಅನುಕೂಲ.

ಮಕರ

ಪ್ರಕೃತಿ ಮತ್ತು ಪ್ರಾಪಂಚಿಕ ಸುಖ ಬಹಳ. ಉತ್ತಮ. ಪ್ರಿಯ ಜನರ ಸಹವಾಸ ಉದ್ಯೋಗದಲ್ಲಿ ಪ್ರಗತಿ ಉತ್ತಮ. ಪ್ರತಿಷ್ಠೆ ಕುಂದುವದು, ಆದರೆ ಲಾಭ ಉತ್ತಮ. ಅವಚಿತ ಲಾಭದ ಸಂಭವವೂ ಇದೆ. ಮಕ್ಕಳಲ್ಲಿ ಕೆಲ ವಿಷಯಗಳಲ್ಲಿ ಅಸಡ್ಡೆ ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಬಹಳ ಅನುಕೂಲತೆ. ಅಲೌಕಿಕ ವಿಚಾರಗರ ಪ್ರಾಬಲ್ಯ ಮಾತಿನಲ್ಲಿ ಇಲ್ಲವೆ ಕೃತಿಯಲ್ಲಿ ಬಹಳ ಕಂಡುಬರುವದು. ಪ್ರವಾಸ ಮತ್ತು ಪತ್ರವ್ಯವಹಾರ ಭೆಟ್ಟಿಗಿಂತ ಹೆಚ್ಚು ಅನುಕೂಲ ಉತ್ತರಾಷಾಢಾದ ೪ ನೆ ಮತ್ತು ಶ್ರವಣಾದ ಮೊದಲನೆ ೩ ಚರಣಗಳಿಗೆ ತೊಂದರೆಯಿಂದಲೆ ಯಶಸ್ಸು. ತಾ. ೧೫, ೧೬, ೧೯, ೨೦ ಅನುಕೂಲ.

ಈ ಪತ್ರಿಕೆಯು ಹುಬ್ಬಳ್ಳಿಯ ಸಂಯುಕ್ತ ಕರ್ನಾಟಕ ಮುದ್ರಣಾಲಯದಲ್ಲಿ ರಾಷ್ಟ್ರೀಯ ವಾಙ್ಮಯ ಪ್ರಕಾಶನ ಟ್ರಸ್ಟಿನ ಪರವಾಗಿ ಹ. ರಾ ಮೋಹರೆಯವರಿಂದ ಮುದ್ರಿತ ಪ್ರಕಟವಾಯಿತು

ಕುಂಭ

ಪ್ರಕೃತಿಗೆ ಕಿರುಕುಳ್ಳಕ್ಲೇಶ ಸ್ತ್ರೀ ಸುಖ ಅನುಕೂಲ ಆದರೆ ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಕಡಿಮೆ ದೆರೆಯುವದರಿಂದ ತೊಂದರೆ ಮತ್ತು ವಾಹನಗಳಿಂದ ಹಾನಿ ಇಲ್ಲವೆ ಅಪಘಾತದ ಅಂಜಿಕೆ ಮತ್ತು ಮನೆಯಲ್ಲಿಯ ನೋಕರರಿಂದ ಮೋಸದ ಅಂಜಿಕೆ ಉದ್ಯೋಗದಲ್ಲಿ ಪ್ರಗತಿ ಉತ್ತಮ. ಬಹಳ ದೊಡ್ಡ ಪ್ರತಿಷ್ಠೆ ಮತ್ತು ತುಂಬ ಲಾಭ. ಮಿತ್ರಸುಖ ಉತ್ತಮ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಅನುಕೂಲತೆ ಹೆಚ್ಚು. ಬುದ್ಧಿಯಲ್ಲಿ ವಿಷ ವಿಚಾರ ಹೆಚ್ಚು. ಪತ್ರವ್ಯವಹಾರಕ್ಕಿಂತ ಭೆಟ್ಟಿ ಮತ್ತು ಪ್ರವಾಸ ಉತ್ತಮ ಧನಿಷ್ಠೆಯ ೪ ನೇ ಮತ್ತು ಶತತಾರಿಕೆಯ ಮೊದಲನೆ ೩ ಚರಣಗಳಿಗೆ ತೊಂದರೆ ಕಡಮೆ. ತಾ. ೧೭, ೧೮, ೧೯, ೨೦ ಅನುಕೂಲ.

ಮೀನ

ಪ್ರಕೃತಿ ಉತ್ತಮ ಸ್ತ್ರೀ ಸುಖ ಅನುಕೂಲ. ಆದರೆ ಪರಸ್ತ್ರೀ ಬಗ್ಗೆ ದೊಡ್ಡ ಆಸೆ. ಎಲ್ಲ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಸಾಧಾರಣವೆ. ಉದ್ಯೋಗದಲ್ಲಿ ಪ್ರಗತಿ ಮತ್ತಷ್ಟು ತೊಂದರೆಯಿಂದ ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಒಳ್ಳೆ ಯಶಸ್ಸು. ಬಹುತರ ಕೆಲಸದಲ್ಲಿ ಅಡ್ಡ ಇಲ್ಲವೆ ಅಪಪಾದಿತ ಮಾರ್ಗದಿಂದ ಹೋಗುವ ಬುದ್ಧಿ. ಪ್ರವಾಸಕ್ಕಿಂತ ಭೆಟ್ಟಿ ಮತ್ತು ಪತ್ರವ್ಯವಹಾರ ಹೆಚ್ಚು ಅನುಕೂಲ. ಉತ್ತರಾಭಾದ್ರಪದದ ೪ ನೇ ಮತ್ತು ರೇವತಿಯ ಮೊದಲನೆ ೩ ಚರಣಗಳಿಗೆ ತೊಂದರೆ ಕಡಿಮೆ. ತಾ. ೧೫, ೧೬, ೧೯, ೨೦ ಅನುಕೂಲ.

ನಾರದ ಕತೆ

(೧೫ನೇ ಪುಟದಿಂದ)

ಸ್ವಾಗತವನ್ನು ಬಯಸಿದ. ಆ ಗ್ರಂಥದ ಇತರ ಏಳು ಭಾಗಗಳೂ ಅವನಲ್ಲಿದ್ದವು. ಮೂರನೆಯ ಭಾಗವನ್ನು ಮಾತ್ರ ತನ್ನ ಗೆಳೆಯನೊಬ್ಬನಿಗೆ ಓದಲು ಕೊಟ್ಟಿದ್ದ. ಪುಸ್ತಕವು ಅವನ ಬಳಿ ಹಿಂತಿರುಗಿ ಬಂದಿರಲಿಲ್ಲ. ಅಷ್ಟೇ ಅಲ್ಲ; ಆ ಸ್ನೇಹಿತನ ಸಮಾಚಾರವೂ ಬಹಳ ಕಾಲದಿಂದ ತಿಳಿದಿರಲಿಲ್ಲ. ಪುಸ್ತಕವು ತನ್ನ ಬಳಿ ಬರುವದು ಸಾಧ್ಯವಿಲ್ಲವೆಂಬ ನಂಬಿಕೆಯಿಂದ ಈ ಪ್ರತಿಯನ್ನು ಕೊಳ್ಳಲು ಮುಂದಾದ. ಅಂಗಡಿಯವನು ಹೇಳಿದ ಬೆಲೆಯನ್ನು ಕೊಟ್ಟು ಪುಸ್ತಕವನ್ನು ಕೊಂಡು ಹೋದ.

ಚೌಧುರಿಯು ಮನೆಗೆ ತಲಪಿದಾಗ ರಾತ್ರಿ ಸುಮಾರು ಹತ್ತು ಘಂಟೆಯಾಗಿತ್ತು. ಮಧ್ಯಾಹ್ನ ಹೊತ್ತಾಗಿ ಊಟ ಮಾಡಿದುದರಿಂದ ಹಸಿವಿರಲಿಲ್ಲ. ಮಂಚದ ಮೇಲೆ ಬಿದ್ದುಕೊಂಡು ಆ ದಿನ ಕೊಂಡ ಪುಸ್ತಕವನ್ನು ತಿರುವಿಹಾಕಲು ತೊಡಗಿದ. ಪುಸ್ತಕವು ಈ ಹಿಂದೆ ತನ್ನಲ್ಲಿದ್ದು ಸ್ನೇಹಿತನಿಗೆ ಎರವಲಾಗಿ ಕೊಟ್ಟದ್ದೇ ಎಂದು ತಿಳಿಯಲು ತುಂಬಾ ಆಶ್ಚರ್ಯವಾಯಿತು. ಒಂದೊಂದೇ ಪುಟವನ್ನು ತಿರುವಿ ಹಾಕುತ್ತಿದ್ದಂತೆ ಮಧ್ಯದಲ್ಲಿ ಒಂದು ಕಾಗದವು ಕಣ್ಣಿಗೆ ಬಿತ್ತು. ಸ್ವಾಭಾವಿಕವಾಗಿ ಅದನ್ನು ಓದತೊಡಗಿದ. ಓದುತ್ತಿದ್ದಂತೆ ದೇಹವೆಲ್ಲಾ ನಡುಗತೊಡಗಿತು. ಮೂಗಿನಿಂದ ಬಿಸಿಯುಸಿರು ಹೊರಡತೊಡಗಿತು. ಕಾಗದವನ್ನು ಹರಿದೆಸೆದು ಹಾಸಿಗೆಯ ಮೇಲೆದ್ದು ಕುಳಿತ. ಚೌಧುರಿಯ ಈ ಮನೋವಿಕಾರಕ್ಕೆ ಕಾರಣವಾದ ಆ ಕಾಗದವು ತನ್ನ ಆದರ್ಶ ಪ್ರೇಮರಾಜ್ಯದ ಉಪಾಸನಾದೇವಿ ಇಂದುಬಾಲಾಳಿಂದ ಪುಸ್ತಕವನ್ನು ಎರವಲಾಗಿ ಒಯ್ದಿದ್ದ ಸ್ನೇಹಿತನಿಗೆ ಅನೇಕ ವರ್ಷಗಳ ಹಿಂದೆ ಬರೆಯಲ್ಪಟ್ಟ ಪ್ರೇಮಪತ್ರವಾಗಿತ್ತು. ಬುದ್ಧಿಶೂನ್ಯನಾದ ಚೌಧುರಿಯು, ತನ್ನ ಪುಸ್ತಕ ಭಾಂಡಾರಕ್ಕೆ ಬೆಂಕಿ ಹಚ್ಚಿ ಮನೆಯಿಂದ ಹೊರಬಿದ್ದು ಅರ್ಧರಾತ್ರಿಯ ಕತ್ತಲಲ್ಲಿ ಲೀನನಾದ.

['ಕಸ್ತೂರಿ' (ಜಬಲಪುರ ಕರ್ನಾಟಕ ಸಂಘದ ಮಾಸಪತ್ರಿಕೆ) ಯ ೧೯೪೫ ನೇ ಅಕ್ಟೋಬರ—ನಾಡಹಬ್ಬದ ವಿಶೇಷ ಸಂಚಿಕೆಯಲ್ಲಿ ಪ್ರಕಟಿತವಾದುದು]

—ಸಂ